ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Tuesday, 30th April 1074—*Vaishaka* 10, 1896, *S.E.*

The House met in the Assembly Chamber, Vidhana Soudha, at Nine of the Clock.

Madam SPEAKER (Smt. K. S. Nagarathnamma) in the Chair.

OBITUARY REFERENCE

re: *demise of Sri L. C. Paius Ex-Member of L. A.*

Madam SPEAKER.—I regret to make a reference to the demise of Sri L. C. Paius, former member of Legislative Assembly on 22nd March 1974. Sri L.C. Paius was a member during 1956-57 representing Mangalore Constituency.

I request the members to stand in silence for two minutes as a mark of respect to the deceased.

[*The members stood in silence for two minutes*]

KARNATAKA SALES TAX (AMENDMENT) BILL, 1974

Motion to Consider

Sri M. Y. GHORPADE (Minister for Finance and Information).—I move:

> "That the Karnataka Sales Tax (Amendment) Bill, 1974, be taken into consideration."

Madam SPEAKER.—Motion moved:

"That the Karnataka Sales Tax (Amendment) Bill, 1974, be taken into consideration."

† Sri M. Y GHORPADE.—This Bill is in pursuanee of the changes proposed in the Sales Tax as detailed in the budget. There is nothing new in it. What was proposed in the budget has to come before this House and it has to be enact d. Th re is already a Bill called the Provisional Collection of Taxes Bill which enables the Government to collect taxes for a particular period which comes to an end before May. Before the expiry of that period we have to pass this Act.

ಶ್ರೀ ಕಾಗೋಡು ತಿಮ್ಮಪ್ಪ.—ಕೆಲವು ವಿಷಯಗಳನ್ನು ಸ್ಪಷ್ಟಪಡಿಸಬೇಕು. 59 ಐಟಂಸ್ ಮೇಲೆ ತೆರಿಗೆ ಹಾಕುವುದಕ್ಕೆ ಹೊರಟಿದ್ದಾರೆ. ಜನರಲ್ ಬಡ್ಜೆಟ್ಟಿನಲ್ಲಿ ಪ್ರಸ್ತಾವಿಕವಾಗಿ ಹೇಳಿದ್ದೀರಿ ಒಟ್ಟು ಎಲ್ಲಾ ಭಾಗದಿಂದ ಎಷ್ಟು ತೆರಿಗೆ ಬರಬಹುದು ಎಂಬ ನಿರೀಕ್ಷಣೆ ಇಟ್ಟುಕೊಂಡು ಹೇಳಿದ್ದೀರಿ. ಆದುದರಿಂದ ಪ್ರತಿಯೊಂದು ಬಾಬಿನಿಂದ ಎಷ್ಟು ಆದಾಯ ಬರುತ್ತದೆ ಎಂದು ಸೂಕ್ಷ್ಮವಾಗಿ ಪರಿಚಯ ಕೊಡಬೇಕು.

ಶ್ರೀ ಎಂ. ವೈ. ಘೋರ್ಪಡೆ — ಸಾಕಷ್ಟು ಐಟಂಗಳು ಇವೆ. ಐಟಂವೈಸ್ ಓದಿ ಹೇಳಿ ಎಷ್ಟು ಆದಾಯ ನಿರೀಕ್ಷಣೆ ಮಾಡಿದೆ ಎಂದು ಹೇಳುವುದು ಬಹಳ ಉದ್ದವಾಗುತ್ತದೆ. ಐಟಮ್ಸ್‌ನಲ್ಲಿ ಏನಾದರೂ ತಮಗೆ ಅನುಮಾನ ಇದ್ದರೆ, ಸಲಹೆ ಕೊಡಬೇಕಾದರೆ, ಐಟಮ್ಸ್ ಮೇಲೆ ಮಾತನಾಡಿದರೆ ಉತ್ತರ ಕೇಳಬಹುದು. ಐಟಮ್ಸ್ ಪ್ರಕಾರ ಹೇಳಿಬಿಟ್ಟು ಯಾವ ಯಾವ ಐಟಮ್ಸ್ ಆದಾಯ ಬರುತ್ತದೆ ಉದ್ದಕ್ಕೆ ಹೇಳುತ್ತಾ ಹೋಗುವುದರಿಂದ ಸಭೆಗೆ ಏನು ಪ್ರಯೋಜನವಾಗುವುದಿಲ್ಲ. I hove got the list, I will give you. No purpose is serve in recounting the details on eve y item now. ಬೇಕಾದರೆ ಅದನ್ನು ಕೊಡುತ್ತೇನೆ.

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿದ ಬಿಲ್ಲನ್ನು ವಿರೋಧ ಮಾಡಿ ಎರಡು ಮಾತನ್ನು ಹೇಳುತ್ತೇನೆ. ಹೊಸದಾಗಿ 1974–75 ನೇ ಸಾಲಿಗೆ ಆಯವ್ಯಯಕ್ಕೆ ಬೇಕಾದಂಥ ಹಣವನ್ನು ದೊರಕಿಸಿಕೊಳ್ಳುವ ಉದ್ದೇಶದಿಂದ ಸುಮಾರು 59 ಪದಾರ್ಥಗಳ ಮೇಲೆ ಹೊಸ ತೆರಿಗೆಯ ಹಣವನ್ನು ಏರಿಸುವ ಅವಕಾಶಗಳನ್ನು ಕಲ್ಪಿಸಿಕೊಂಡು ಹೆಚ್ಚು ಹಣವನ್ನು ರಾಜ್ಯ ಭಂಡಾರಕ್ಕೆ ಒದಗಿಸಿಕೊಂಡಿದ್ದಾರೆ. ಅದರ ಅಂಶವಾಗಿ ಈ ಒಂದು ಮಸೂದೆಯನ್ನು ತಂದು ಈ ಸದನದ ಅನುಮತಿಯನ್ನು ಕೋರಿದ್ದಾರೆ. ಅವರು ಬಡ್ಜೆಟ್ಟಿನಲ್ಲಿ ಹೇಳಿದ್ದಾಗ, ಏನೆಂದರೆ ಈ 59 ಐಟಂಗಳಿಂದ ಏಳೂವರೆ ಕೋಟಿ ರೂಪಾಯಿಗಳ ಸೇಲ್ಸ್ ಟ್ಯಾಕ್ಸ್ ಬರಬಹುದೆಂದು ನಿರೀಕ್ಷಣೆ ಮಾಡಿದ್ದೇವೆಂದು. ಅಷ್ಟು ಹಣ ಬರುವುದಿಲ್ಲ ಎನ್ನತಕ್ಕಂಥ ಆಕ್ಷೇಪಣೆ ನನ್ನದು ಅಲ್ಲ. ನಾನು ನಿಮ್ಮನ್ನು ಇವತ್ತು ಕೇಳುತ್ತಿರುವುದು ಏನೆಂದರೆ ಯಾವ ಆಧಾರದ ಮೇಲೆ ತೆರಿಗೆಯನ್ನು ಹಾಕಿದ್ದೀರಿ ? ಏತಕ್ಕೆ 55 ಐಟಂಗಳನ್ನೇ ಆರಿಸಿಕೊಂಡಿದ್ದೀರಿ ? ಇವತ್ತು ಬೆಲೆಗಳು ಏರುತ್ತಿವೆ, ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಇವತ್ತು ಜೀವನಾವಶ್ಯಕ ವಸ್ತುಗಳ ಬೆಲೆಗಳು, ಅದರಲ್ಲೂ ಮುಖ್ಯವಾಗಿ ಇವತ್ತು ಧಾರಣೆವಾಸಿಗಳು ಜಾಸ್ತಿ ಆದುದರಿಂದ ಸಾಮಾನ್ಯ ಜನರಿಗೆ ಭಾರವಾಗಿ ಕಾಣುತ್ತಿದೆ. ಪ್ರತಿ ವರ್ಷವೂ ಕೂಡ ನೀವು ಹಾಕತಕ್ಕಂಥ ತೆರಿಗೆಯೆಲ್ಲಾ ಸಾಮಾನ್ಯ ಜನರ ಮೇಲೆ ಹಾಕುತ್ತಿದ್ದೀರೇ ವಿನಹಃ ಇವತ್ತು ಶ್ರೀಮಂತ ವರ್ಗದ ಮೇಲೆ, ಕೊಡಲು ಶಕ್ತಿ ಇರುವಂಥವರ ಮೇಲೆ ಹಾಕುತ್ತಾ ಇಲ್ಲ. ನೀವು ತೆರಿಗೆಯನ್ನು ಹೆಚ್ಚು ಮಾಡುತ್ತಾ ಹೋದಂತೆಲ್ಲಾ ಸಾಮಾನ್ಯ ಜನರ ಮೇಲೆ ಹೆಚ್ಚು ಭಾರವನ್ನು ಹಾಕದೇ, ಶಕ್ತಿ ಇರುವಂಥವರ ಮೇಲೆ, ಬಂಡವಾಳಶಾಹಿ, ವರ್ಗದ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕತಕ್ಕಂಥ ಪ್ರಯತ್ನವನ್ನು ಮಾಡುತ್ತಾ ಹೋಗಬೇಕು. ಆ ದೃಷ್ಟಿಯಿಂದ ನೀವು ಏನು 50 ಬಾಬುಗಳನ್ನು ಆರಿಸಿಕೊಂಡಿದ್ದೀರಿ, ಅವನ್ನು ಆರಿಸಿಕೊಳ್ಳುವುದಕ್ಕೆ ಯಾವ ಅಳತೆಗೋಲನ್ನು ಇಟ್ಟುಕೊಂಡಿದ್ದೀರಿ ಎನ್ನತಕ್ಕಂಥದ್ದನ್ನು ಹೇಳಬೇಕು. ಇವತ್ತು ನಾನು ಹೇಳುತ್ತೇನೆ, ತಾವು ಚುನಾಯಿಸಿರತಕ್ಕಂಥ 59 ಐಟಂಗಳು ಏನು ಇವೆ ಅವು ಸಮರ್ಪಕವಾಗಿಲ್ಲ. ಯಾವ ಬಾಬುಗಳ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಬೇಕಾಗಿತ್ತೋ ಅಂಥ ಬಾಬುಗಳ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕದೇ, ಕೆಲವು ಬಾಬುಗಳ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಿರುವುದರಿಂದ ಸಾಮಾನ್ಯ ಜನರ ಮೇಲೆ ಹೊರೆ ಬೀಳುತ್ತದೆ. ತೆರಿಗೆ ದರವನ್ನು ಹೊಸದಾಗಿ ಏರಿಸುವ ಕಾಲದಲ್ಲಿ ಸಾಕಷ್ಟು ವಿಚಕ್ಷಣೆಯಿಂದ ಪರಿಶೀಲನೆ ಮಾಡದೇ ಕೆಲವು ಬಾಬುಗಳ ಮೇಲೆ ಈ ತೆರಿಗೆಯ ದರವನ್ನು ಏರಿಸುವುದಕ್ಕೆ ಹೊರಟಿದ್ದೀರಿ, ಇದು ಸಾಧು

† Indicates that the remarks or speeches have not been revised by the member concerned.

ವಾದದ್ದು ಅಲ್ಲ ಎಂದು ಸರ್ಕಾರದ ಮೇಲೆ ನಾನು ಮಾಡುವ ಕಟು ಟೀಕೆಯಾಗಿದೆ. ಇದನ್ನು ಆ ದೃಷ್ಟಿಯಿಂದ ಮನಗಾಣಬೇಕೆಂದು ಹೇಳುತ್ತೇನೆ. ಈಗ All arms, including guns, rifles, revolvers, pistols ಮೇಲೆ ಶೇಕಡ 14 ರಷ್ಟು ಇದ್ದಂಥ ಟ್ಯಾಕ್ಸನ್ನು 15 ರಷ್ಟು ಜಾಸ್ತಿ ಮಾಡಿದ್ದೀರಿ. ಸ್ವಾಮಿ ಇವತ್ತು ಫಸಲು ಸಂರಕ್ಷಣೆ ಮಾಡಲು ರೈತರು ಉಪಯೋಗಿಸುವ ಬಂದೂಕಿನ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಬೇಡಿ ರೈಫಲ್ಸ್‌ನ್ನು, ಪಿಸ್ತೂಲನ್ನು ಮತ್ತು ಗನ್‌ಗಳನ್ನು ದೊಡ್ಡ ದೊಡ್ಡ ಜನ ಬೇಟೆ ಆಡುವುದಕ್ಕೆ ಆತ್ಮ ರಕ್ಷಣೆ ಮಾಡಿಕೊಳ್ಳುವುದಕ್ಕೆ ಇಟ್ಟು ಕೊಳ್ಳುತ್ತಾರೆ. ಅದರ ಮೇಲೆ ಶೇಕಡ ಒಂದರಷ್ಟು ಜಾಸ್ತಿ ಮಾಡುವ ಬದಲಿಗೆ ಶೇಕಡಾ 10 ರಷ್ಟು ಜಾಸ್ತಿ ಮಾಡಿ. ಏತಕ್ಕೆ ಜಾಸ್ತಿ ಟ್ಯಾಕ್ಸನ್ನು ಹಾಕಲಿಲ್ಲವೆಂದು ಕೇಳುತ್ತೇನೆ.

ಇನ್ನು Marble slabs and articles made of marble. ಇದು ಸಾಮಾನ್ಯ ಜನರು ಉಪಯೋಗ ಮಾಡತಕ್ಕಂಥ ವಸ್ತುವಲ್ಲ ಇದರ ಮೇಲೆ ಏತಕ್ಕೆ ಹೆಚ್ಚಿನ ತೆರಿಗೆಯನ್ನು ಹಾಕಲಿಲ್ಲ ? ಮಾರ್ಬಲನ್ನು ಸಾಮಾನ್ಯವಾಗಿ ಸದಾಶಿವನಗರದಲ್ಲಿ ಮನೆಕಟ್ಟತಕ್ಕಂಥವರು, ಬೆಂಗಳೂರು ನಗರ ದಲ್ಲಿ ಮನೆ ಕಟ್ಟುತಕ್ಕಂಥವರು ದೊಡ್ಡದೊಡ್ಡ ಭವನವನ್ನು ಕಟ್ಟಿಸತಕ್ಕಂಥವರು ಮನೆಯಮುಂದಕ್ಕೆ ಈ ಮಾರ್ಬಲ್ ಕಲ್ಲನ್ನು ಹಾಕಿಸುತ್ತಾ ಇದ್ದಾರೆ. ಅದು ಒಂದು ಫ್ಯಾಷನ್ ಆಗಿದೆ. ಡಿಸ್ಟ್ರಿಕ್ಟ್ ಕಚೇರಿಯಲ್ಲಿಯೂ ಸಹ ಕಟ್ಟಿದ್ದಾರೆ. ಅಲ್ಲಿ ಸಾರ್ವಜನಿಕರು ಓಡಾಡತಕ್ಕಂಥ ಕಚೇರಿಯ ಮೆಟ್ಟಲು ಗಳಿಗೆ ಮಾರ್ಬಲ್ ಸ್ಟೋನ್‌ಗಳನ್ನು ಹಾಕಿದ್ದಾರೆ. ಇದು ಭೋಗ ವಸ್ತು. ಇವನ್ನು ಬಂಡವಾಳ ಶಾಹಿಗಳು, ಕಪ್ಪು ಹಣವನ್ನು ಮಾಡಿಕೊಂಡಿರುವವರು ಮಾತ್ರ ಹಾಕಿಕೊಳ್ಳುವುದಕ್ಕೆ ಸಾಧ್ಯ. ನಮ್ಮಂಥ ನಿಮ್ಮಂಥ ಸಾಮಾನ್ಯ ಜನರಿಗೆ ಇದನ್ನು ಹಾಕಿಸುವುದಕ್ಕೆ ಆಗುವುದಿಲ್ಲ ಆದುದರಿಂದ ಇದರ ಮೇಲೆ ಶೇಕಡ 20 ರಷ್ಟನ್ನಾದರೂ ತೆರಿಗೆಯನು ಹಾಕಬೇಕಾಗಿತ್ತು. ಏತಕ್ಕೆ ಹೆಚ್ಚಿನ ತೆರಿಗೆಯನ್ನು ಇದರ ಮೇಲೆ ಹಾಕಲಿಲ್ಲ ?

Item No. 16 Sheets, cushions, pillows, mattresses and other articles made of foamed rubber, or plastic foam or other synthetic foam.

ಇದೂ ಕೂಡ ಸಾಮಾನ್ಯ ಜನರು ಉಪಯೋಗಿಸತಕ್ಕಂಥ ವಸ್ತುಗಳು ಅಲ್ಲ. ಇವು ಭೋಗ ವಸ್ತುಗಳು ಇದರ ಮೇಲೆ ಶೇಕಡ 25 ರಷ್ಟು ತೆರಿಗೆಯನ್ನು ಏತಕ್ಕೆ ಹಾಕಲಿಲ್ಲ ? ಇವನ್ನು ಮ್ಯಾನ್ಯು ಫ್ಯಾಕ್ಚರ್ ಮಾಡತಕ್ಕಂಥ ಕಾರ್ಖಾನೆಗಳು ಕಡಿಮೆ ಇವೆ, ಇವುಗಳನ್ನು ಕೇಳತಕ್ಕ ಜನರೂ ಸಹ ಸೀಮಿತವಾಗಿದ್ದಾರೆ. ಕೇವಲ 10 ಪರ್‌ಸೆಂಟ್ ನಷ್ಟು ಜನರು ಮಾತ್ರ ಇವನ್ನು ಉಪಯೋಗಿಸು ತ್ತಾರೆ. ಸರ್ಕಾರಿ ಕಚೇರಿಗಳಲ್ಲಿ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನಲ್ಲಿ ಬಹಳ ಒಳ್ಳೆಯ ಕುಶನ್, ಚೇರ್‌ಗಳು ಇವೆ. ಅಶೋಕ ಹೋಟೆಲ್ ಅಂಥ ಕಡೆಗಳಲ್ಲಿ ಉಪಯೋಗಿಸುತ್ತಾರೆ. ಆದು ದರಿಂದ ಇಂಥ ಭೋಗ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕದೇ ಬಿಟ್ಟಿರುವುದು ಒಂದು ಉದಾಹರಣೆ.

Item No 21 Sanitary fittings of every description excluding pipes and fittings of stoneware, cement and iron. ಶೇಕಡ 8 ಪರ್‌ಸೆಂಟ್ ಇದ್ದುದನ್ನು 10 ಪರ್ಸೆಂಟ್‌ಗೆ ಏರಿಸಿದ್ದೀರಿ. ಇದನ್ನು ಸಾಮಾನ್ಯ ಜನರು ಉಪಯೋಗಿಸುವುದಿಲ್ಲ. ಇದನ್ನು ಸಹ ಶ್ರೀಮಂತ ವರ್ಗದವರೇ ಹೆಚ್ಚು ಉಪಯೋಗ ಮಾಡತಕ್ಕಂಥದ್ದು. 20 ಸಾವಿರ ಗ್ರಾಮಗಳಲ್ಲಿ ಇದನ್ನು ಹೆಚ್ಚು ಬಳಸುವುದೇ ಇಲ್ಲ, ಬಹಳ ಅಪರೂಪಕ್ಕೆ ಹಣ ಇರುವವರು ಮಾತ್ರ ಇದನ್ನು ಉಪ ಯೋಗಿಸುತ್ತಿದ್ದಾರೆಯೇ ವಿನಹ ಗ್ರಾಮಾಂತರ ಪ್ರದೇಶಗಳಲ್ಲಿರ ತಕ್ಕವರು ಯಾರೂ ಇದನ್ನು ಉಪಯೋಗಿಸುತ್ತಾ ಇಲ್ಲ. ಇದರ ಮೇಲೆ ಶೇಕಡ 2 ರಷ್ಟು ತೆರಿಗೆ ಹಾಕಿದ್ದೀರಿ, ಆದ್ದರಿಂದ ಇದರ ಮೇಲೆ ಇನ್ನು 20 ರಷ್ಟು ಹೆಚ್ಚಿನ ತೆರಿಗೆಯನ್ನು ಹಾಕಿದರೂ ಕೊಡತಕ್ಕಂಥವರು ಇದ್ದಾರೆ.

ಇನ್ನು Item No 23 Aeroplanes, Rail coaches and their spare patrs ಇದು ಎಲ್ಲಾ ಭೋಗವಸ್ತುಗಳು, ಕೆಲವೇ ಜನರು ಉಪಯೋಗ ಮಾಡತಕ್ಕಂಥ ಸಾಧನಗಳು. ಇದರ ಮೇಲೆ ಶೇಕಡ 20 ರಷ್ಟು ತೆರಿಗೆಯನ್ನು ಹಾಕುವುದಕ್ಕೆ ಏತಕ್ಕೆ ಪ್ರಯತ್ನ ಪಡಲಿಲ್ಲ ?

ಆಮೇಲೆ, Item No. 24. All kinds of mill yarn other than cotton yarn and sewing thread and filature silk). ಒಂದು ಪರ್ಸೆಂಟ್ ಇದ್ದುದನ್ನು ಎರಡು ಪರ್ಸೆಂಟ್‌ಗೆ ಏರಿಸಿದ್ದೀರಿ. ಈ ರೀತಿ ಶೇಕಡ ಒಂದರಷ್ಟು ಹೆಚ್ಚು ಮಾಡುವುದರಿಂದ ಆ ಭಾರ ಯಾರ ಮೇಲೆ ಬೀಳುತ್ತದೆ ಎಂದರೆ ಅದು ಸಾಮಾನ್ಯ ಜನರ ಮೇಲೆ ಬೀಳುತ್ತದೆ ಇವತ್ತು ಬಟ್ಟೆ ಬೆಲೆ ಏನು ಆಗಿದೆ ಎಂದರೆ ಗಜಕ್ಕೆ 5 ರೂಪಾಯಿ ಇದ್ದಂಥ ಒಂದು ಶರಟು

(ಶ್ರೀ ಕಾಗೋಡು ತಿಮ್ಮಪ್ಪ)

ಬಟ್ಟೆ 20—25 ರೂಪಾಯಿಗಿಂತ ಕಡಿಮೆ ದರವಿಲ್ಲ. ಅಷ್ಟಕ್ಕೆ ಹೋಗಿದೆ. ಎಲ್ಲಾ ವರ್ಗದ ನೂಲಿನ ಮೇಲೆ ಟ್ಯಾಕ್ಸ್ ಹಾಕಿರುವಾಗ ಸಾಮಾನ್ಯ ಜನಗಳು ಧರಿಸತಕ್ಕ ಕೈಮಗ್ಗದ ನೂಲಿನ ಮೇಲೆ ಸೇಕಡ 1ರಷ್ಟು ತೆರಿಗೆ ಹಾಕಿರುವುದನ್ನು ಕೂಡಲೆ ಕೈಬಿಡಿ. ಇದು ಸಾಮಾನ್ಯ ಜನರ ಮೇಲೆ ಹಾಗೂ ಸಾಮಾನ್ಯ ಬಳಕೆದಾರರ ಮೇಲೆ ಹಾಕಿರತಕ್ಕ ತೆರಿಗೆ: ಇವತ್ತು ನೂಲಿನ ಮೇಲೆ ಟ್ಯಾಕ್ಸ್ ಹಾಕುತ್ತೀರಿ. ನಾಳೆ ನೂಲಿನ ಬಟ್ಟೆಯ ಮೇಲೂ ಕೂಡ ಟ್ಯಾಕ್ಸ್ ಹಾಕುತ್ತೀರಿ. ಆದ್ದರಿಂದ ಸಾಮಾನ್ಯ ಜನರ ಮೇಲೆ ಪರಿಣಾಮವನ್ನುಂಟುಮಾಡತಕ್ಕ ನೂಲಿನ ಮೇಲೆ ತೆರಿಗೆ ಸೇಕಡ 1ರಷ್ಟು ಹಾಕಿರುವುದನ್ನು ಕೂಡಲೆ ತೆಗೆದುಹಾಕಿ. ಯಾವ್ಯಾವ ಬಾಬಿನ ಮೇಲೆ ತೆರಿಗೆಯನ್ನು ಹೆಚ್ಚಿಗೆ ಹಾಕುವುದಕ್ಕೆ ಸಾಧ್ಯವಿದೆಯೋ ಅದನ್ನು ಖಂಡಿತವಾಗಿ ಹಾಕಿ. ಇಂಥಾದ್ದರ ಮೇಲೆ ಹಾಕಿರುವ ತೆರಿಗೆಯನ್ನು ಕಡಿಮೆಮಾಡಿ.

ಇನ್ನು ಸೆಕೆಂಡ್ ಷೆಡ್ಯೂಲ್‌ನಲ್ಲಿ ಹೇಳಿರುವ ಆಲ್ ಲಿಕ್ಕರ್ ಅದರ್ ದ್ಯಾನ್ ಕಂಟ್ರಿ ಲಿಕ್ಕರ್ ಐಟಂ ನಂ. 38 ಏನಿದೆಯೋ ಇದರ ಮೇಲೆ ಏಕೆ ಹೆಚ್ಚು ತೆರಿಗೆಯನ್ನು ಹಾಕಲಿಲ್ಲ ? ಸೇಕಡ 25 ರಷ್ಟು ತೆರಿಗೆಯನ್ನು ಇದರ ಮೇಲೆ ಹಾಕಿದರೆ ಏನಾಗುತ್ತದೆ ? ಲಿಕ್ಕರ್ಸ್‌ನಲ್ಲಿ ಬ್ಲೈಫರ್‌ಕೇಟ್ ಮಾಡಬಹುದು. ಈಗ ಅರಕ್ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ. ಸಮಾಜದ ಕೆಳದರ್ಜೆ ವರ್ಗದವರು ಕೆಲವು ಪ್ರದೇಶಗಳಲ್ಲಿ ಇದನ್ನು ಉಪಯೋಗಿಸುತ್ತಾರೆ. ಏಕೆಂದರೆ ಲಿಕ್ಕರ್ಸ್ ಅಂದರೆ ಎಲ್ಲಾ ತರಹ ವಸ್ತುಗಳು ಇದರಲ್ಲಿ ಬರುತ್ತವೆ. ಅವುಗಳಲ್ಲಿ ಕೆಲವು ವಸ್ತುಗಳ ಮೇಲೆ ತೆರಿಗೆಯನ್ನು ಹಾಕುವುದನ್ನು ಕೈಬಿಡಬೇಕು. ಭೋಗವಸ್ತುಗಳ ಮೇಲೆ ತೆರಿಗೆ ಹಾಕುವುದನ್ನು ಹೆಚ್ಚುಮಾಡಿ. ಯಾರು ಅವನ್ನು ಹೆಚ್ಚಿಗೆ ಉಪಯೋಗಿಸುತ್ತಾರೆಂದರೆ ಶ್ರೀಮಂತ ವರ್ಗ. ತನ್ನ ಹದ್ದಿಗೆ ಮೀರಿ ಖರ್ಚುಮಾಡುವ ಪ್ರವೃತ್ತಿ ಹೊಂದಿರತಕ್ಕ ಕೆಲವೇ ವರ್ಗದ ಜನರು ಏನಿದ್ದಾರೋ ಅಂತಹವರು ಇವತ್ತು ಹೆಚ್ಚು ತೆರಿಗೆಯನ್ನು ಕೊಡಲು ಶಕ್ತರಾಗಿರುತ್ತಾರೆ. ಆದ್ದರಿಂದ ಅರಾಕ್ ಭೋಗವಸ್ತು ಆಗಿರುವುದರಿಂದ ಅದರ ಮೇಲೆ ಹೆಚ್ಚಿಗೆ ತೆರಿಗೆಯನ್ನು ದಯವಿಟ್ಟು ಹಾಕಬೇಕು. ಜೊತೆಗೆ ಅಫೀಮು, ಗಾಂಜಾ, ಮತ್ತು ಭಾಂಗಿ—ಇವುಗಳ ಮೇಲೆ ಹೆಚ್ಚಿಗೆ ತೆರಿಗೆಗಳನ್ನು ಹಾಕಬೇಕು. ಇನ್ನು ಮೆಡಿಸಿನಲ್ ಅಂಡ್ ಫಾರ್ಮಾಸಿಟಿಕಲ್ ಪ್ರಿಪರೇಷನ್ಸ್ ಮೇಲೆ ಸೇಕಡ 6ರಷ್ಟು ಇದ್ದುದಕ್ಕೆ 8ರಷ್ಟು ತೆರಿಗೆ ಹಾಕಬೇಕೆಂದು ಮಾಡಿದ್ದೀರಿ. ಸೇಕಡ 2ರಷ್ಟು ಜಾಸ್ತಿ ತೆರಿಗೆಯನ್ನು ಹಾಕಬೇಕೆಂದು ಮಾಡಿದ್ದೀರಿ. ಈ ತೆರಿಗೆ ರೋಗಿಗಳ ಮೇಲೆ ಬೀಳುತ್ತದೆ. ಸಾಮಾನ್ಯ ಜನರಮೇಲೆ ಅದರಲ್ಲಿಯೂ ರೋಗಿಗಳ ಮೇಲೆ ಈ ತೆರಿಗೆ ಬೀಳುವುದರಿಂದ, ಸೇಕಡ 2ರಷ್ಟು ತೆರಿಗೆಯನ್ನು ಇವುಗಳ ಮೇಲೆ ಹಾಕಿರುವುದು ಸಾಧುವಾದುದಲ್ಲ. ಕಾಫಿ ಮೇಲೆ ಇವತ್ತು ಸೇಕಡ 4ರಷ್ಟು ತೆರಿಗೆಯನ್ನು ಜಾಸ್ತಿಮಾಡಿದ್ದಾರೆ. ಇದು ಸಾಮಾನ್ಯ ಜನರ ಮೇಲೆ ಬೀಳತಕ್ಕದ್ದಾಗಿದೆ. ಕಾಫಿ, ಟೀ ಗಳನ್ನು ಸಾಮಾನ್ಯವಾಗಿ ಎಲ್ಲರೂ ಕುಡಿಯುತ್ತಾರೆ. ಆದ್ದರಿಂದ ಇವುಗಳ ಮೇಲೆ ಹೆಚ್ಚು ಮಾಡಿರುವ ತೆರಿಗೆಯನ್ನು ತಾವು ಕೈಬಿಡಬೇಕು.

ಇನ್ನು ಐಟಂ ನಂಬರ್ 48. ಕೆಮಿಕಲ್ ಫರ್ಟಿಲೈಜರ್ಸ್, ಬೋನ್‌ಮೀಲ್ ಅಂಡ್ ಆಯಿಲ್ ಕೇಕ್, ಇವುಗಳ ಮೇಲೆ ತೆರಿಗೆ ಸೇಕಡ 2ರಷ್ಟು ಇದ್ದುದ್ದನ್ನು ಸೇಕಡ 3ರಷ್ಟು ಮಾಡಿದ್ದೀರಿ. ಕೇವಲ ಸೇಕಡ ಒಂದರಷ್ಟು ತೆರಿಗೆಯನ್ನು ಮಾತ್ರ ಜಾಸ್ತಿ ಮಾಡಿದ್ದೀರಿ. ಇವತ್ತು ಗೊಬ್ಬರದ ಬೆಲೆ ಬಹಳ ಜಾಸ್ತಿಯಾಗುತ್ತಿದೆ. ಸೇಕಡ 20ರಷ್ಟು ಜಾಸ್ತಿಯಾಗಿದೆ. ಗೊಬ್ಬರವನ್ನು ಇವತ್ತು ಹೆಚ್ಚಿಗೆ ವ್ಯವಸಾಯಗಾರರು ಉಪಯೋಗಿಸುತ್ತಿದ್ದಾರೆ. ರಾಸಾಯನಿಕ ಗೊಬ್ಬರದ ಬೆಲೆಯೂ ಸಹ ಇವತ್ತು ವಿಪರೀತವಾಗಿ ಏರಿದೆ. ತುಂಬಾ ದುಬಾರಿಯಾಗಿದೆ. ವ್ಯವಸಾಯಗಾರರಿಗೆ ಇದರಿಂದ ಅವನ ಬಂಡವಾಳ ವೆಚ್ಚ ತುಂಬಾ ಜಾಸ್ತಿಯಾಗುತ್ತದೆ. ಈ ದೃಷ್ಟಿಯಿಂದ ಇದು ನೇರವಾಗಿ ವ್ಯವಸಾಯಗಾರನ ಮೇಲೆ ಹೆಚ್ಚಿಗೆ ಪರಿಣಾಮವಾಗುವುದರಿಂದ, ಅದಕ್ಕೆ ಹಾಕಿರತಕ್ಕ ತೆರಿಗೆಯನ್ನು ದಯವಿಟ್ಟು ಕೂಡಲೇ ಸರ್ಕಾರದವರು ಕೈಬಿಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ.

ಇನ್ನು ಐಟಂ ನಂಬರ್ 49. ಗೋಲ್ಡ್ ತ್ರೆಡ್‌ಗೆ ಸೇಕಡ ಒಂದರಷ್ಟು ತೆರಿಗೆಯನ್ನು ಮಾತ್ರ ಜಾಸ್ತಿ ಮಾಡಿದ್ದಾರೆ. ಇದಕ್ಕೆ 10ರಷ್ಟು ಜಾಸ್ತಿಮಾಡಿದರೆ ಏನು ತೊಂದರೆ ? ಇವನ್ನು ಇನ್ನೂ ಹೆಚ್ಚಿಗೆ ಜಾಸ್ತಿಮಾಡುವುದಕ್ಕೆ ಸಾಧ್ಯವಿದೆ.

ಇನ್ನು ಐಟಂ ನಂಬರ್ 52. ರೆಫ್ರಿಜರೇಟರ್‌ಗೆ ಸೇಕಡ ಒಂದರಷ್ಟು ಮಾತ್ರ ತೆರಿಗೆಯನ್ನು ಜಾಸ್ತಿಮಾಡಿದ್ದಾರೆ, ಇದು ಹೇಗೆ ? ಇದು ಸಾಧ್ಯವೇ ? ಇದು ಭೋಗವಸ್ತು. ಇದನ್ನು ಕೇಳುವವರು ಶ್ರೀಮಂತವರ್ಗ. ಇದರ ಮೇಲೆ ತೆರಿಗೆಯನ್ನು ಸೇಕಡ 10 ಅಥವಾ 15ರಷ್ಟು

ಮಾಡಿದರೂ ಒಳ್ಳೆಯದು. ಶೇಕಡ 1ರಷ್ಟು ಜನರು ಇದನ್ನು ಉಪಯೋಗಮಾಡುತ್ತಾ ಇಲ್ಲ. ಮಾನ್ಯ ಶ್ರೀ ದೇವೇಗೌಡರು ಇದರ ಬಗ್ಗೆ ಸೂಚನೆ ಕೊಟ್ಟಿರುವ ಹಾಗೆ ಸೇಕಡ 20ರಷ್ಟು ಇದರ ಮೇಲೆ ತೆರಿಗೆಯನ್ನು ಹಾಕಿದರೂ ಒಳ್ಳೆಯದು. ಇದರಿಂದ ಶ್ರೀಮಂತರಿಗೇನೂ ತೊಂದರೆಯಾಗುವುದಿಲ್ಲ ದಯಮಾಡಿ ಇದನ್ನು ಸರ್ಕಾರದವರು ಮಾಡಬೇಕು.

ಇನ್ನು ಐಟಂ ನಂಬರ್ 55. ಸಿನಿಮ ಟೋಗ್ರಫಿಕ್, ಫೋಟೋಗ್ರಾಫಿಕ್ ಕ್ಯಾಮರಾಸ್, ಪ್ರಾಜೆಕ್ಟರ್ಸ್ ಮತ್ತು ಎನ್‌ಲಾರ್ಜರ್ಸ್ ಇವುಗಳಿಗೆ ಶೇಕಡ 1ರಷ್ಟು ಜಾಸ್ತಿ ತೆರಿಗೆಯನ್ನು ಹಾಕಿದ್ದೀರಿ. ಇದಕ್ಕೂ ಏಕೆ ಶೇಕಡ 10ರಷ್ಟು ತೆರಿಗೆಯನ್ನು ಹಾಕಬಾರದು? ಅದಕ್ಕೇನು ತೊಂದರೆ ಇದೆ ಫಿಲಂ ಪ್ರಾಜೆಕ್ಟ್ ಮಾಡುವವರು ಕೆಲವೇ ಜನರು ಇಟ್ಟುಕೊಂಡಿರುವ ವಸ್ತುಗಳು. ಅವರು ಇವುಗಳಿಂದಲೇ ಹೆಚ್ಚು ಹೆಚ್ಚು ಸಂಪಾದನೆ ಮಾಡಬೇಕು. ಅದನ್ನು ಕೇವಲ ಸ್ವಲ್ಪ ಜನರು ಮಾತ್ರ ಕೊಳ್ಳುತ್ತಾರೆ. ಇದನ್ನು ಉಪಯೋಗಿಸುವವರು ಹೆಚ್ಚಿಗೆ ಹಣ ಇರುವವರು. ಸಾಮಾನ್ಯ ಜನರು ಇವನ್ನು ಮುಟ್ಟುವುದೇ ಇಲ್ಲ ಆದ್ದರಿಂದ ಇಂಥಾದ್ದಕ್ಕೆ ಶೇಕಡ 1ರಷ್ಟು ತೆರಿಗೆಯನ್ನು ಜಾಸ್ತಿ ಮಾಡಿರುವುದು ತೀರಾ ಕಡಿಮೆ. ಇದರ ಮೇಲೆ ತೆರಿಗೆಯನ್ನು ಶೇಕಡ 10ರಷ್ಟು ಹಾಕಬೇಕು.

ಇನ್ನು 56ನೇ ಐಟಂ. ಬೈನೊಕ್ಯುಲರ್ಸ್, ಅಪೆರ ಗ್ಲಾಸಸ್ ಮತ್ತು ಟೆಲಿಸ್ಕೋಪ್ಸ್—ಇವನ್ನು ಶ್ರೀಮಂತ ಜನರು ರೇಸ್‌ಗಳಲ್ಲಿ ಹೆಚ್ಚಿಗೆ ಉಪಯೋಗಿಸುವುದು ಉಂಟು. ರೇಸ್‌ಗಳಲ್ಲಿ ಕುದುರೆಗಳನ್ನು ನೋಡುವ ಜನ ಅದರಲ್ಲಿಯೂ ಖೆಡ್ಡಾ ಆಪರೇಷನ್ ನೋಡಬೇಕಾದರೆ ಶ್ರೀಮಂತ ವರ್ಗದವರು ಉಪಯೋಗಿಸುವ ವಸ್ತುಗಳು ಇವು. ಅಂಥಾದ್ದರ ಮೇಲೆ ಶೇಕಡ 1ರಷ್ಟು ತೆರಿಗೆಯನ್ನು ಜಾಸ್ತಿಮಾಡಿದ್ದೀರಿ. ಎಷ್ಟು ಜಾಗ್ರತಿ ಇಂತಹವುಗಳ ಬಗ್ಗೆ ನಿಮಗೆ ಮಮತೆ ಬಂದು ಬಿಡುತ್ತದೆ. ಇವರು ಹೇಳುವ ಸಮಾಜವಾದ ಏನು, ಇವರು ಮಾಡುತ್ತಿರುವುದಾದರೂ ಏನೆಂದು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಯಾರ್ಯಾರು ಬೆಂಗಳೂರಿನಲ್ಲಿ ಇರುವವರು ಖೆಡ್ಡಾವನ್ನು ಹೋಗಿ ನೋಡುತ್ತಾರೆ ? ಎಲ್ಲೋ ಕೆಲವು ಜನರಷ್ಟೇ. ಆದ್ದರಿಂದ ಇಂತಹ ಭೋಗವಸ್ತುಗಳ ಮೇಲೆ ತೆರಿಗೆಯನ್ನು ಶೇಕಡ 10ರಷ್ಟು ಜಾಸ್ತಿಮಾಡಬೇಕು.

ಇನ್ನು 57ನೇ ಐಟಂ. ಗ್ರಾಮಾಫೋನ್ಸ್ ವಗೈರೆ ಬಗ್ಗೆ ಶೇಕಡ 1ರಷ್ಟು ತೆರಿಗೆಯನ್ನು ಜಾಸ್ತಿಮಾಡಿದ್ದೀರಿ. ಅದಕ್ಕೂ ಇನ್ನೂ ಹೆಚ್ಚಿಗೆ ತೆರಿಗೆಯನ್ನು ಹಾಕಬೇಕು.

ಇನ್ನು ಐಟಂ ನಂಬರ್ 59. ಸಿಗರ್ ಅಂಡ್ ಸಿಗರೇಟ್ ಕೇಸಸ್—ಇವುಗಳ ಬಗ್ಗೆ ಶೇಕಡ 3ರಷ್ಟು ಮಾತ್ರ ತೆರಿಗೆಯನ್ನು ಜಾಸ್ತಿಮಾಡಿದ್ದಾರೆ. ಇದನ್ನು ಎಲೈಟ್ ಕ್ಲಾಸ್ ಉಪಯೋಗಿಸುವ ವಸ್ತು. ಆದ್ದರಿಂದ ಇದಕ್ಕೆ ಇನ್ನೂ ಹೆಚ್ಚಿಗೆ ತೆರಿಗೆಯನ್ನು ಹಾಕುವುದು ಒಳ್ಳೆಯದು.

ಆದ್ದರಿಂದ ಇದು ಎಲೈಟ್ ಕ್ಲಾಸಸ್ ಉಪಯೋಗಿಸತಕ್ಕ ವಸ್ತು. ಇದರ ಮೇಲೆ ಶೇಕಡ ಮೂರರಷ್ಟು ತೆರಿಗೆಯನ್ನು ನೀವು ಜಾಸ್ತಿ ಮಾಡಿದ್ದೀರಿ. ಇದು ಬಹಳ ಕಡಿಮೆ, ಇದು ಭೋಗವಸ್ತು. ಇದರ ಮೇಲೆ ಕನಿಷ್ಠ 10ರಷ್ಟಾದರೂ ತೆರಿಗೆಯನ್ನು ಜಾಸ್ತಿ ಮಾಡಬೇಕು. ಪ್ಲೇಯಿಂಗ್ ಕಾರ್ಡ್ಸ್ ಇದರ ಮೇಲೆ ನೀವು ತೆರಿಗೆಯನ್ನು ಹಾಕಲಿಲ್ಲ.

9-30 A. M.

ಶ್ರೀ ಎಚ್. ಡಿ. ದೇವೇಗೌಡ.—ಅವರಿಗೆ ಅದರ ಅನುಭವ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಮೇಲೆ ತೆರಿಗೆ ಹಾಕುವುದನ್ನು ತಾವು ಏಕೆ ಕೈಬಿಟ್ಟಿರಿ ? ಇದು ಕೆಲವೇ ಜನ ಉಪಯೋಗಿಸತಕ್ಕ ವಸ್ತುವಾಗಿದೆ. ಇದರ ಮೇಲೆ ಹತ್ತು ಪರ್ಸೆಂಟ್ ತೆರಿಗೆಯನ್ನು ಹಾಕಿದ್ದರೆ ಏನು ತೊಂದರೆಯಾಗುತ್ತಿತ್ತು ? ಇದರ ಬಗ್ಗೆ ಯಾರೂ ಎಜಿಟೇಷನ್ ಮಾಡುತ್ತಾ ಇರಲಿಲ್ಲ ಮೆರವಣಿಗೆ ಮಾಡುತ್ತಾ ಇರಲಿಲ್ಲ ಎಷ್ಟು ತೆರಿಗೆಯನ್ನು ಹಾಕಿದರೂ ಕೊಡಕೊಂಡು ಕೊಂಡು ತೆರಿಗೆಯನ್ನು ಕೊಡುತ್ತಾರೆ. ಆದ್ದರಿಂದ ಇದರ ಮೇಲೆ ನೀವು ಇನ್ನೂ ಸ್ವಲ್ಪ ತೆರಿಗೆಯನ್ನು ಜಾಸ್ತಿ ಮಾಡಿದರೆ ಯಾರೂ ಕಿರಿಕಿರಿ ಮಾಡುವುದಿಲ್ಲ.ಇಂಥ ವಸ್ತುಗಳ ಮೇಲೆ ನೀವುತೆರಿಗೆಯನ್ನು ಹಾಕಬೇಕು. ಆಮೇಲೆ, ಈ ಎಲೆಕ್ಟ್ರಿಕಲ್ ಗೂಡ್ಸ್‌ಗಳ ಮೇಲೆ, ಆರು ಪರ್ಸೆಂಟ್ ತೆರಿಗೆ ಇದ್ದುದನ್ನು, ಎಂಟು ಪರ್ಸೆಂಟ್‌ಗೆ ಏರಿಸಿದ್ದೀರಿ. ಅಂದರೆ ಎರಡು ಪರ್ಸೆಂಟ್ ಜಾಸ್ತಿ ತೆರಿಗೆಯನ್ನು ಹಾಕಿದ್ದೀರಿ. ಇದರ ಮೇಲೆ 5 ಪರ್ಸೆಂಟ್ ಜಾಸ್ತಿ ಮಾಡುವುದಕ್ಕೆ ಅವಕಾಶ ಇತ್ತು. ನಮ್ಮ ರಾಜ್ಯದಲ್ಲಿ ಎಷ್ಟು ಮನೆಗಳಲ್ಲಿ ಜನರು ಈ ಫ್ಯಾನ್ಸ್ ಹಾಕಿಕೊಂಡಿದ್ದಾರೆ? ಇದೂ ಕೂಡ ಭೋಗವಸ್ತು. ಇದರ ಮೇಲೆಯೂ ತಾವು ಹೆಚ್ಚಿನ ತೆರಿಗೆಯನ್ನು ಹಾಕಬಹುದು. ತಾವು ಇದನ್ನು ಎಲೈಟ್ ಕ್ಲಾಸಸ್ ಜನ ಉಪಯೋಗಿಸಿದರೂ ಕೂಡ ಕಡಿಮೆ ಟ್ಯಾಕ್ಸ್ ಹಾಕಿದ್ದೀರಿ. ಹಾಗೆಯೇ ಸೀರಿಯಲ್ ನಂಬರ್ 61(ಎ)ನಲ್ಲಿ ಎಲೆಕ್ಟ್ರಿಕಲ್

(ಶ್ರೀ ಕಾಗೋಡು ತಿಮ್ಮಪ್ಪ)

ಅರ್ದನ್‌ವೇರ್ ಮತ್ತು ಪೋರ್ಸಿಲಿನ್ ಇವುಗಳ ಮೇಲೆ ಆರು ಪರ್ಸೆಂಟ್ ಇದ್ದುದನ್ನು ಎಂಟು ಪರ್ಸೆಂಟ್‌ಗೆ ಜಾಸ್ತಿ ಮಾಡಿದ್ದೀರಿ. ಇದನ್ನು ಕನಿಷ್ಟ 5 ಪರ್ಸೆಂಟ್ ಆದರೂ ಜಾಸ್ತಿ ಮಾಡುವುದಕ್ಕೆ ಅವಕಾಶ ಇತ್ತು. ಆಮೇಲೆ ಕ್ಲಾಕ್ಸ್ ಮತ್ತು ಟೈಂಪೀಸ್‌ನ ಮೇಲೆ ಶೇಕಡ 3ರಷ್ಟು ತೆರಿಗೆಯನ್ನು ಜಾಸ್ತಿ ಹಾಕಿದ್ದಾರೆ. ಟೈಂಪೀಸ್ ಸಾಮಾನ್ಯ ಜನರು ಕೊಳ್ಳತಕ್ಕ ವಸ್ತು. ಕೆಲಸಗಾರರು, ಕಾರ್ಮಿಕರು ತಮ್ಮ ಮನೆಯಲ್ಲಿ ಇದನ್ನು ಇಟ್ಟುಕೊಳ್ಳಬೇಕಾಗುತ್ತದೆ. ಅದನ್ನು ಬಿಟ್ಟು ಉಳಿದೆಲ್ಲಾ ವಸ್ತುಗಳ ಮೇಲೆ 5 ಪರ್ಸೆಂಟ್ ಅಷ್ಟಾದರೂ ತೆರಿಗೆಯನ್ನು ಜಾಸ್ತಿ ಮಾಡಬೇಕು.

ಐಟಂ ನಂಬರ್ 64ರಲ್ಲಿ ಪ್ರಿಷಿಯಸ್ ಸ್ಟೋನ್ಸ್ ಕಾಲಂ ಇದೆ. ಇದರ ಮೇಲೆ, ಏಕೆ ತೆರಿಗೆ ಯನ್ನು ನೀವು ಹಾಕಲಿಲ್ಲ? ಡೈಮಂಡ್, ವಜ್ರದ ಹರಳಿನ ಮೇಲೆ ತೆರಿಗೆ ಹಾಕಲಿಕ್ಕೆ ತಮ್ಮ ತಲೆ ಹೋಗಲಿಲ್ಲವೇ? ಇದನ್ನು ಕೊಳ್ಳುವವರು ಯಾರು, ನಾವು ಬೆಂಗಳೂರಿನ ಕಮರ್ಷಿಯಲ್ ಸ್ಟ್ರೀಟ್‌ಗೆ ಹೋದರೆ, ಇದನ್ನು ಕೊಳ್ಳುವವರು ಯಾರು, ಎನ್ನುವುದು ಗೊತ್ತಾಗುತ್ತದೆ. ಇದರ ಮೇಲೆ ಶೇಕಡ 25 ರಷ್ಟಾದರೂ ತೆರಿಗೆಯನ್ನು ಜಾಸ್ತಿ ಮಾಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಇದರ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿದರೆ, ಇದರಿಂದ ಏನು ಆದಾಯ ಬರುತ್ತದೆ, ಅದೂ ಕೂಡ ಹೋಗುತ್ತದೆ. ವಜ್ರವನ್ನು ಇಲ್ಲಿ ಮಾರುವವರು, ಇಲ್ಲಿ ಮಾರುವುದನ್ನು ಬಿಟ್ಟು ಬೇರೆ ಕಡೆಗೆ ಹೋಗಿ ಮಾರುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಉಂಗುರಕ್ಕೆ ಒಂದು ಹರಳು ಬೇಕು, ಇದನ್ನು ಕೊಳ್ಳಲಿಕ್ಕೆ ಮದ್ರಾಸ್‌ಗೆ ಯಾರು ಹೋಗುತ್ತಾರೆ. ಇಲ್ಲಿಗೂ ಮದ್ರಾಸ್‌ಗೂ 5 ರೂಪಾಯಿಗಳು ಬೆಲೆಯಲ್ಲಿ ಕಡಿಮೆ ಇದ್ದರೆ, ಯಾರೂ ಇಲ್ಲಿಂದ ಮದ್ರಾಸ್‌ಗೆ ಹೋಗುವುದಿಲ್ಲ. ಇಲ್ಲಿಯೇ ಕೊಳ್ಳುತ್ತಾರೆ.

ಶ್ರೀ ಎಂ. ವೈ. ಘೋರ್ಪಡೆ.—ಇದರ ಮೇಲೆ ಇನ್ನು ಹತ್ತಿಪ್ಪತ್ತು ಪರ್ಸೆಂಟ್ ಜಾಸ್ತಿ ತೆರಿಗೆ ಯನ್ನು ಹಾಕಿದರೆ, ಜನರು ಇಲ್ಲಿ ಏಕೆ ಇದನ್ನು ಕೊಂಡುಕೊಳ್ಳುತ್ತಾರೆ? ಯಾವ ಸ್ಥಳದಲ್ಲಿ ಇದು ಹಾರಾಟವಾಗುತ್ತದೆಯೋ ಅಲ್ಲಿ ಇದರ ಪ್ರಮಾಣವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಡೈಮಂಡ್ಸ್ ಕೊಳ್ಳತಕ್ಕವರು ಕೆಲವರು ಇರಬಹುದು. ಮಂತ್ರಿ ಗಳ ಮನೆಯಲ್ಲಿ ಮದುವೆಯಾದರೆ, ಅವರು ವಜ್ರದ ಉಡುಗೊರೆಯನ್ನು ಕೊಡಬೇಕಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಈ ಮಾತನ್ನು ಹೇಳಲಿಕ್ಕೆ ಇಷ್ಟೊಂದು ಪ್ರಸ್ತಾಪ ಮಾಡಿದರು.

ಶ್ರೀ ಕಾಗೋಡು ತಿಮ್ಮಪ್ಪ.—ಮಂತ್ರಿಗಳ ಮನೆಯಲ್ಲಿ ಮದುವೆಯಾದರೆ, ಸಣ್ಣ ಆಭರಣ ಗಳನ್ನು ಇವರು ಕೊಡಲಿಕ್ಕಾಗುತ್ತದೆಯೇ? ವಜ್ರದ ಆಭರಣಗಳನ್ನು ಕೊಡುತ್ತಾರೆ. ಅವರು ವಜ್ರವನ್ನು ಕೊಳ್ಳಲಿಕ್ಕೆ ಮದ್ರಾಸಿಗೆ ಹೋಗುವುದಿಲ್ಲ. ಇಲ್ಲಿಗೂ ಮದ್ರಾಸಿಗೂ 100–200 ರೂಪಾಯಿಗಳ ವ್ಯತ್ಯಾಸ ಬರಬಹುದು. ಅಥವಾ ಇವರು 40–50 ಸಾವಿರ ರೂಪಾಯಿಗಳ ವಜ್ರದ ಆಭರಣಗಳನ್ನು ಕೊಳ್ಳುವುದಾದರೆ, ಅದರಿಂದ 500–1000 ರೂಪಾಯಿಗಳು ಉಳಿಯುವು ದಾದರೆ, ಅಲ್ಲಿಗೆ ಹೋಗುತ್ತಾರೆ. ಉದಾಹರಣೆಗೆ, ರೇಷ್ಮೆ ಸೀರೆ ಕಾಶ್ಮೀರದಲ್ಲಿ ಅಗ್ಗವಾಗಿ ಸಿಕ್ಕುತ್ತದೆ. ಇಲ್ಲಿರತಕ್ಕವರೆಲ್ಲರೂ ಅಲ್ಲಿಗೆ ಹೋಗಿ ಕೊಂಡು ಕೊಳ್ಳುತ್ತಾರೆಯೇ? ಆದ್ದರಿಂದ ಡೈಮಂಡ್ ಮೇಲೆ ಜಾಸ್ತಿ ತೆರಿಗೆಯನ್ನು ಹಾಕಿದರೆ, ಡೈಮಂಡ್ ಕೊಳ್ಳುವವರಿಗೆ ತೊಂದರೆ ಯೇನೂ ಆಗುವುದಿಲ್ಲ.

ಇನ್ನು ಸ್ಟೇನ್‌ಲೆಸ್ ಸ್ಟೀಲ್, ಇದರ ಮೇಲೆ ಎರಡು ಪರ್ಸೆಂಟ್ ತೆರಿಗೆಯನ್ನು ಜಾಸ್ತಿ ಮಾಡಿ ದ್ದೀರಿ. ಇನ್ನೊಂದು 3 ಪರ್ಸೆಂಟ್ ಜಾಸ್ತಿ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಆಮೇಲೆ ಐಟಂ ನಂಬರ್ 77ರಲ್ಲಿ, ಮೊಸಾಯಿಕ್ ಟೈಲ್ಸ್ ಮತ್ತು ಚಿಪ್ಸ್ ಇದೆ. ಇದರ ಮೇಲೆ ತೆರಿಗೆಯನ್ನು ನೀವು ಏಕೆ ಹಾಕಲಿಲ್ಲ? ಮೊಸಾಯಿಕ್ ಫ್ಲೋರಿಂಗ್ ಮಾಡುವವರು ಯಾರು? ಇದು ಭೋಗವಸ್ತು. ಇದಕ್ಕೆ ಈಗ ಎಂಟು ಪರ್ಸೆಂಟ್ ತೆರಿಗೆ ಇದೆ. ಇದಕ್ಕೆ ಇನ್ನೂ 7 ಪರ್ಸೆಂಟ್ ಜಾಸ್ತಿ ಹಾಕಬೇಕು. ಬೆಂಗಳೂರಿನ ಸದಾಶಿವನಗರದಲ್ಲಿರತಕ್ಕ ಎಲ್ಲಾ ಮನೆಗಳಿಗೂ ಈ ಮೊಸಾಯಿಕ್ ಟೈಲ್ಸ್ ಅನ್ನು ಉಪಯೋಗಿಸಿದ್ದಾರೆ ಮತ್ತು ಉಪಯೋಗಿಸುತ್ತಾರೆ. ಇದರ ಮೇಲೆ ಇನ್ನೂ ಜಾಸ್ತಿ ತೆರಿಗೆಯನ್ನು ಹಾಕಬೇಕು ಎಂದು ನಾನು ಒತ್ತಾಯಪಡಿಸುತ್ತೇನೆ.

ಇನ್ನು ಡಸ್ಟರ್ ಮತ್ತು ಸ್ಪ್ರೇಯರ್ಸ್, ಇದರ ಮೇಲೆ, ಎರಡರಿಂದ ಮೂರು ಪರ್ಸೆಂಟ್ ತೆರಿಗೆ ಯನ್ನು ಜಾಸ್ತಿ ಮಾಡಿದ್ದೀರಿ. ಇದು ವ್ಯವಸಾಯಗಾರರು ಉಪಯೋಗಿಸತಕ್ಕ ವಸ್ತು. ಇದರ ಮೇಲೆ ತಾವು ಟ್ಯಾಕ್ಸನ್ನು ಏಕೆ ಹಾಕಿದ್ದೀರಿ? ಇದನ್ನು ಕೈಬಿಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಹಾಗೆಯೇ ಪೆಟ್ರೋಲ್ ಮೇಲೆಯೂ ಹನ್ನೆರಡು ಪರ್ಸೆಂಟ್ ತೆರಿಗೆ ಇದ್ದುದನ್ನು 14 ಪರ್ಸೆಂಟ್‌ಗೆ ಏರಿಸಿದ್ದೀರಿ ಈಗಾಗಲೇ ಪೆಟ್ರೋಲ್ ಬೆಲೆ ಜಾಸ್ತಿಯಾಗಿದೆ. ಇದು ಜಾಸ್ತಿಯಾಗದೆ ಹೋಗಿದ್ದರೆ. ಇದರ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ನನ್ನ ಆಕ್ಷೇಪಣೆ ಇರಲಿಲ್ಲ. ಇದರಿಂದ ಸಾಮಾನ್ಯ ಜನರಿಗೂ ತೊಂದರೆ ಆಗುತ್ತದೆ. ತಾವು ಈಗ ಶೇಕಡ ಎರಡರಷ್ಟು ತೆರಿಗೆಯನ್ನು ಜಾಸ್ತಿ ಮಾಡಿರುವುದು ಸಾಧುವಲ್ಲ. ಇದನ್ನೂ ಕೈಬಿಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಪೆಟ್ರೋಲ್ ಉಪಯೋಗ ಮಾಡುವ ಜನ ಯಾರು ?

ಶ್ರೀ ಕಾಗೋಡು ತಿಮ್ಮಪ್ಪ.—ಎಲೈಟ್ ಕ್ಲಾಸ್‌ನವರೇ ಉಪಯೋಗ ಮಾಡುತ್ತಾರೆ. ಟ್ಯಾಕ್ಸಿಯಲ್ಲಿ ಹೋಗತಕ್ಕವರು, ಮೋಟಾರ್ ಬೈಸಿಕಲ್ಸ್ ಮೇಲೆ ಹೋಗತಕ್ಕವರು ಇದನ್ನು ಉಪಯೋಗ ಮಾಡುತ್ತಾರೆ.

ಆಮೇಲೆ, ಅರೇಕಾನಟ್, ಪೆಪ್ಪರ್ಸ್ ಮತ್ತು ಕ್ಯಾಷ್ಯೂ. ಇದರ ಮೇಲೆ ತೆರಿಗೆಯನ್ನು ಹಾಕಿದ್ದೀರಿ. ಇನ್ನೂ ಒಂದೆರಡು ಪರ್ಸೆಂಟ್ ಜಾಸ್ತಿ ಮಾಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಎಷ್ಟು ಜಾಸ್ತಿ ಮಾಡಬೇಕು?

ಶ್ರೀ ಕಾಗೋಡು ತಿಮ್ಮಪ್ಪ.—5 ಪರ್ಸೆಂಟ್ ಜಾಸ್ತಿ ಮಾಡಿರಿ.

ಅಧ್ಯಕ್ಷರು.—ಬೆಳ್ಳುಳ್ಳಿ ತಿನ್ನುವವರ ಮೇಲೆ ಟ್ಯಾಕ್ಸ್ ಹಾಕಬೇಕೇ?

ಶ್ರೀ ಕಾಗೋಡು ತಿಮ್ಮಪ್ಪ.—ಕೋಕಾನಟ್ ಮೇಲೆ ಬೇಡ. ಫೋಲ್ಡಿಂಗ್ ಅಂಬ್ರೆಲದ ಮೇಲೆ 2 ಪರ್ಸೆಂಟ್ ಜಾಸ್ತಿ ಮಾಡಿದ್ದೀರಿ. ಅದನ್ನು ಮಲೆನಾಡಿನಲ್ಲಿರತಕ್ಕ ಜನ ಉಪಯೋಗ ಮಾಡತಕ್ಕದ್ದು. ದಯವಿಟ್ಟು ಇದನ್ನು ತೆಗೆದು ಹಾಕಿರಿ, ಇದು ಸಾಧುವಲ್ಲ. ಇನ್ನು ಐವರಿ ಆರ್ಟಿಕಲ್ ಮೇಲೆ ಏತಕ್ಕೆ ಜಾಸ್ತಿ ಮಾಡಿಲ್ಲ? ಅದನ್ನು ಜಾಸ್ತಿ ಮಾಡಬಹುದಾಗಿತ್ತು. ಐಟಂ ನಂಬರ್ 117 ಇನ್‌ಸೆಕ್ಟಿಸೈಡ್ ಮತ್ತು ಪೆಸ್ಟಿಸೈಡ್ಸ್ ಮೇಲೆ ತೆರಿಗೆ ಹಾಕಿದ್ದೀರಿ. ಇದು ಸಹ ಸಾಧುವಲ್ಲ. ಈಗಾಗಲೇ ಅದರ ಬೆಲೆ ದುಬಾರಿಯಾಗಿದ್ದು, ವ್ಯವಸಾಯಗಾರರು ಔಷಧಿ ಹೊಡೆಯುವ ಸ್ಥಿತಿಯಲ್ಲಿ ಇಲ್ಲ. ದಯವಿಟ್ಟು ಇದರ ಮೇಲೆ ಹಾಕಿದ್ದನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಐಟಂ ನಂಬರ್ 124 ಟ್ರ್ಯಾಕ್ಟರ್ಸ್ ಅಂಡ್ ಟ್ರೈಲರ್ಸ್ ಮೇಲೆ 2 ಪರ್ಸೆಂಟ್ ಜಾಸ್ತಿ ಮಾಡಿದ್ದೀರಿ. ಇದನ್ನು 5ರಷ್ಟು ಜಾಸ್ತಿ ಮಾಡಬಹುದಾಗಿತ್ತು. ಪ್ರೆಷರ್ಸ್ ಕುಕ್ಕರ್ಸ್, ಪಾರ್ಟ್ಸ್ ಅಕ್ಸೆಸರೀಸ್ ಇದನ್ನು ಶೇಕಡ 6ರಿಂದ 8ಕ್ಕೆ ಏರಿಸಿದ್ದೀರಿ ಇದನ್ನು ಇನ್ನು 2 ಪರ್ಸೆಂಟ್ ಜಾಸ್ತಿ ಮಾಡಬಹುದು. ನಾಲ್ಕನೆಯ ಷೆಡ್ಯೂಲ್‌ನಲ್ಲಿ ಗ್ರೌಂಡ್‌ನೆಟ್ ಸೀಡ್ಸ್‌ಗೆ 3 ಪರ್ಸೆಂಟ್ ಮಾಡಿದ್ದೀರಿ. ಬೀಜದ ಮೇಲೆ ಒಂದು ಪರ್ಸೆಂಟ್ ಹಾಕಿದರೆ ಎಣ್ಣೆ ದರ ಜಾಸ್ತಿ ಆಗುವುದಿಲ್ಲವೇ? ಈಗಾಗಲೇ ಎಣ್ಣೆ ದರ ವಿಪರೀತ ಆಗಿ ಕೊಬರಿ ಎಣ್ಣೆಯನ್ನು ತಲೆಗೆ ಹಾಕುವುದನ್ನು ಬಿಟ್ಟು ಬಿಟ್ಟಿದ್ದಾರೆ. ಅದು ಸಾಮಾನ್ಯವಾಗಿ ಎಲ್ಲರೂ ಉಪಯೋಗಿಸತಕ್ಕ ವಸ್ತು. ಇದರ ಮೇಲೆ ಶೇಕಡ ಒಂದರಷ್ಟು ಹಾಕಿದ್ದೀರಿ ಅಂಥ ಒಂದು ಲಾಭ ಆಗುವುದಿಲ್ಲ. ಅದನ್ನು ತೆಗೆದುಹಾಕಬೇಕೆಂದು ಹೇಳುತ್ತೇನೆ ಹಾಗೆ ಕಾಟನ್ ಸೀಡ್ಸ್ ಮೇಲೆ ಹಾಕಿದ್ದೀರಿ ಇದರಿಂದ ವನಸ್ಪತಿ ಎಣ್ಣೆ ಬೆಲೆ ಜಾಸ್ತಿ ಆಗುತ್ತದೆ ಅದನ್ನು ಕೂಡ ಕೈಬಿಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಹೆಚ್ಚಿಗೆ ತೆರಿಗೆ ಜಾಸ್ತಿ ಏನು ಮಾಡಿದ್ದಾರೆ ಒಟ್ಟಿನ ಮೇಲೆ ವಿಮರ್ಶೆಮಾಡಿದರೆ ಭೋಗವಸ್ತುಗಳ ಮೇಲೆ ಎಲ್ಲಿ ಹೆಚ್ಚಿಗೆ ತೆರಿಗೆ ಹಾಕಬೇಕೋ ಅಲ್ಲಿ ಹಾಕದೆ ಅಂತವುಗಳನ್ನು ಬಿಟ್ಟಿದ್ದಾರೆ, ಹಾಕಿರುವ ಕಡೆ ಸಾಕಷ್ಟು ಪ್ರಮಾಣದಲ್ಲಿ ಹಾಕಲಿಲ್ಲ. ಭೋಗವಸ್ತುಗಳನ್ನು ಐಡೆಂಟಿಫೈ ಮಾಡುವ ಕೆಲಸ ಈತನಕ ಸಾಧ್ಯವಾಗಿಲ್ಲ. ಆದುದರಿಂದ ಹಣ ಬೇಕೆಂದು ತೆರಿಗೆ ಹಾಕುವ ಕಾಲದಲ್ಲಿ, ಯಾವುದು ಸಾಮಾನ್ಯ ಜನರ ಮೇಲೆ ಬೀಳುತ್ತದೆ, ಯಾವುದರ ಮೇಲೆ ವರ್ಗದ ಜನ ಕೊಡುವ ಸಂದರ್ಭ ಇವೆ ಎಂದು ವಿಮರ್ಶೆ ಮಾಡಿ ಸಾಮಾಜಿಕ ದೃಷ್ಟಿಯಿಂದ ಆಲೋಚನೆ ಮಾಡಿ ತೆರಿಗೆ ಹಾಕತಕ್ಕ ಕೆಲಸವನ್ನು ಮಾನ್ಯ ಹಣಕಾಸಿನ ಸಚಿವರು ಮಾಡಿದ್ದರೆ ಖಂಡಿತವಾಗಿಯೂ ಅವಕ್ಕೆ ಬೆಂಬಲ ನೀಡುತ್ತಿದ್ದೆ. ಅಂಥ ಯಾವಕೆಲಸವನ್ನು ಮಾಡದೆ ದೂರದೃಷ್ಟಿಯಿಂದ ವಿಚಾರ ಮಾಡದೆ ಕೆಲವು ಐಟಂಗಳು ಮಾಡುವುದು ಕೆಲವು ಐಟಂಗಳು ಬಿಡುವುದು ಈ ಕೆಲಸವನ್ನು ಮಾಡಿದ್ದಾರೆಯೇ ವಿನಹ ಅವರು ಹೆಚ್ಚಿಗೆ ಮಾಡತಕ್ಕ ಕಾಲದಲ್ಲಿ ವೈಜ್ಞಾನಿಕ ಕ್ರಮವನ್ನಾಗಲೀ ಆರ್ಥಿಕ ನೀತಿಗಳ ತಳಹದಿಯನ್ನಾಗಲೀ ಇಟ್ಟುಕೊಂಡು ತೆರಿಗೆಯನ್ನು ಏರಿಸಿಲ್ಲ ಎಂದು ನಾನು ಅವರ ಮೇಲೆ ಅಪಾದನೆ ಮಾಡುತ್ತೇನೆ. ಈ ಒಂದು ಹಿನ್ನೆಲೆಯಲ್ಲಿ ಅವರು ತಂದಿರತಕ್ಕ ತಿದ್ದುಪಡಿ ಮಸೂದೆ ಏನು ಇದೆ, ಅದರಲ್ಲಿ ಬದಲಾವಣೆ ಮಾಡಬೇಕು ಒಂದು ವೇಳೆ ಈಗ ಮಾಡದಿದ್ದರೆ ಇನ್ನೊಂದು ಮಸೂದೆಯನ್ನು ತಂದು ಕೆಲವು ವಸ್ತುಗಳ ಮೇಲೆ ಕಡಿಮೆ ತೆರಿಗೆಯನ್ನು ಹಾಕಿದ್ದೀರಿ. ಅದನ್ನು ಹೆಚ್ಚು ಮಾಡಬೇಕು ಮತ್ತು ಯಾವ ವಸ್ತು

(ಶ್ರೀ ಕಾಗೋಡು ತಿಮ್ಮಪ್ಪ)

ಗಳನ್ನು ಕೈ ಬಿಟ್ಟಿದ್ದೀರಿ, ಅವುಗಳ ಮೇಲೆ ತೆರಿಗೆ ಹಾಕಬೇಕು ಮತ್ತು ಯಾವ ವಸ್ತುಗಳ ಮೇಲೆ ತೆರಿಗೆ ಹಾಕಿರುವುದರಿಂದ ಜನ ಸಾಮಾನ್ಯರ ಮೇಲೆ ಕೆಟ್ಟ ಪರಿಣಾಮವಾಗುತ್ತದೆ ಅಂಥಾದ್ದನ್ನು ಕಡಿಮೆ ಮಾಡಬೇಕು ಅಥವಾ ಕೈಬಿಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಸಚಿವರು ಮುಂದಿಸಿರತಕ್ಕ ಈ ಮಾರಾಟ ತೆರಿಗೆ ತಿದ್ದುಪಡಿ ಮಸೂದೆಯನ್ನು ನಾನು ವಿರೋಧಿಸಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ದೇಶದಲ್ಲಿ ತೆರಿಗೆ ರಹಿತವಾದಂಥ ಒಂದು ಸಮಾಜವನ್ನು ಕಟ್ಟಬೇಕು ಎನ್ನುವ ಆಸೆ ಬಹಳ ಜನರಿಗೆ ಇರುತ್ತದೆ. ತೆರಿಗೆ ಇಲ್ಲದಂಥ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ಈ ದೇಶದಲ್ಲಿ ಸಾಧ್ಯ ಎನ್ನುವ ವಾದ ಕೆಲವರದು ಇದೆ. ಇಲ್ಲ ಎಂದು ಇಲ್ಲ. ಈ ವಾದ ಸಮರ್ಥನೆ ಯಾವ ಆಧಾರದ ಮೇಲೆ ಮಾಡುತ್ತಾರೆ ಎನ್ನುವ ಅಭಿಪ್ರಾಯ ಅವರಿಗೆ ಬಿಟ್ಟಿದ್ದು. ಹೆಚ್ಚಿಗೆ ಸಂಪನ್ಮೂಲಗಳನ್ನು ರೂಢಿಸಿಕೊಂಡು ಆರ್ಥಿಕವಾಗಿ ಪ್ರತಿಯೊಬ್ಬ ಪ್ರಜೆ ಮಟ್ಟ ಮೇಲಕ್ಕೆ ಬಂದರೆ ಮಾತ್ರ ಸಾಧ್ಯವಾಗುತ್ತದೆ. ತೆರಿಗೆ ರಹಿತವಾದ ಸಮಾಜವನ್ನು ಕಟ್ಟುವುದಕ್ಕೆ ಆರ್ಥಿಕವಾಗಿ ಬೆಳವಣಿಗೆಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇಲ್ಲಿಯವರೆವಿಗೂ ಅದು ಸಾಧ್ಯವಾಗಿಲ್ಲ ಎನ್ನುವ ಮಾತು ಸರ್ವ ವಿದಿತ, ಪ್ರಸ್ತುತ ಪರಿಸ್ಥಿತಿಯಲ್ಲಿ ನಾವು ತೆರಿಗೆ ಇಲ್ಲದೆ ಆಡಳಿತ ನಡೆಸುತ್ತೇವೆ ಎನ್ನುವ ಮಾತನ್ನು ಯಾರಾದರೂ ಹೇಳಿದರೆ ಅದು ಬಹಳ ಅರ್ಥಹೀನ ಮಾತು ಎಂದು ಅನೇಕ ಜನ ಭಾವನೆ ಮಾಡುತ್ತಾರೆ. ಉದಾಹರಣೆಗೆ ದೇವೇಗೌಡರಿಗೆ ಗೊತ್ತಿದೆ, ಘೋರ್ಪಡೆಯವರು ಹಣಕಾಸಿನ ಸಚಿವರಾದ ಕೂಡಲೇ ಮೊಟ್ಟ ಮೊದಲನೆಯ ಸಾರಿ ಆಯ್ಯವಯ ಪತ್ರವನ್ನು ಮುಂಡನೆ ಮಾಡಿದಾಗ ತೀರಾ ಕಡಿಮೆ ತೆರಿಗೆಗಳು ಇರತಕ್ಕ ಬಡ್ಜೆಟ್ಟನ್ನು ಮುಂಡನೆ ಮಾಡಿದರು.

ಶ್ರೀ ಎಚ್. ಡಿ. ದೇವೇಗೌಡ.—ಅವರು ಹೇಳಿದ್ದು ಶಾಸ್ತ್ರೀಯವಾಗಿ ಸಮಗ್ರವಾಗಿ ಯೋಚನೆ ಮಾಡಿ ಆಮೇಲೆ ತೆರಿಗೆಯನ್ನು ಹಾಕುತ್ತೇವೆಂದು ಹೇಳಿದರು.

ಶ್ರೀ ಎಸ್. ಬಂಗಾರಪ್ಪ.—ತೆರಿಗೆಯನ್ನು ಹಾಕುವಾಗ ಎಷ್ಟು ಕಡಿಮೆ ಸಾಧ್ಯವೋ ಅಷ್ಟು ತೆರಿಗೆಯನ್ನು ಹಾಕಿರತಕ್ಕ ಈ ಒಂದು ಆಯವ್ಯಯ ಪತ್ರ ಎನ್ನತಕ್ಕ ಮಾತನ್ನು ಮಾನ್ಯ ಸಚಿವರು ಆಗ ತಿಳಿಸಿದ್ದರು. ಆಗ ಈ ಸಂದರ್ಭದಲ್ಲಿ ಯಾವ ಮಟ್ಟಕ್ಕೆ ಚರ್ಚೆ ಹೋಯಿತು ಎಂದರೆ ಯಾವ ಹಣಕಾಸಿನ ಸಚಿವರು ಕೂಡ ಇಷ್ಟೊಂದು ಕಡಿಮೆ ತೆರಿಗೆ ಇರತಕ್ಕ ಆಯವ್ಯಯಪತ್ರ ಮುಂಡನೆ ಮಾಡಿಲ್ಲ, ಇದು ನಮ್ಮ ಸರ್ಕಾರದ ಹೊಸ ನೀತಿಗೆ, ಹೊಸ ಆಡಳಿತಕ್ಕೆ ಸ್ಪಷ್ಟವಾದ ನಿದರ್ಶನ ಎನ್ನತಕ್ಕ ಮಾತನ್ನು ತಿಳಿಸಿದ್ದಾರೆ.

ಮಾನ್ಯ ಘೋರ್ಪಡೆಯವರು ಆ ರೀತಿ ತಮ್ಮ ಆಯ್ಯವ್ಯಯ ಪತ್ರದಲ್ಲಿ ಹೇಳಿದ್ದರೂ ಸಹ, ಅವರು ಒಂದು ಕ್ಯಾಬಿನೆಟ್‌ದಲ್ಲಿ ಯಾವ ಯಾವ ಸ್ಫೋಟಕ ವಸ್ತುಗಳು ಇವೆಯೋ, ಅವುಗಳನ್ನು ಯಾವ ಸಂದರ್ಭದಲ್ಲಿ ಆಸ್ಫೋಟನೆಗೆ ಒಳಪಡಿಸುತ್ತಾರೋ ಎಂಬತಕ್ಕಂಥ ಶಂಕೆ ಅನೇಕ ಮಾನ್ಯ ಸದಸ್ಯರಿಗೆ ಇದ್ದೇ ಇತ್ತು. ಆ ಬಗ್ಗೆ ತಮ್ಮ ಶಂಕೆಯನ್ನು ಸಹ ವ್ಯಕ್ತಪಡಿಸಿದ್ದಾರೆ. ಅದರಂತೆ ಈ ಸಲ ತಾವು ಅನೇಕ ವಸ್ತುಗಳ ಮೇಲೆ ತೆರಿಗೆ ಹಾಕಿದ್ದೀರಿ. ಯಾವ ರೀತಿ ತೆರಿಗೆ ಹಾಕಿದ್ದೀರಿ ಎಂದರೆ, ಕಂಡಕಂಡದ್ದಕ್ಕೆಲ್ಲಾ ಹಾಕುವುದಕ್ಕೆ ಹೊರಟಿದ್ದೀರಿ. ತೆರಿಗೆ ಹಾಕತಕ್ಕಂಥ ನೀತಿ ಏನಿದೆ, ಅದನ್ನು ಕೈಬಿಟ್ಟು ತಮ್ಮ ಮನಸೋಯಿಚ್ಛೆ ಹಾಕಿದ್ದೀರಿ. ತೆರಿಗೆ ಹಾಕುವುದಕ್ಕೆ ಸಕಾರಣಗಳು ಇರಬೇಕು ಆದರೆ ಸಕಾರಣಗಳು ಇಲ್ಲದೆ ಹಾಕಿದ್ದೀರಿ. ಈ ವಿಷಯದಲ್ಲಿ ನಿಮ್ಮ ಒಂದು ತಕ್ಕಡಿಯ ತೂಕ ಮೀರಿ ಹೋಗಿದೆ. ತೆರಿಗೆ ಹಾಕತಕ್ಕಂಥ ಬುದ್ಧಿಯೇ ಇಲ್ಲಿ ಬಹಳಮಟ್ಟಿಗೆ ಹೆಚ್ಚುಕಡಿಮೆಯಾಗಿದೆ. ತೆರಿಗೆ ಹಾಕುವ ಬಗ್ಗೆ ಏನು ಒಂದು ಪರಿಜ್ಞಾನ ಇರಬೇಕಾಗುತ್ತದೋ, ಅದೇ ತಪ್ಪಿ ಹೋಗಿದೆ ಎಂದು ನಾನು ಮಾನ್ಯ ಘೋರ್ಪಡೆಯವರಿಗೆ ಹೇಳಬೇಕಾಗಿದೆ. ಯಾವುದಕ್ಕೆ ತೆರಿಗೆ ಹಾಕಬೇಕು, ಯಾವುವುದಕ್ಕೆ ಹಾಕಬಾರದು. ಹಾಕುವುದಿದ್ದರೆ ಎಷ್ಟು ಹಾಕಬೇಕು ಎಂಬುದು ಇವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಇಲ್ಲಿ ನಮಗೆ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ಈ ಪಟ್ಟಿಯಲ್ಲಿ ಕೊಟ್ಟಿರುವ ಎಲ್ಲ ಐಟಮ್ಸ್ ಬಗ್ಗೆ ಹೇಳದೆ ಕೆಲವು ಐಟಮ್ಸ್ ಬಗ್ಗೆ ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಕೆಲವು ಪದಾರ್ಥಗಳ ಮೇಲಿನ ತೆರಿಗೆಯನ್ನು ವಿಪರೀತ ಜಾಸ್ತಿ ಮಾಡಿದ್ದೀರಿ. ಮತ್ತೆ ಕೆಲವು ಪದಾರ್ಥಗಳ ಮೇಲಿನ ತೆರಿಗೆಯನ್ನು ವಿಪರೀತ ಕಡಿಮೆ ಮಾಡಿದ್ದೀರಿ. ಇಂತಹ ಸಂದರ್ಭಗಳಲ್ಲಿ ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಎಲ್ಲರ ಅಭಿಪ್ರಾಯಗಳು

ಒಂದೇರೀತಿ ಬರುತ್ತದೆ. ತೆರಿಗೆ ಇಲ್ಲದಿರತಕ್ಕಂಥ ಸಮಾಜವನ್ನು ಕಟ್ಟುತ್ತೇವೆಂದು ಯಾರಾದರೂ ಹೇಳಿದರೆ ಅದನ್ನು ಒಪ್ಪುವುದಕ್ಕೆ ಸಾಧ್ಯವಾಗದಿದ್ದರೂ ಸಹ, ತೆರಿಗೆಯನ್ನು ಹಾಕಬೇಕಾದರೆ ಯಾವ ಒಂದು ನೀತಿಯನ್ನು ಅನುಸರಿಸಬೇಕು ಎಂಬತಕ್ಕಂಥ ಪ್ರಶ್ನೆ ಇಲ್ಲಿ ಅಡಕವಾಗಿದೆ. ಅದು ಇಲ್ಲಿ ಬಹಳ ಮುಖ್ಯವಾದುದು. ಜನಸಾಮಾನ್ಯರು ಮತ್ತು ಮಧ್ಯಮವರ್ಗದವರು ಉಪಯೋಗ ಮಾಡತಕ್ಕಂಥ ಕೆಲವು ಅತ್ಯಾವಶ್ಯಕ ವಸ್ತುಗಳು ಏವಿವೆ, ಅವುಗಳ ಮೇಲೆ ತೆರಿಗೆ ಹಾಕುವುದನ್ನು ಕೈಬಿಡಬೇಕಾಗುತ್ತದೆ. ಮಾನ್ಯ ಘೋರ್ಪಡೆಯವರಿಗೆ ಗೊತ್ತಿರುವಂತೆ ನಮ್ಮ ದೇಶದಲ್ಲಿ ಶೇಕಡ 80 ರಿಂದ 90ರಷ್ಟು ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಇವರೆಲ್ಲಾ ಬಡವರಾಗಿದ್ದಾರೆ. ಕಡುಬಡವರೂ ಸಹ ಇದ್ದಾರೆ. ಈ ಜನರು ಉಪಯೋಗ ಮಾಡುವ ದಿನನಿತ್ಯದ ವಸ್ತುಗಳು ಏನಿವೆ, ಅವುಗಳ ಮೇಲೆ ತೆರಿಗೆ ಕಡಿಮೆ ಹಾಕಬೇಕು ಎಂದು ನಾನು ವಾದ ಮಾಡುವುದಿಲ್ಲ; ತೆರಿಗೆಯನ್ನೇ ಹಾಕಬಾರದು ಎಂದು ಹೇಳುತ್ತೇನೆ. ಈ ಅಗತ್ಯವಸ್ತುಗಳನ್ನು ತೆರಿಗೆಯಿಂದ ವಿಮುಕ್ತ ಮಾಡುವುದರ ಮೂಲಕ ಮುಕ್ತಿ ಕೊಡಬೇಕೆಂದು ಹೇಳುತ್ತೇನೆ. ಅಪ್ಪಿತಪ್ಪಿ ತೆರಿಗೆ ಹಾಕಲೇಬೇಕು ಎಂದು ಏನಾದರೂ ಕಂಡುಬಂದರೆ, 'Neglible tax has been levied on these articles' ಅನ್ನುವ ಅಭಿಪ್ರಾಯ ಬರುವ ಹಾಗಿದ್ದರೆ ಆಗ ತೆರಿಗೆ ಹಾಕತಕ್ಕಂತ ನೀತಿಗೆ ಅರ್ಥವಿರುತ್ತದೆ. ಆಗ ತೆರಿಗೆ ಹಾಕಬಹುದು ಎಂಬ ಮಾತಿನ ಚೌಕಟ್ಟಿಗೆ ಎಲ್ಲರೂ ಬರಬೇಕಾಗುತ್ತದೆ. ಇಲ್ಲಿ All arms including guns, rifles, revolvers, pistoles and ammunition for the same ಎಂದು ಹೇಳಿ ಇವುಗಳ ಮೇಲೆ 14 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೀರಿ. ಇದರಿಂದ ಹಳ್ಳಿಗಾಡಿನ ಜನರಿಗೆ ಬಹಳ ತೊಂದರೆಯಾಗುತ್ತದೆ. ಏಕೆಂದರೆ ಅವರು ಸಹ ಬೆಳೆಗಳ ರಕ್ಷಣೆಗಾಗಿ ಮಜಲ್ ಲೋಡಿಂಗ್ ಗನ್ಸ್‌ನ್ನು ಉಪಯೋಗ ಮಾಡುತ್ತಾರೆ. ಈಗ ಕೆಲವು ಲೇಟೆಸ್ಟ್ ಆರ್ಮ್ಸ್ ಬಂದಿವೆ. ಅವುಗಳ ಸಹಾಯದಿಂದ ಕೆಲವರು ಜೀಪ್‌ಗಳಲ್ಲಿ ಬಂಡಿಪುರ, ಶಿವಮೊಗ್ಗ ಮುಂತಾದ ಕಡೆ ಇರುವ ಘೋರ ಅರಣ್ಯಗಳಿಗೆ ಹೋಗಿ ಬೇಟೆಯಾಡುತ್ತಿದ್ದಾರೆ. "Wild Animals Protectidn Act" ಎಂದು ಇದ್ದರೂ ಸಹ ಬೇಟೆಯಾಡುವುದು ನಿಂತಿಲ್ಲ. ಅದರಲ್ಲಿಯೂ ಈ ಸರ್ಚ್‌ಲೈಟಿನ ಉಪಯೋಗ ಬಂದಮೇಲಂತೂ ಕಾಡಿನಲ್ಲಿರುವ ಎಲ್ಲ ಪ್ರಾಣಿಗಳನ್ನು ಸಂಪೂರ್ಣವಾಗಿ ನಾಶ ಮಾಡಿಬಿಟ್ಟಿದ್ದಾರೆ. ಈ ತೋಟಾಗಳನ್ನು ಉಪಯೋಗ ಮಾಡಿ ಒಂದು ಸೆಕೆಂಡ್‌ನಲ್ಲಿ ಪ್ರಾಣಿಗಳನ್ನು ಕೊಲ್ಲುತ್ತಾರೆ. ಇಂಥಾದ್ದರ ಮೇಲೆ ಬೇಕಾದರೆ ಹೆಚ್ಚಿನ ತೆರಿಗೆ ಹಾಕಿ, ಆದರೆ ಮಲೆನಾಡು ಪ್ರದೇಶಗಳಾದ ಶಿವಮೊಗ್ಗ, ಕಾರವಾರ, ದಕ್ಷಿಣಕನ್ನಡ ಜಿಲ್ಲೆ, ಚಿಕ್ಕಮಗಳೂರು, ಕೂರ್ಗ ಪ್ರದೇಶಗಳಲ್ಲಿ ಹೆಚ್ಚು ಕಾಡು ಇರುವುದರಿಂದ, ಅಲ್ಲಿ ರೈತರು ಬೆಳೆಯುವ ಬೆಳೆಗಳನ್ನು ಆನೆ, ಕಾಡು ಹಂದಿ ಮುಂತಾದವು ಬಂದು ಲೂಟಿ ಮಾಡುತ್ತೇವೆ. ಆ ಸಂದರ್ಭದಲ್ಲಿ ರೈತರು ಫಸಲು ಸಂರಕ್ಷಣೆಗೋಸ್ಕರ ಮಜಲ್ ಲೋಡಿಂಗ್ ಗನ್ಸ್‌ನ್ನು ಉಪಯೋಗ ಮಾಡುತ್ತಾರೆ ಹಣಕಾಸಿನ ಅನುಕೂಲವಿರುವವರು ತೋಟಾ ಬಂದೂಕಗಳನ್ನು ಉಪಯೋಗ ಮಾಡುತ್ತಾರೆ. ಆದರೆ ಹಳ್ಳಿಯ ಜನರಿಗೆ ಇವುಗಳನ್ನು ಉಪಯೋಗ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ಕಂಟ್ರಿ ಗನ್ಸ್‌ನ್ನು ಉಪಯೋಗ ಮಾಡುತ್ತಾರೆ. ಅದಕ್ಕೆ ಹದವಾಗಿ ಪುಡಿಯನ್ನು ತುಂಬಿ ಕೋಲಿನ ಸಹಾಯದಿಂದ ಒಂದು ಸಲ ಹೊಡೆದರೆ ಮತ್ತೊಂದು ಸಲ ಹೊಡೆಯುವುದಕ್ಕಾಗುವುದಿಲ್ಲ. ಮತ್ತೊಂದು ಸಲ ಹೊಡೆಯಬೇಕಾದರೆ ಮತ್ತೆ ಪುಡಿ ತುಂಬಬೇಕಾಗುತ್ತದೆ. ಅದಕ್ಕೆ ಸಮಯ ಬೇಕಾಗುತ್ತದೆ, ಕಾಡು ಪ್ರಾಣಿಗಳನ್ನು ಓಡಿಸಲು ಇದನ್ನು ಉಪಯೋಗಿಸುತ್ತಾರೆ. ಇಂಥಾದ್ದರ ಮೇಲೆ ತೆರಿಗೆ ಹಾಕುವುದು ಸರಿಯಲ್ಲ; ಈ ವಿಷಯ ಎಷ್ಟೋ ಸಲ ಪಾರ್ಲಿಮೆಂಟನಲ್ಲಿಯೂ ಸಹ ಬಂದಿದೆ. ನಾವು ಸಕಾರಣ ಕೊಟ್ಟು ಹೇಳುತ್ತಿರುವುದರಿಂದ ಇದರ ಮೇಲಿನ ತೆರಿಗೆಯನ್ನು ಕೈಬಿಡಬೇಕು. ಇದು ಬಡವರು ಉಪಯೋಗ ಮಾಡುವ ವಸ್ತುವಾಗಿದೆ. ಒಂದು ಸಲ ಕಾಡು ಹಂದಿಗಳ ತಂಡ ಬಂದು ಬೆಳೆ ಹಾಳುಮಾಡಿಬಿಟ್ಟರೆ ಒಂದು ಚೀಲ ಸಹ ಭತ್ತ ಸಿಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ರೈತರು ಜೀವನ ಮಾಡುವುದು ಕಷ್ಟವಾಗಿಬಿಡುತ್ತದೆ. ಮಲೆನಾಡಿನ ರೈತರು ತಮ್ಮ ಬೆಳೆ ರಕ್ಷಣೆ ಮಾಡಲು ಕಂಟ್ರೀ ಗನ್ಸ್‌ನ್ನು ಉಪಯೋಗ ಮಾಡುತ್ತಾರೆ. ಆದಕಾರಣ ಇಲ್ಲಿ 'All arms including guns, rifles, revolvers, pistoles and ammunition for the same' ಎಂದು ಏನು ಹೇಳಿದ್ದೀರಿ, ಅದರಲ್ಲಿ ಮಜಲ್ ಲೋಡಿಂಗ್ ಗನ್ಸ್ ಅಂದರೆ ಕಂಟ್ರಿ ಗನ್ಸ್ ಬಿಟ್ಟು ಎಂದು ಸೇರಿಸಿದರೆ ಹಳ್ಳಿಯ ರೈತರು ಉಳಿಯುತ್ತಾರೆ. ಇಲ್ಲದಿದ್ದರೆ ಅವರು ತಮ್ಮ ಬೆಳೆ ರಕ್ಷಣೆ ಮಾಡಿಕೊಳ್ಳುವುದು ಕಷ್ಟವಾಗುತ್ತದೆ. 14 ಪರ್ಸೆಂಟ್ ಟ್ಯಾಕ್ಸ್ ಕೊಡುವ ಶಕ್ತಿ ಅವರಿಗೆ ಇರುವುದಿಲ್ಲ. ಆದಕಾರಣ ಉತ್ತರದಲ್ಲಿ ಈ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕು. ಮಜಲ್ ಲೋಡಿಂಗ್ ಗನ್ಸ್ ಮೇಲಿನ ತೆರಿಗೆಯನ್ನು ಕೈಬಿಡುತ್ತೇನೆ. ಎಂಬ ಮಾತನ್ನು ತಿಳಿಸಬೇಕು. ಅದನ್ನು ತಾವು ಒಪ್ಪಿಕೊಳ್ಳುತ್ತೀರಿ ಎಂದು ನಾನು ನಂಬಿಕೊಂಡಿದ್ದೇನೆ.

(ಶ್ರೀ ಎಸ್. ಬಂಗಾರಪ್ಪ)

ಇನ್ನು ಬೈಸಿಕಲ್ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಇತರೇ ವಸ್ತುಗಳ ಮೇಲೆ 6 ಪರ್ಸೆಂಟ್ ತೆರಿಗೆ ಹಾಕಿದ್ದಾರೆ. ಅದೇರೀತಿ Marble slabs and artic es made of marbl ಮೇಲೆ ಸಹ 6 ಪರ್ಸೆಂಟ್ ತೆರಿಗೆ ಹಾಕಿದ್ದಾರೆ. ಇದು ಬಹಳ ಕಡಿಮೆ. ಭೋಗ ವಸ್ತುಗಳ ಮೇಲೆ ತೆರಿಗೆ ಜಾಸ್ತಿ ಹಾಕಿ, ನಾವು ಬೇಡ ಎಂದು ಹೇಳುವುದಿಲ್ಲ; ಆದರೆ ಬಡವರು ಉಪಯೋಗಿಸುವ ವಸ್ತುಗಳ ಮೇಲೆಯೂ ಸಹ ತೆರಿಗೆ ಹಾಕುವುದು ಸರಿಯಲ್ಲ; ಮಾನ್ಯ ಅಧ್ಯಕ್ಷರೇ, ತಾವೂ ಸಹ ಹಳ್ಳಿಗಾಡಿನಿಂದ ಬಂದವರು; ಆದಕಾರಣ ತಮಗೂ ಸಹ ಗೊತ್ತಿರಬಹುದು, ಏನೆಂದರೆ ಹಳ್ಳಿಯ ಜನರಿಗೆ ಏನಾದರೂ ಒಂದು ನಯವಾದ ಕಲ್ಲು ಸಿಕ್ಕಿದರೆ ಅದನ್ನು ತಮ್ಮ ಮನೆಗೆ ತೆಗೆದುಕೊಂಡು ಹೋಗಿ ಇಟ್ಟುಕೊಳ್ಳುತ್ತಾರೆ. ಇಂದಿಗೂ ಸಹ ಹಳ್ಳಿಗಳಲ್ಲಿ ಜನರು ಹೆಚ್ಚಾಗಿ ಗುಡಿಸಿಲಿನಲ್ಲಿಯೇ ವಾಸ ಮಾಡುತ್ತಿದ್ದಾರೆ. ಯಾರಾದರೂ ಅಪರೂಪವಾಗಿ ಘಾರದ ದಿಮ್ಮಿ ಮತ್ತು ಕಲ್ಲುಗಳನ್ನು ಉಪಯೋಗಿಸಿ ಮನೆ ಕಟ್ಟಿಸಿದರೆ, ದೊಡ್ಡವರು ಮನೆ ಕಟ್ಟಿಸಿದ್ದಾರೆ ಎಂದು ನೋಡುವುದಕ್ಕೆ ಜನರು ಹೋಗುತ್ತಾರೆ. ಇನ್ನು ಮಾರ್ಬಲ್‌ನಿಂದ ಯಾರಾದರೂ ಮನೆ ಕಟ್ಟಿಸಿ ಬಿಟ್ಟರೆ ಜನರು ತಿಂಗಳಗಟ್ಟಲೆ ಅದನ್ನು ನೋಡುವುದಕ್ಕೆ ಹೋಗುತ್ತಾರೆ. ಅಂಥವರು ಸೊಂಡೂರು ತಾಲ್ಲೂಕಿಗೆ ಹೋದರೂ ಸಿಕ್ಕುತ್ತಾರೆ, ಇವೊತ್ತು ದೆಹಲಿಯಲ್ಲಿ ನೂರಾರು ವರ್ಷಗಳ ಹಿಂದೆ ಕಟ್ಟಿರತಕ್ಕ ಕೆಂಪು ಕೋಟೆಯನ್ನು ಮತ್ತು ಪಾರ್ಲಿಮೆಂಟ್ ಭವನವನ್ನು ನೋಡುವುದಕ್ಕೆ ಅನೇಕ ಜನ ಹೋಗುತ್ತಾರೆ. ಆದ್ದರಿಂದ ನಮ್ಮ ಜನಗಳಿಗೆ ಮನೆಗಳನ್ನು ಕಟ್ಟುವುದಕ್ಕೆ ಮಾರ್ಬಲ್ ಉಪಯೋಗ ಮಾಡತಕ್ಕ ಶಕ್ತಿ ಇಲ್ಲ. ಆದರೆ ಇತ್ತೀಚೆಗೆ ಬೆಂಗಳೂರಿನಲ್ಲಿ ಎಲ್ಲಿ ನೋಡಿದರೂ ಒಂದು ಹೊಸ ನಮೂನೆಯ ಮಾರ್ಬಲ್ ಆರ್ಟಿಫಿಷಿಯಲ್ ಮಾರ್ಬಲ್ ಉಪಯೋಗ ಮಾಡಿ ಮನೆಗಳನ್ನು ಕಟ್ಟುತ್ತಿದ್ದಾರೆ. ಅದು ಬಹಳ ಬೆಲೆಯಾಗುತ್ತದೆ. ಇವೊತ್ತು ಪ್ಯಾಲೇಸ್ ಆರ್ಚರ್ಡ್, ಜಯನಗರ, ರಾಜಾಜಿ ನಗರ, ಜಯಮಹಲ್ ಈ ಬಡಾವಣೆಗಳಲ್ಲಿ ಈ ಆರ್ಟಿಫಿಷಿಯಲ್ ಮಾರ್ಬಲ್ ಉಪಯೋಗ ಮಾಡಿ ಮನೆಗಳನ್ನು ಕಟ್ಟುತ್ತಿದ್ದಾರೆ. ಒಂದು ತರಹ ಫ್ಯಾಷನ್ ಕಲ್ಲನ್ನು ಡೆಕೋರೇಷನ್‌ಗೋಸ್ಕರ ಮನೆಯ ಮುಂಭಾಗದ ಗೋಡೆಗೆ ಚುಚ್ಚುತ್ತಿದ್ದಾರೆ, ಸಿಕ್ಕಿಸುತ್ತಿದ್ದಾರೆ. ಈ ಆರ್ಟಿಫಿಷಿಯಲ್ ಮಾರ್ಬಲ್ಸ್‌ಗೆ 6 ಪರ್ಸೆಂಟ್ ತೆರಿಗೆಯನ್ನು ಹಾಕಿದ್ದಾರೆ. ಈ ಮಾರ್ಬಲ್ಸ್ ಹಾಕಿ ಟ್ರಸ್ಟ್‌ಬೋರ್ಡ್ ಸ್ಕೈಟಿನಲ್ಲಿ ಮನೆ ಕಟ್ಟುವುದಿಲ್ಲ. ಇಂಥಾದ್ದಕ್ಕೆ 6 ಪರ್ಸೆಂಟ್ ತೆರಿಗೆಯನ್ನು ಹಾಕಿರುವುದು ಸರಿಯಲ್ಲ. ತೆರಿಗೆಯನ್ನು ಹಾಕದೆ ಇರತಕ್ಕ ಸರ್ಕಾರ ಬಂದರೆ ಒಳ್ಳೆಯದು. ಆದರೆ ತೆರಿಗೆಯನ್ನು ಹಾಕಿರುವುದು ಸರಿಯಲ್ಲ. ತೆರಿಗೆಯನ್ನು ಹಾಕದೆ ಇರತಕ್ಕ ಸರ್ಕಾರ ಬಂದರೆ ಒಳ್ಳೆಯದು. ಆದರೆ ತೆರಿಗೆಯನ್ನು ಹಾಕುವುದನ್ನು ನಾನು ಒಪ್ಪುತ್ತೇನೆ. ತೆರಿಗೆಯನ್ನು ಹಾಕಲೇಬಾರದು ಎಂದು ನಾನು ಹೇಳುವುದಿಲ್ಲ. ಆದರೆ ಯಾವ ವಸ್ತುಗಳ ಮೇಲೆ ತೆರಿಗೆಯನ್ನು ಹಾಕಬೇಕು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಈ ಮಾರ್ಬಲ್‌ಗೆ ಸಂಬಂಧಪಟ್ಟ ವಸ್ತುಗಳು ಏನಿರುತ್ತವೆ ಅವುಗಳಿಗೆ ಮತ್ತು ಮೊಜಾಯಿಕ್ ಟೈಲ್ಸ್ ಚಿಪ್ಸ್ ಇವುಗಳಿಗೆ ಬೇಕಾದರೆ ಟ್ಯಾಕ್ಸ್ ಜಾಸ್ತಿ ಹಾಕಿ. 6 ಪರ್ಸೆಂಟ್ ಇರುವುದನ್ನು 15ರಷ್ಟು 20 ರಷ್ಟನ್ನು ಮಾಡಿ. ನಾನು ಬೇಡ ಎಂದು ಹೇಳುವುದಿಲ್ಲ.

10–00 A.M.

ಆಮೇಲೆ ಬೈಸಿಕಲ್ ಮೇಲೆ ಮತ್ತು ಅದರ ಅಸೆಸರೀಸ್ ಮೇಲೆ 6 ಪರ್ಸೆಂಟ್ ತೆರಿಗೆಯನ್ನು ಹಾಕಿದ್ದೀರಿ. ನಾನು ಪತ್ರಿಕೆಯಲ್ಲಿ ನೋಡಿದ ರೀತಿಯಲ್ಲಿ ಪೂನಾದಲ್ಲಿ ಬೈಸಿಕಲುಗಳು ಜಾಸ್ತಿ ಇವೆ; ಎಂದು ಹೇಳಿದ್ದಾರೆ. ಆದರೆ ಬೆಂಗಳೂರು ನಗರದಲ್ಲಿ ಸೈಕಲ್‌ಗಳು ಕಡಿಮೇ ಏನೂ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯವಾಗಿ ಹಳ್ಳಿಗಳಲ್ಲೆಲ್ಲಾ ಜನಗಳು ಸೈಕಲ್‌ಗಳನ್ನು ಉಪಯೋಗಿಸುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ಕಾರುಗಳ ಸಂಖ್ಯೆ ಸ್ವಲ್ಪ ಇದ್ದರೂ ಕೂಡ ಬೈಸಿಕಲ್‌ಗಳನ್ನು ಜಾಸ್ತಿ ಉಪಯೋಗಿಸುತ್ತಾರೆ. ಈ ಬೈಸಿಕಲ್‌ಗಳನ್ನು ಜನಸಾಮಾನ್ಯರು ಉಪಯೋಗಿಸುತ್ತಾರೆ. ಆದ್ದರಿಂದ ಈ ಬೈಸಿಕಲ್ ಮೇಲೆ ಮತ್ತು ಅದರ ಅಸೆಸರೀಸ್ ಮೇಲೆ ಹಾಕಿರತಕ್ಕ ತೆರಿಗೆಯನ್ನು ದಯಮಾಡಿ ತೆಗೆದುಹಾಕಬೇಕು. ಇದನ್ನು ಹಾಕಬಾರದು. ಇದರ ಮೇಲೆ 6 ಪರ್ಸೆಂಟ್ ತೆರಿಗೆಯನ್ನು ಏನು ಹಾಕಿದ್ದಾರೆ ಅದನ್ನು ತೆಗೆದುಹಾಕಬೇಕು. ಷೀಟ್ಸ್, ಕುಷನ್ಸ್, ಪಿಲ್ಲೋಸ್, ಇತ್ಯಾದಿಗಳ ಮೇಲೆ 12 ಪರ್ಸೆಂಟ್ ತೆರಿಗೆಯನ್ನು ಹಾಕಿದ್ದಾರೆ. ಇದನ್ನು ಬೇಕಾದರೆ ಜಾಸ್ತಿ ಮಾಡಬಹುದು. ಆ ಮೇಲೆ ಸೀರಿಯಲ್ ನಂಬರ್ 17ರಲ್ಲಿ ಹೇಳಿರು ಆರ್ಟಿಕಲ್‌ಗಳಿಗೆ ಎಂದರೆ

ಸೌಂಡ್‌ಟ್ರಾನ್ಸಿಟಿಂಗ್ ಎಕ್ವಿಪ್‌ಮೆಂಟ್ ಇನ್‌ಕ್ಲೂಡಿಂಗ್ ಟೆಲಿಫೋನ್‌, ಲೌಡ ಸ್ಪೀಕರ್ಸ್ ಮತ್ತು ಅದರ ಸ್ಪೇರ್‌ಪಾರ್ಟ್ಸ್ ಇವುಗಳಿಗೆ 14 ಪರ್ಸೆಂಟ್ ತೆರಿಗೆಯನ್ನು ಹಾಕಿದ್ದಾರೆ. ಇದನ್ನು ಜಾಸ್ತಿ ಮಾಡಬೇಕು. ಟೈಪ್‌ರೈಟರ್ಸ್ ಟ್ಯಾಬುಲೇಟಿಂಗ್ ಮೆಷಿನ್ಸ್ ಇವುಗಳಿಗೆ ಜಾಸ್ತಿ ಮಾಡಬಹುದು.

ಇನ್ನು ಸ್ಯಾನಿಟರಿ ಫಿಟಿಂಗ್ಸ್‌ಗೆ 8 ಪರ್ಸೆಂಟ್ ತೆರಿಗೆಯನ್ನು ಹಾಕಿದ್ದಾರೆ. ಕೆಲವು ಮನೆಗಳಲ್ಲಿ ಸ್ಯಾನಿಟರಿ ಫಿಟಿಂಗ್ಸ್ ನೋಡಬೇಕು. ಶ್ರೀಮಾನ್ ಘೋರ್ಪಡೆಯವರಿಗೆ ಚೆನ್ನಾಗಿ ಪರಿಚಯ ಇದೆ. ನಮ್ಮ ಊರಿನಲ್ಲಿ ಬಚ್ಚಲು ಮನೆ ಇದೆ. ಅದನ್ನು ಯಾರಾದರೂ ನೋಡಿದ್ದೀರಾ? ನಮ್ಮ ಊರಿನಲ್ಲಿರುವ ಬಚ್ಚಲು ಮನೆಯ . ಒಂದು ಮಣ್ಣಿನ ಕೊಡ ಇರುತ್ತದೆ ಮತ್ತು ಒಂದು ಹಸೆಕಲ್ಲು ಇರುತ್ತದೆ. ಆ ಮಣ್ಣಿನ ಕೊಡದ ಮೇಲೆ ಮುಚ್ಚಿರುವುದಕ್ಕೆ ಪಲ್ಪಿ ಎಂದು ಹೇಳುತ್ತಾರೆ. ಈ ಮಡಿಕೆ ಕುಡಿಕೇನೂ ಸ್ಯಾನಿಟರಿ ಫಿಟಿಂಗ್ಸ್ಸೇ. ನೀರು ಹಾಕಿಕೊಂಡರೆ ಕೆಳಗಡೆ ಎಲ್ಲಾ ಕೆಸರು ಕಾಲಿಗೆ ಹತ್ತಿಕೊಳ್ಳುತ್ತದೆ

ಒಬ್ಬರು ಮಾನ್ಯ ಸದಸ್ಯರು.—ನಿಮ್ಮ ಮನೆಯ ಬಚ್ಚಲು ಮನೆಯೂ ಹಾಗೆಯೇ ಇದೆಯೇ ?

ಶ್ರೀ ಎಸ್. ಬಂಗಾರಪ್ಪ.—ಇದು ನನ್ನ ಒಬ್ಬನ ಪ್ರಶ್ನೆ ಅಲ್ಲ ನಮ್ಮ ಸಣ್ಣ ಬಚ್ಚಲು ಮನೆಯನ್ನು ನಾನು ಗಾರಿಯಲ್ಲಿ ಮಾಡಿಸಿದ್ದೇನೆ. ಅದನ್ನು ಬಿಟ್ಟು ಮನೆಯ ಒಳಗಡೆ ಬರಬೇಕಾದರೆ ಮಣ್ಣನ್ನು ತುಳಿದುಕೊಂಡೇ ಬರಬೇಕು. ನಮ್ಮ ಊರಿನ ಸ್ಯಾನಿಟರಿ ಫಿಟಿಂಗ್ಸ್‌ನಲ್ಲಿ ಮಡಿಕೆ ಕುಡಿಕೆ ಇದೆ. ಮಣ್ಣಿದ ಕೊಡ ಇದೆ. ಒಂದು ಒರಟಾದ ಹಸೆಕಲ್ಲು ಇದೆ. ಮಣ್ಣಿನ ಕೊಡದಿಂದ ನೀರು ತೆಗೆದುಕೊಂಡು ಮೈ ಕೈ ತೊಳೆದುಕೊಳ್ಳುವುದಕ್ಕೆ ಒಂದು ಮಗೆ ಉಪಯೋಗ ಮಾಡುತ್ತಾರೆ. ಇದು ನಮ್ಮ ಊರಿನ ಬಚ್ಚಲು ಮನೆಯ ಸ್ಯಾನಿಟರಿ ಫಿಟಿಂಗ್ಸ್. ಈ ಬಚ್ಚಲು ಮನೆಯನ್ನು ಬೆಂಗಳೂರಿನ ಜನ ನೋಡಿದರೆ ಅದು ಗೊತ್ತಾಗುತ್ತದೆ, ಆದರೆ ಈ ಬೆಂಗಳೂರು ನಗರದಲ್ಲಿ ಕೆಲವು ಕಡೆ ಇರುವ ಬಚ್ಚಲು ಮನೆಗಳನ್ನು ನಮ್ಮ ಕಡೆ ಇರುವ ಜನಗಳು ನೋಡಿದರೆ ಇದರಲ್ಲಿ ರಿಸಸ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಏತಕ್ಕೆಂದರೆ ಅಷ್ಟೊಂದು ಚೆನ್ನಾಗಿವೆ. ಈ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಮಡಿಕೆ ಕುಡಿಕೇನೂ ಸ್ಯಾನಿಟರಿ ಫಿಟಿಂಗ್ಸೇ ಇಲ್ಲಿ ಬೆಂಗಳೂರಿನಲ್ಲಿರುವ ಸಪ್ತವರ್ಣ ಶಿಲಾರಂಜಿತ ಬಾತ್‌ಟಬ್ಬುಗಳ ಡೊಂಕು ಡೊಂಕಾದ ಪೈಪುಗಳ ಸೆಂಟಿನ ವಾಸನೆಯ ಬಾತ್‌ರೂಮಿನ ಫಿಟಿಂಗ್ಸ್ ಕೂಡ ಸ್ಯಾನಿಟರಿ ಫಿಟಿಂಗ್ಸ್ಸೇ ? ಈ ಬಾತ್ ಟಬ್ಬುಗಳಲ್ಲಿ ಬಿಸಿ ಬಿಸಿ ನೀರು ಇರುತ್ತದೆ. ಇದರಲ್ಲಿ ಸ್ನಾನ ಮಾಡುತ್ತಾರೆ. ಇದರಲ್ಲಿ ಮೈನೆನೆಸುವುದರಿಂದ ಮನಸ್ಸಿಗೆ ಬಹಳ ಆಹ್ಲಾದವಾಗಿರುತ್ತದೆ. ಚರ್ಮ ಮೃದುವಾಗುತ್ತದೆ. ಈ ಬಾತ್ ರೂಮಿನ ಸುತ್ತಲೂ ಇರತಕ್ಕ ಗೋಡೆಗಳಿಗೆ ನಾನಾವಿಧವಾದ ಬಣ್ಣವನ್ನು ಹಚ್ಚಿರುತ್ತಾರೆ. ಈ ರೀತಿ ರಂಗುರಂಗಾದ ಬಣ್ಣಗಳಿಂದ ಕೂಡಿದ ಸುವಾಸನೆಯಿಂದ ಘಮಘಮಿಸುವ ನೀರಿನಿಂದ ತುಂಬಿರತಕ್ಕ ಬಾತ್ ಟಬ್‌ಗಳಲ್ಲಿ ಮುಳುಗುವುದು ಏಳುವುದು ಈ ರೀತಿ ಮಾಡುತ್ತಿರುತ್ತಾರೆ.

ಈ ವಿವರಣೆಯನ್ನು ನಾನು ಏತಕ್ಕೆ ಕೊಡುತ್ತಿದ್ದೇನೆ ಎಂದರೆ ನಮ್ಮ ಹಳ್ಳಿಗಾಡಿನ ಜನ ಮಲಗಿಕೊಳ್ಳುವುದಕ್ಕೆ ಒಂದು ಮಂಚ ಇಲ್ಲ. ಅವರು ಈವೊತ್ತೂ ಕೂಡ ಮಲಗಿಕೊಳ್ಳುವುದಕ್ಕೆ ಒಂದು ಮಂಚ ಇಲ್ಲ. ಅವರು ಈವೊತ್ತೂ ಕೂತ ಮಲಗಿಕೊಳ್ಳುವುದು ಒಂದು ಚಾಪೆ ಮೇಲೆ. ಆದರೆ ಇದೇ ಪಟ್ಟಣದಲ್ಲಿ ನೋಡಿದರೆ ಅವರು ಮಲಗುವ ಮಂಚ ಅನೇಕ ತರಹ ತರಹವಾದ ಮಂಚಗಳು ಬಂದಿವೆ. ಹಳ್ಳಿಗಾಡಿನ ಜನ ಈವೊತ್ತಿನ ದಿವಸ ಅನೇಕ ತರಹ ಭೋಗವಸ್ತುಗಳ ಸಾಮಾನುಗಳನ್ನು ನೋಡೇ ಇಲ್ಲ. ಅದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ಈವೊತ್ತು ಸ್ಯಾನಿಟರಿ ಫಿಟಿಂಗ್ಸ್ ಅನ್ನುವ ಹೆಸರಿನಲ್ಲಿ ಈ ಬಾತ್‌ಟಬ್ಸ್ ಇಂಥವೆಲ್ಲಾ ಸೇರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಸಾಮಾನ್ಯವಾಗಿ ನಿಮ್ಮ ಬಚ್ಚಲು ಮನೆಗೆ ಬೆಲೆ ಕಟ್ಟುವುದಾದರೆ ನಮ್ಮ ಕಡೆ 5 ಎಕರೆ ತರೀ ಜಮೀನನ್ನು ಕೊಂಡುಕೊಳ್ಳಬಹುದು. ಆದುದರಿಂದ ತಾವು ಯಾವ ವಸ್ತುಗಳಿಗೆ ತೆರಿಗೆಗಳನ್ನು ಹಾಕಬೇಕು ಅನ್ನುವುದನ್ನು ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಆದುದರಿಂದ ನಾನು ಹೇಳುವುದು ಈಗ ತಾವು ಮಸಾಯಕ್ ಟೈಲ್ಸ್ ಚಿಪ್ಸ್, ಮತ್ತು ಸ್ಯಾನಿಟರಿ ಫಿಟಿಂಗ್ಸ್ ಇವಕ್ಕೆ 6 ಪರ್ಸೆಂಟ್ ಏನು ತೆರಿಗೆ ಹಾಕಿದ್ದೀರೋ ಬೇಕಾದರೆ ಅದಕ್ಕೆ 25 ಪರ್ಸೆಂಟ್ ಬೇಕಾದರೂ ತುಂಬಿ ಸರ್ಕಾರಕ್ಕೆ ಹಣ ಬರಲಿ, ನಾನು ಅದಕ್ಕೆ ಬೇಡ ಅನ್ನುವುದಿಲ್ಲ.

ಇನ್ನು ಉಳಿದಿರತಕ್ಕಂಥ ಕೆರೋಸಿನ್ ಆಯಿಲ್ ಮೇಲೆ ತಾವು 4 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೀರಿ. ಇದು ಬಡವರಿಗೆ ಅಗತ್ಯವಾದಂಥ ವಸ್ತು. ಮಾನ್ಯ ಘೋರ್ಪಡೆಯವರು ದಯವಿಟ್ಟು ಇದನ್ನು ಸಂಪೂರ್ಣವಾಗಿ ಕೈಬಿಡಬೇಕು ಎಂದು ಹೇಳುತ್ತೇನೆ.

(ಶ್ರೀ ಎಸ್. ಬಂಗಾರಪ್ಪ)

ಇನ್ನು ಐಟಂ ನಂಬರ್ 38 ನೋಡಿದರೆ ಅದರಲ್ಲಿ all liquor other than country liquorಗೆ 15 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೀರಿ. ಈವೊತ್ತಿನ ದಿವಸ ಲಿಕ್ಕರ್ ಬೀರ್ ಬಾಡಿ ಬೇರೆ ಪ್ರತ್ಯೇಕ ಮಾಡಿದ್ದೀರಿ. ಈವೊತ್ತಿನ ದಿವಸ ಹಳ್ಳಿಗಳಲ್ಲಿ ಒಂದು ಬ್ರಾಂದಿ ಬಾಟಲ್ ಸಿಕ್ಕಿಬಿಟ್ಟರೆ ಅವರಿಗೆ ಒಂದು ದೊಡ್ಡ ಹಬ್ಬ. ಆದರೆ ಅದೇ ಪಟ್ಟಣದಲ್ಲಿ ಅದನ್ನು ನೀರು ಕುಡಿದ ಹಾಗೆ ಉಪಯೋಗಿಸುತ್ತಾರೆ. In Germany no rate is fixed for Beer Anybody can go with a cup in his hand and have as much Beer to drink as he wants. They drink Beer as water. ಆದುದರಿಂದ ಬ್ರಾಂದಿ, ವಿಸ್ಕಿ ಇವಕ್ಕೆ ಬೇಕಾದರೆ ಹೆಚ್ಚಿಗೆ ಟ್ಯಾಕ್ಸ್ ಹಾಕಿ. ಆದರೆ ಟಾಡಿ ಮೇಲೆ ಟ್ಯಾಕ್ಸ್ ಹಾಕುವುದು ಬಹಳ ಅನ್ಯಾಯ. ಏತಕ್ಕೆಂದರೆ ನಿಜವಾಗಿಯೂ ಸರಿಯಾದ ಟಾಡಿಯನ್ನು ಕೊಡುತ್ತಾ ಇಲ್ಲ. ಅದಕ್ಕೆ ಕ್ಲೋರಲ್ ಹೈಡ್ರೇಡ್ ಸೇರಿಸಿ ಕೊಡುತ್ತಾರೆ, ಅದರಿಂದ ಜನರು ತಮ್ಮ ಆರೋಗ್ಯವನ್ನು ಕಳೆದುಕೊಳ್ಳುವುದು ಅಷ್ಟೇ ಅಲ್ಲ ಹಣ ಕೂಡ ಕೊಡಬೇಕಾಗುತ್ತದೆ. ಇದರಿಂದ ಬಡ ಜನರಿಗೆ ಒಂದು ದೊಡ್ಡ ಪೆಟ್ಟು ಬೀಳುವಂತಾಗುತ್ತದೆ. ಆದುದರಿಂದ ಟಾಡಿ ಮೇಲ್ಲಿರುವ ತೆರಿಗೆಯನ್ನು ತೆಗೆಯಬೇಕು ಎಂದು ಹೇಳುತ್ತೇನೆ. ಇನ್ನು ಕಂಟ್ರಿ ಲಿಕ್ಕರ್ ಆದರೆ ದ್ಯಾನ್ ಬಾಡಿ ಮೇಲೆ 45 ಪರ್ಸೆಂಟ್ ಏನು ಹಾಕಿದ್ದೀರೋ ಅದನ್ನು ತೆಗೆಯಬೇಕು ಎಂದು ಹೇಳುತ್ತೇನೆ ಏತಕ್ಕೆಂದರೆ ಹಳ್ಳಿಗಾಡಿನ ಜನರ ಹತ್ತಿರ ಅಷ್ಟು ದುಡ್ಡನ್ನು ಕೊಡುವುದಕ್ಕೆ ಶಕ್ತಿ ಇಲ್ಲ, ಆದುದರಿಂದ ಅದನ್ನು ತೆಗೆಯಬೇಕು.

ಇನ್ನು ಕಾಫಿ ಮತ್ತು ಟೀ ಮೇಲೆ 6 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೀರಿ. ದಯವಿಟ್ಟು ಆ ಟ್ಯಾಕ್ಸನ್ನು ತೆಗೆಯುವುದಕ್ಕೆ ಯೋಚನೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಇನ್ನು Refrigerators, airconditioning plants, component parts of refrigerators or air-conditioning plants ಇದರ ಮೇಲೆ 14 ಪರ್ಸೆಂಟ್‌ಟ್ಯಾಕ್ಸ್ ಹಾಕಿದ್ದೀರಿ. ತಾವು ಇದನ್ನು ಜಾಸ್ತಿ ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ಕಡೆ ಅಂದರೆ ಹಳ್ಳಿಗಾಡಿನ ಕಡೆ ರೆಫ್ರಿಜರೇಟರ್ ಅಂದರೆ ಏನು ಎನ್ನುವುದೇ ಗೊತ್ತಿಲ್ಲ ಹಳ್ಳಿಗಳ ಕಡೆ ಏನು ಇದ್ದರೂ ನಾವು ಮುಳುಗಾಯಿ ಎಂದು ಕರೆಯುತ್ತೇವೆ ಈ ಕಡೆ ಬದನೆಕಾಯಿ ಎಂದು ಕರೆಯುತ್ತಾರೆ, ಆ ಬದನೆಕಾಯಿಯನ್ನೋ ಅಥವಾ ಸವತೆಕಾಯಿಯನ್ನೋ ತಂದು ಅಡಿಗೆಗೆ ಉಪಯೋಗಿಸುತ್ತಾರೆ. ಅದನ್ನು ರೆಫ್ರಿಜರೇಟರ್‌ನಲ್ಲಿ ಇಟ್ಟರೆ ಒಳ್ಳೆಯದು. ಆದರೆ ಅವರಿಗೆ ಇದನ್ನು ಕೊಂಡುಕೊಳ್ಳುವಷ್ಟು ಶಕ್ತಿ ಇರುವುದಿಲ್ಲ. ಆದುದರಿಂದ ಈ ರೆಫ್ರಿಜರೇಟನ್ನು ಉಪಯೋಗಿಸುವವರು ಹಣಕಾಸು ಇರುವಂಥಾವರು ಉಪಯೋಗಿಸುತ್ತಾರೆಯೇ ಹೊರತು ಬೇರೆ ಯಾರು ಉಪಯೋಗಿಸುವುದಿಲ್ಲ. ಆದುದರಿಂದ ಅದರ ಮೇಲೆ 14 ಪರ್ಸೆಂಟ್ ಟ್ಯಾಕ್ಸ್ ಏನು ಇಟ್ಟಿದ್ದೀರಿ ಅವನ್ನು ಇನ್ನೂ ಜಾಸ್ತಿ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಉಳಿದ್ದೆಲ್ಲಾ ಹೆಚ್ಚು ಹೇಳುವುದಕ್ಕೆ ಹೋಗದೇ ಇದ್ದರೂ ಕೂಡ ಒಂದೆರಡು ಮಾತ್ರ ಹೇಳಿಬಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಇನ್ನು ತಾವು Cigar and Cigarate cases, lighters and holders of cigars and holders of cigars and cigarates and Playing cards of every description and Toilet soaps ಇವುಗಳ ಮೇಲೆ ಏನು ಟ್ಯಾಕ್ಸ್ ಹಾಕಿದ್ದೀರಿ ಅದು ಬಹಳ ಅನ್ಯಾಯ ಬೇಕಾದರೆ ಮೈಸೋಪು ಏನು ಇದೆ ಆ ಸಣ್ಣ ಪುಟ್ಟ ಸೋಪುಗಳ ಮೇಲೆ ಹೆಚ್ಚು ಧಾರಣೆ ಇಲ್ಲದೇ ಇರುವ ಸೋಪುಗಳ ಮೇಲೆ ಟ್ಯಾಕ್ಸ್ ಹಾಕದೆ ಲಕ್ಷ್ಯೂರಿಯಸ್ ಸೋಪ್ ಇದ್ದರೆ ಅವುಗಳ ಮೇಲೆ ಟ್ಯಾಕ್ಸ್ ಹಾಕಿ ಬೇಡ ಅನ್ನುವುದಿಲ್ಲ. ಹಿಂದೆ ನಾವು ಹುಡುಗರಾಗಿದ್ದಾಗ ಸೋಪು ಉಪಯೋಗ ಮಾಡುವುದೇ ಗೊತ್ತಿರಲಿಲ್ಲ, ನಮ್ಮ ಹಳ್ಳಿ ಕಡೆ ಅಂಟುವಾಳದ ಕಾಯಿ ಉಜ್ಜಿಕೊಂಡು ಸ್ನಾನ ಮಾಡುತ್ತಿದ್ದೆವು. ಇತ್ತೀಚೆಗೆ ಈ ಸಾಬೂನು ಬಂತು. ನಾನು ಮಿಡಲ್‌ಸ್ಕೂಲ್ ಓದುವ ಹೊತ್ತಿಗೆ ಈ ಸೋಪು ಬಂತು. ಅಲ್ಲಿಯವರೆಗೆ ನನಗೆ ವಾಷಿಂಗ್ ಸೋಪ್ ಅನ್ನುವುದು ಒಂದು ಗೊತ್ತಿತ್ತೇ ವಿನಾ ಮೈಸೋಪು ಏನು ಅನ್ನುವುದು ಗೊತ್ತಿರಲಿಲ್ಲ. ಆದುದರಿಂದ ಐಟಂ ನಂಬರ್ 65 (ಎ)ನಲ್ಲಿ ಟಾಯಿಲೆಟ್ ಸೋಪ್‌ಗೆ 6 ಪರ್ಸೆಂಟ್ ಟ್ಯಾಕ್ಸ್ ಏನು ಹಾಕಿದ್ದೀರಿ ಅದನ್ನು ತೆಗೆಯಬೇಕು. ಯಾವುದಾದರೂ ಲಕ್ಷ್ಯೂರಿಯಸ್ ಸೋಪ್ ಇದ್ದರೆ ಅದನ್ನು ಇದರಿಂದ ಪ್ರತ್ಯೇಕ ಮಾಡಿ ತೆರಿಗೆ ನಿಗದಿ ಮಾಡಿದರೆ ಅದನ್ನು ಬೇಡ ಅನ್ನುವುದಿಲ್ಲ.

[MR. DEPUTY SPEAKER in the Chair]

ಇನ್ನು Dusters and Sprayers used for dusting and spraping pesticides and insectisides and their parts and accessories (other than oil enginee or electric Motors) ಇದಕ್ಕೆ 2 ಪರ್ಸೆಂಟ್ ತೆರಿಗೆ ಹಾಕಿದ್ದೀರಿ. ನಮ್ಮ ದೇಶದಲ್ಲಿ ಗ್ರೀನ್ ರೆವಲ್ಯೂಷನ್ ಮಾಡಬೇಕು ಅನ್ನತಕ್ಕಂಥಾ ಕಾಲದಲ್ಲಿ ಇದನ್ನು ಹಾಕುವುದು ಸರಿಯಲ್ಲ. ಆದುದರಿಂದ ಇದನ್ನು ತೆಗೆಯಬೇಕು ಎಂದು ಹೇಳುತ್ತೇನೆ.

ಇನ್ನು Handlooms and parts and accessories thereof ಇದಕ್ಕೆ 2 ಪರ್ಸೆಂಟ್ ತೆರಿಗೆ ಹಾಕಿದ್ದೀರಿ, ಇದನ್ನೂ ಕೂಡ ತೆಗೆಯಬೇಕು ಎಂದು ಹೇಳುತ್ತೇನೆ.

ಇನ್ನು Peppers and Cashew and its Kernal ಇದರ ಮೇಲೆ ಜಾಸ್ತಿ ತೆರಿಗೆ ಹಾಕುವುದನ್ನು ನಾನು ಒಪ್ಪುವುದಿಲ್ಲ. ಕೆಲವರು ಪೆಪ್ಪರ್ ಮೇಲೆ ಟ್ಯಾಕ್ಸ್ ಹಾಕಬಹುದು ಎಂದು ಹೇಳಿದರೂ, ಅದಕ್ಕೆ ನನ್ನ ಒಪ್ಪಿಗೆ ಇಲ್ಲ. ಬೇಕಾದರೆ ಕ್ಯಾಷ್ಯೂನಟ್ಸ್ ಮೇಲೆ ತೆರಿಗೆ ಹಾಕಬಹುದು. ಏತಕ್ಕೆಂದರೆ ಗೋಡಂಬಿ ಬೀಜದಿಂದಲೇ ಜೀವನ ಮಾಡತಕ್ಕಂಥ ಜನ ನಮ್ಮ ಹಳ್ಳಿಯಲ್ಲಿ ಇಲ್ಲ.

ಶ್ರೀ ಎಸ್. ಹಮೀದ್ ಷಾ.— ಅವರು ತಿನ್ನದೇ ಹೋದರೆ ಬೇರೆಯವರೂ ಕೂಡ ತಿನ್ನಬಾರದೇ?

ಶ್ರೀ ಎಸ್. ಬಂಗಾರಪ್ಪ.—ನಾನು ತಿನ್ನಬಾರದು ಎಂದು ಹೇಳಲಿಲ್ಲ. ತಿನ್ನಬೇಕು. ಅದಕ್ಕೆ ಜಾಸ್ತಿ ಟ್ಯಾಕ್ಸ್ ಹಾಕಿಲ್ಲ ಎಂದು ಹೇಳುತ್ತೇನೆ, ಏತಕ್ಕೆಂದರೆ ಇದನ್ನು ಅಮೇರಿಕಾಕ್ಕೆ ಕಳುಹಿಸಿ ಬೇಕಾದಷ್ಟು ಫಾರಿನ್ ಎಕ್ಸ್‌ಛೇಂಜ್ ಸಂಪಾದನೆ ಮಾಡುತ್ತಾ ಇರುವಾಗ ಇದಕ್ಕೆ ಏತಕ್ಕೆ ಜಾಸ್ತಿ ಟ್ಯಾಕ್ಸ್ ಹಾಕಬಾರದು ಎಂದು ಕೇಳುತ್ತೇನೆ. ಈ ಗೋಡಂಬಿ ಬೀಜವನ್ನು ಸಾಮಾನ್ಯವಾಗಿ ಹಳ್ಳಿ ಜನ ಉಪಯೋಗ ಮಾಡುವುದಿಲ್ಲ. ಇದನ್ನು ಹೆಚ್ಚಾಗಿ ಉಪಯೋಗಿಸಿ ಅವರು ಇದರಿಂದಲೇ ಜೀವನ ಮಾಡುವುದಿಲ್ಲ. ಇದನ್ನು ಹೆಚ್ಚಾಗಿ ಸೌತ್ ಕೆನರಾದವರೇ ಬೆಳೆಯುತ್ತಿದ್ದಾರೆ. ಬ್ರಾಂದಿ, ವಿಸ್ಕಿಯನ್ನು ಯಾವ ರೀತಿ ದೊಡ್ಡ ದೊಡ್ಡ ಜನರು ಉಪಯೋಗ ಮಾಡುತ್ತಾರೋ ಅಂಥಾವರೇ ಇದನ್ನು ಹೆಚ್ಚುಮಟ್ಟಿಗೆ ಉಪಯೋಗ ಮಾಡುವುದು. ಆದುದರಿಂದ ಇದಕ್ಕೆ ಏತಕ್ಕೆ ಜಾಸ್ತಿ ಟ್ಯಾಕ್ಸ್ ಹಾಕಿಲ್ಲ ಎಂದು ಕೇಳುತ್ತೇನೆ.

ನಾನು ಈ ವಿಚಾರವನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಇಲ್ಲಿ ಗೋಡಂಬಿ ಮತ್ತು ಗೋಡಂಬಿಕಾಯಿಗೆ ಶೇ : 2 ತೆರಿಗೆಯನ್ನು ಹಾಕಿದ್ದಾರೆ. ಈ ವಸ್ತುಗಳ ಮೇಲೆ ಮತ್ತು ಈ ಗೋಡಂಬಿಯಿಂದ ತಯಾರಿಸಲ್ಪಟ್ಟ ವಸ್ತುಗಳೇನಿವೆ ಅವುಗಳ ಮೇಲೆ ಸರ್ಕಾರದವರು ಇನ್ನೂ ಹೆಚ್ಚಿನ ತೆರಿಗೆಯನ್ನು ಹಾಕಬೇಕೆಂಬುದು ನನ್ನ ವಾದ. ಇದನ್ನು ತಿನ್ನತಕ್ಕವರು ಬಹಳ ದೊಡ್ಡ ದೊಡ್ಡ ಜನರು ಮಾತ್ರ.

ಇನ್ನು ಬೀಡಿ ಎಲೆಗಳ ಮೇಲೂ ತೆರಿಗೆಯನ್ನು ವಿಧಿಸಿದ್ದಾರೆ. ಇದಕ್ಕೆ ಶೇಕಡ 6 ರಂತೆ ಟ್ಯಾಕ್ಸನ್ನು ಹಾಕಿದ್ದಾರೆ. ಇದರಿಂದ ಬಡಜನರಿಗೆ ಬಹಳ ಪೆಟ್ಟಾಗುತ್ತದೆ. ಆದುದರಿಂದ ಈ ಬೀಡಿಎಲೆ ಮೇಲೆ ಹಾಕಿರತಕ್ಕ ತೆರಿಗೆಯನ್ನು ರದ್ದುಮಾಡಬೇಕೆಂದು ಹೇಳುತ್ತೇನೆ. ಇದರಿಂದ ಬರತಕ್ಕ ವರಮಾನ ಕಡಮೆಯಾಗುವುದಾದರೆ ಅದನ್ನು ಸರ್ಕಾರದವರು ಆ ದೊಡ್ಡ ದೊಡ್ಡ ಜನರು ಸೇದತಕ್ಕ ನಂಬರ್ 55 ಫಿಲ್ಟರ್ ಟಿಪ್ಡ್ ಸಿಗಾರ್ಸ್ ಮತ್ತು ಕಿಂಗ್ಸ್ ಸಿಗಾರ್ಸ್ ಇವೆಯಲ್ಲ ಅವುಗಳ ಮೇಲೆ ಅಧಿಕ ತೆರಿಗೆಯನ್ನು ಹಾಕಬಹುದೆಂದು ಹೇಳುತ್ತೇನೆ. ನಮ್ಮ ಕಡೆಯ ಜನರು ಈ ಪೆನ್ನಿನ ಉದ್ದ ಇರತಕ್ಕ ಸಿಗರೇಟುಗಳನ್ನು ನೋಡಿದರೆ—ಬರಿ ಅದರ ಒಂದು ಸ್ಟೈಜಿನಮೇಲೆ—ಅದರ ಗುಣದ ಬಗ್ಗೆ ಅಲ್ಲ, ಅವರು ವ್ಯಾಖ್ಯಾನ ಮಾಡಬಲ್ಲರು. ಒಟ್ಟಿನಲ್ಲಿ ಬೀಡಿ ಎಲೆಯ ಮೇಲೆ ಹಾಕಿರತಕ್ಕ ತೆರಿಗೆಯನ್ನು ತೆಗೆಯಬೇಕೆಂದು ಹೇಳುತ್ತೇನೆ. ತೆಗೆಯದಿದ್ದರೆ ಬಡವರಿಗೆ ಇದರಿಂದ ಬಹಳ ಪೆಟ್ಟಾಗುತ್ತದೆ.

ಇನ್ನು ಕನ್‌ಫೆಕ್ಷನೆರಿ, ಬಿಸ್ಕತ್ಸ್ ಮತ್ತು ಕೇಕ್ಸ್ ಬಗ್ಗೆ ಆರು ಪರ್ಸೆಂಟ್ ತೆರಿಗೆಯನ್ನು ಹಾಕಿದ್ದಾರೆ. ಇದರಲ್ಲಿ ಕೇಕ್ಸ್, ಕ್ರೀಂ ಬಿಸ್ಕತ್ಸ್, ವೇಫರ್ಸ್ ಹೀಗೆಲ್ಲಾ ಬಹಳ ಕಾಸ್ಟಲಿ ಕ್ವಾಲಿಟಿಗಳಿವೆ. ಅವುಗಳಮೇಲೆ ಇನ್ನೂ ಹೆಚ್ಚಿನ ತೆರಿಗೆಯನ್ನು ಹಾಕಬೇಕೆಂದು ಹೇಳುತ್ತೇನೆ. ಹೆಚ್ಚಿಗೆ ಟ್ಯಾಕ್ಸ್ ಹಾಕಬಹುದಾದಂಥ ಕೆಲವು ಚಾಕಲೇಟ್‌ಗಳು ಕೂಡ ಇವೆ. ಇವುಗಳೇನೂ ಬಡವರು ತಿನ್ನತಕ್ಕವಸ್ತುಗಳಲ್ಲ ಇವುಗಳಲ್ಲಿ ಪ್ರೋಟೀನ್ ಅಂಶ ಬಹಳವಾಗಿರುತ್ತದೆಯಂತೆ. ಅದನ್ನು ತಿನ್ನತಕ್ಕವರೆಲ್ಲಾ ದೊಡ್ಡ ಶ್ರೀಮಂತರೇ ಆಗಿರುತ್ತಾರೆ. ಆದುದರಿಂದ ಇಂಥ ಭೋಗವಸ್ತುಗಳ ಮೇಲೆ ಹೆಚ್ಚು ತೆರಿಗೆಯನ್ನು ಹಾಕಿದರೆ ಅದರ ಬಗ್ಗೆ ನನ್ನ ವಿರೋಧವಿಲ್ಲ. ಆದರೆ ಸಾಮಾನ್ಯ ದರ್ಜೆಯ ಬಿಸ್ಕತ್ತುಗಳ ಮೇಲೆ ತೆರಿಗೆಯನ್ನು ಹಾಕಬಾರದೆಂದು ಹೇಳುತ್ತೇನೆ.

(ಶ್ರೀ ಎಸ್. ಬಂಗಾರಪ್ಪ)

ಇನ್ನು ವಾಷಿಂಗ್ ಸೋಪು ನಾನಾಗಲೇ ಹೇಳಿದಂತೆ ನಾನು ಮಿಡಲ್ ಸ್ಕೂಲಿಗೆ ಬರುವ ಮೊದಲು ನನಗೆ ಬಟ್ಟೆಗೆ ಸೋಪನ್ನು ಹಾಕುತ್ತಾರೆಂಬ ವಿಚಾರವೇ ತಿಳಿದಿರಲಿಲ್ಲ. ನಾವೇನಿದ್ದರೂ ನಮ್ಮ ಹಳ್ಳಿಗಳಲ್ಲಿ ಅಂಟುವಾಳ್ ಕಾಯಿಯನ್ನು ಮೈತೊಳೆಯುವುದಕ್ಕೆ ಮತ್ತು ಬಟ್ಟೆಗಳನ್ನು ತೊಳೆಯುವುದಕ್ಕೆ ಉಪಯೋಗಮಾಡುತ್ತಿದ್ದೆವು. ಅದನ್ನು ಬಿಟ್ಟರೆ ಬೇರೇನೂ ನಮಗೆ ತಿಳಿದಿರಲಿಲ್ಲ. ನನಗೆ ಇಲ್ಲಿಯವರೆಗೂ ಲಿಕ್ವಿಡ್‌ಸೋಪಿನ ಎಂಬುದು ಗೊತ್ತಿರಲಿಲ್ಲ. ಇಲ್ಲಿನೋಡಿದ ಮೇಲೆ ನನಗೆ ಈ ವಿಚಾರ ಗೊತ್ತಾಯಿತು. ಇಂಥ ಹೈಕ್ಲಾಸ್ ಜನರು ಉಪಯೋಗ ಮಾಡತಕ್ಕ ವಸ್ತುಗಳೇನಿವೆ ಅವುಗಳಿಗೆ ಎಷ್ಟು ಬೇಕಾದರೂ ತೆರಿಗೆ ಹಾಕಿ ನನ್ನ ಅಭ್ಯಂತರವಿಲ್ಲ. ಆದರೆ ಹಳ್ಳಿಜನ ಉಪಯೋಗಿಸತಕ್ಕ ಸಾಮಾನ್ಯ ಸೋಪುಗಳ ಮೇಲೆ ತೆರಿಗೆಯನ್ನು ಹಾಕಬಾರದೆಂದು ಹೇಳುತ್ತೇನೆ. ಇನ್ನು ಇಲ್ಲಿ ಹೇಳಿರತಕ್ಕ ಟಿನ್ಡ್, ಕೇನ್ಡ್ ಮತ್ತು ಬಾಟಲ್ಡ್ ಫುಡ್ಸ್ ಏನಿವೆ ತಾವು ಇವುಗಳ ಮೇಲೆ ಶೇಕಡಾ 50 ರಷ್ಟು ತೆರಿಗೆಯನ್ನು ಹಾಕಿ ಅದಕ್ಕೆ ನನ್ನ ಒಪ್ಪಿಗೆಯಿದೆ. ಏಕೆಂದರೆ ಹಳ್ಳಿಗಳಲ್ಲಿ ಜನರು ಒಂದು ಗಂಗಳ ಅನ್ನ ಸಾರು ಸಿಕ್ಕಿದರೆ ಸಾಕಪ್ಪ ದಿನ ಕಳೆದೇವು ಎಂದು ಲೆಕ್ಕ ಹಾಕುತ್ತಿರುವಾಗ ಇಲ್ಲಿ ಜನರು ಈ ಟಿನ್ಡ್ ಫುಡ್‌ನ್ನು ಬಳಸುತ್ತಿದ್ದಾಗ ಇವರ ಮೇಲೆ ಹೆಚ್ಚು ತೆರಿಗೆಯನ್ನು ಹಾಕಿ ನನಗೆ ಅದರಿಂದ ಸಂತೋಷವಾಗುತ್ತದೆ.

ಇನ್ನು ಕರ್ಪೂರದ ಮೇಲೆ ತೆರಿಗೆಯನ್ನು ವಿಧಿಸಿದ್ದಾರೆ. ಇದನ್ನು ತೆಗೆಯಬೇಕು.

ಇನ್ನು ಕೊಡೆಗಳ ಮೇಲೆ ತೆರಿಗೆಯನ್ನು ಹಾಕಿದ್ದಾರೆ ಇದನ್ನೂ ಕೂಡ ತೆಗೆಯಬೇಕು ಮಲೆನಾಡಿನಲ್ಲಿ, ಕರಾವಳಿ ಪ್ರದೇಶದಲ್ಲಿ ಕೊಡೆಗಳಿಲ್ಲದೆ ಜನರು ತಿರುಗಾಡುವುದಕ್ಕೇ ಸಾಧ್ಯವಿಲ್ಲ. ಆದರೂ ಅಲ್ಲಿ ಪ್ರಬಲವಾದ ಗಾಳಿ ಬೀಸಿದಾಗ ಸರ್ಕಾರದವರು ಎಷ್ಟೇ ಹೆಚ್ಚಿನ ತೆರಿಗೆಯನ್ನು ಹಾಕಿ ಕೊಡೆಗಳನ್ನು ಸರಬರಾಯಿ ಮಾಡಿದ್ದರೂ ಅವು ಸ್ವಲ್ಪದರಲ್ಲೇ ಕಿತ್ತು ಹಾಳಾಗಿಹೋಗುತ್ತವೆ. ಆದುದರಿಂದ ಬಡವರೂ ಹಳ್ಳಿಗಾಡಿನ ಜನರೂ ಉಪಯೋಗಿಸತಕ್ಕ ಕೊಡೆಗಳ ಮೇಲೆ ಹಾಕಿರತಕ್ಕ ತೆರಿಗೆಯನ್ನು ತೆಗೆಯಬೇಕೆಂದು ಹೇಳುತ್ತೇನೆ. ನಗರಪ್ರದೇಶಗಳಲ್ಲಿ ಜನರಿಗೆ ಅಷ್ಟಾಗಿ ಈ ಕೊಡೆಗಳ ಅಗತ್ಯವಿರುವುದಿಲ್ಲ. ಕಾರಣ ಇಲ್ಲಿ ಮಳೆಬಂದ ಕೂಡಲೆ ಪ್ರಲ್ಪರಿಗೆ ಹತ್ತಿರಹತ್ತಿರದಲ್ಲೇ ಮನೆಗಳಿರುತ್ತವೆ. ಗ್ರಾಮಾಂತರ ಪ್ರದೇಶಗಳಲ್ಲಿ ಹಾಗಿಲ್ಲ. ಜನರು ಹೊಲ ಗದ್ದೆಗಳಲ್ಲಿ ಕೆಲಸ ಮಾಡತಕ್ಕ ವೇಳೆಯಲ್ಲಿ ಮಳೆ ಬಂದರೆ ಅವರು ಮರವಾಶ್ರಯಕ್ಕೆ ಹೋಗಬೇಕು ; ಹೋದರೆ ಅಲ್ಲಿ ಸಿಡಲಿನ ಅಬ್ಬರ ಬೇರೆ. ಅನೇಕ ತೊಂದರೆಗಳಿವೆ. ಆದುದರಿಂದ ಬಡವರು ಉಪಯೋಗ ಮಾಡತಕ್ಕ ಕೊಡೆಗಳಮೇಲೆ ತೆರಿಗೆಯನ್ನು ಹಾಕತಕ್ಕದ್ದು ಉಚಿತವಲ್ಲ ಎಂದು ಹೇಳುತ್ತೇನೆ. ಐವರಿ ಆರ್ಟಿಕಲ್ಸ್ ಗ್ಲಾಸ್ ಬಾಟಲ್ಸ್, ಪ್ಲಾಸ್ಟಿಕ್ ಷೀಟು ಮುಂತಾದವುಗಳಿಗೆ ತೆರಿಗೆ ಜಾಸ್ತಿ ಮಾಡಬಹುದು. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಹಸಿರುಕ್ರಾಂತಿಗೆ ಅನುಕೂಲವಾಗಿರುವುದರ ವಿಚಾರದಲ್ಲಿ ಶೇಕಡ 2 ರಷ್ಟಿರುವ ತೆರಿಗೆಯನ್ನು ತೆಗೆದು ಹಾಕಬೇಕೆಂಬುದು ನನ್ನ ಅಭಿಪ್ರಾಯ. ಫುಟ್‌ವೇರ್‌ಗೆ ಶೇಕಡ 4 ರಷ್ಟು ತೆರಿಗೆ ಇರುವುದನ್ನು ತೆಗೆದುಹಾಕಬೇಕು. ಪ್ರೆಷರ್ ಕುಕ್ಕರ್ಸ್. ದೇರ್ ಪಾರ್ಟ್ಸ್ ಅಂಡ್ ಅಕ್ಸೆಸರೀಸ್‌ಗೆ ತೆರಿಗೆ ಜಾಸ್ತಿಮಾಡಬಾರದು. ಕಾರಣ ಪಟ್ಟಣಗಳಲ್ಲಿ ಈ ದಿವಸ ಸಾಮಾನ್ಯ ಜನರು ಇದನ್ನು ಉಪಯೋಗಮಾಡುವರು, ಬೆಂಗಳೂರು ನಗರದಲ್ಲಿ ಮಧ್ಯಮ ವರ್ಗದವರು ಇದನ್ನು ಉಪಯೋಗಿಸುವರು, ಆಫೀಸಿಗೆ ಅವರು ಅರ್ಜೆಂಟಾಗಿ ಹೋಗಬೇಕಾಗುವುದರಿಂದ ಇದು ಅವರಿಗೆ ಅನುಕೂಲವಾಗಿದೆ. ಇದರಿಂದ ಕಡಮೆ ವೇಳೆಯಲ್ಲಿ ಅಡಿಗೆ ತಯಾರಿಸಿ ಊಟಮಾಡಿಕೊಂಡು ಹೋಗಬಹುದು. ಈಗ ಸೌದೆ ಸಿಕ್ಕುವುದಿಲ್ಲ. ಸಾವಿರಾರು ಕುಟುಂಬಗಳು ಇದನ್ನು ಉಪಯೋಗ ಮಾಡುತ್ತಿವೆ. ಇದು ಮಧ್ಯಮವರ್ಗದ ಸಾಮಾನು. ಆದುದರಿಂದ ಕೊಡೆಗಳ ಮೇಲೆ ತೆರಿಗೆ ಹಾಕಬಾರದು ಎಂಬುದು ನನ್ನ ಅಭಿಪ್ರಾಯ. ಇದರಮೇಲೆ ಶೇಕಡ 6 ರಷ್ಟು ತೆರಿಗೆ ಹಾಕಿರುವುದನ್ನು ತೆಗೆಯಬೇಕು.

10-30 A. M.

ಏರಿಯೇಟೆಡ್ ವಾಟರ್. ಇದನ್ನು ಬ್ರಾಂದಿ, ವಿಸ್ಕಿಗಳಿಗೆ ಸೇರಿಸಿಕೊಂಡು ಕುಡಿಯುವರು. ಅದೆ ಬಡವ ಖಾಲಿ ಸೋಡ ಕುಡಿಯಬಹುದು. ಬೇರೆ ಬೇರೆ ಸೋಡ ಇದೆ, ಇದಕ್ಕೆ 75 ಪೈಸೆಯಿಂದ 1ರೂಪಾಯಿನವರೆಗೆ ಬೆಲೆಯಿದೆ. ಸ್ಪೆನ್ಸರ್ ಕಂಪೆನಿ ಮುಂತಾದ ದೊಡ್ಡ ಕಂಪೆನಿಗಳಲ್ಲಿ ತಯಾರಿಸುವ ಏರಿಯೇಟೆಡ್ ವಾಟರ್‌ಗೆ ಅದನ್ನು ಬೀರ್, ಬ್ರಾಂದಿಗಳನ್ನು ಕುಡಿಯುವವರು ಉಪಯೋಗಿಸುವುದರಿಂದ ತೆರಿಗೆ ಜಾಸ್ತಿ ಮಾಡಬೇಕು, ಶ್ರೀಮಂತರು ಉಪಯೋಗಿಸುವುದಕ್ಕೆ ಹೆಚ್ಚು ತೆರಿಗೆ ಹಾಕಬೇಕು, ಬಡವರು ಉಪಯೋಗ ಮಾಡುವ ಸಾಧಾರಣವಾದುದಕ್ಕೆ ಜಾಸ್ತಿಮಾಡಬಾರದು.

ಶ್ರೀ ಎಂ. ವೈ. ಘೋರ್ಪಡೆ.—ಗುಲ್ಬರ್ಗದವರು ಅದಕ್ಕೆ ಒಪ್ಪುವುದಿಲ್ಲ. ಏರಿಯೇಟೆಡ್ ವಾಟರ್‌ಮೇಲೆ ತೆರಿಗೆ ಹಾಕುವುದಕ್ಕೆ ಅವರು ಒಪ್ಪುವುದಿಲ್ಲ. ಏಕೆಂದರೆ ಅಲ್ಲಿ ಬಿಸಿಲು ಜಾಸ್ತಿ.

ಶ್ರೀ ಟಿ. ಎಂ. ಮಂಜುನಾಥ್ —ಬಿಸಿಲಿನಲ್ಲಿ ಉಪಯೋಗಿಸುವ ಸೋಡ ಬೇರೆ, ಮಾನ್ಯ ಸದಸ್ಯರು ಹೇಳುವುದು ಬೇರೆ.

ಶ್ರೀ ಎಸ್ ಬಂಗಾರಪ್ಪ.—ಕೆಲವು ಕಂಪನಿಗಳಲ್ಲಿ ಸ್ಪೆಷಲ್ಲಾಗಿ ಸಿದ್ಧ ಮಾಡುವವರು, ಗುಲ್ಬರ್ಗದಲ್ಲಿ ಅದನ್ನು ಉಪಯೋಗಮಾಡುವುದಿಲ್ಲ. ನಮ್ಮ ಕಡೆ ಸೋಡ 5-10 ಪೈಸೆಗೆ ದೊರೆಯುವುದು. ಅದನ್ನು ಕುಡಿದರೆ ನೀರು ಕುಡಿದಹಾಗಿರುವುದು. ಇದನ್ನು ಬೇರ್ಪಡಿಸಿ ಬ್ರೈಫರ್ಕೇಟ್ ಮಾಡಿ ಬ್ರಾಂದಿ ವಿಸ್ಕಿ ಮುಂತಾದುವುಗಳಿಗೆ ಉಪಯೋಗಿಸುವ ಏರಿಯೇಟೆಡ್ ವಾಟರಿಗೆ ದೊಡ್ಡ ಕಂಪೆನಿಗಳಲ್ಲಿ ತಯಾರಿಸುವುದಕ್ಕೆ ಶೇಕಡ 6 ರಷ್ಟಿರುವ ತೆಂಗೆ ಹೆಚ್ಚಿಸಿ, ಬಡವರು ಉಪಯೋಗ ಮಾಡುವುದಕ್ಕೆ ಜಾಸ್ತಿಮಾಡಬೇಡಿ ಎಂಬುದ ನನ್ನ ಅಭಿಪ್ರಾಯ. ಬಡವರು ಉಪಯೋಗಮಾಡುವ ಸೋಪು, ಇನ್‌ಸೆಕ್ಟಿಸೈಡ್ ಮತ್ತು ಪೆಸ್ಟಿಸೈಡ್ಸ್, ಪ್ರೆಷರ್ ಕುಕ್ಕರ್, ಸೈಕಲ್, ಸೀಮೆಎಣ್ಣೆ, ಬಂದೂಕ ಮುಂತಾದವುಗಳಿಗೆ ತೆರಿಗೆ ಕೈಬಿಡಬೇಕು. ನ್ಯಾಯಾನ್ಯಾಯ ವಿಮರ್ಶೆಮಾಡಿಲ್ಲ. ಇಂದು ವಾಸ್ತವಾಂಶವನ್ನು ಗಮನಿಸಿ ಯಾರಿಗೆ ಅನ್ಯಾಯವಾಗಿದೆ ಎಂದು ನೋಡಿ ನಾನು ಹೇಳಿದಂತೆ ಕೆಲವು ಬಾಬುಗಳಿಗೆ ತೆರಿಗೆ ಕೈಬಿಡುವುದು, ಕೆಲವಕ್ಕೆ ಕಡಮೆ ಮಾಡುವುದು, ಮತ್ತೆ ಕೆಲವಕ್ಕೆ ಜಾಸ್ತಿಮಾಡುವುದು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ ಎಸ್. ಕೃಷ್ಣನ್ (ಮಲ್ಲೇಶ್ವರ).—ಸನ್ಮಾನ್ಯ ಉಪಾಧ್ಯಕ್ಷರೇ. ಕರ್ನಾಟಕ ಮಾರಾಟ ತೆರಿಗೆ ತಿದ್ದುಪಡಿ ಮಸೂದೆಯಮೇಲೆ ಈಗಾಗಲೆ ಚರ್ಚೆಯಾಗಿದೆ. ನಾವೇನು ಹೇಳಿದರೂ ಘೋರ್ಪಡೆಯವರು ಒಪ್ಪಿಕೊಳ್ಳುವುದಿಲ್ಲ ಎಂಬುದು ನನಗೆ ಗೊತ್ತಿದೆ. ಹೋದ ಸಲ ಅವರು ಮಾಡಿದ ರೀತಿ ನೋಡಿದರೆ ಬಹಳ ಬುದ್ಧಿವಂತಿಯಿಂದ ಅನೇಕ ಐಟಂಗಳನ್ನು ಸೇರಿಸಿ ಕೊನೆಯಲ್ಲಿ ನಾವು ಆಕ್ಷೇಪಣೆ ಮಾಡುತ್ತೇವೆಂಬುದು ಅವರಿಗೆ ಗೊತ್ತು, ಅನಂತರ ಕೆಲವನ್ನು ರದ್ದುಮಾಡುವರು. ಅವರು ಬಹಳ ಹುಷಾರಾಗಿದ್ದಾರೆ. ಬಿಟ್ಟುಹಾಗೂ ಇರಬೇಕು, ತೆರಿಗೆ ಬರುವುದು ಬರಬೇಕು. ಈ ರೀತಿ ಕಣ್ಣಾಮುಚ್ಚಾಲೆ ನಾಟಕ ಅವರು ಆಡುತ್ತಿದ್ದಾರೆ. ಹೋದ ಸಲ ಕೆಲವು ರಿಯಾಯಿತಿ ತೋರಿಸಿದ್ದರು. ಅನೇಕ ಐಟಂಗಳಮೇಲೆ ತೆರಿಗೆ ಹಾಕಿರುವುದು ನನ್ನ ಅಭಿಪ್ರಾಯದಲ್ಲಿ ಸರಿಯಲ್ಲ ನಾನು ಹೋದ ಸಲ ಹೇಳಿದಹಾಗೆ ಮಾರಾಟ ತೆರಿಗೆ ನಮ್ಮ ರಾಜ್ಯದಲ್ಲಿ ಮತ್ತು ಇತರ ರಾಜ್ಯಗಳಲ್ಲಿ ಮುಖ್ಯವಾದ ತೆರಿಗೆಯ ಬಾಬು. ಇದು ಪರೋಕ್ಷ ತೆರಿಗೆ. ಪ್ರತ್ಯಕ್ಷವಾದ ತೆರಿಗೆಯಲ್ಲ. ಇದು ದೇಶದಲ್ಲಿ ಹೆಚ್ಚಾಗುತ್ತಿದೆ ಇದು ಜನಸಾಮಾನ್ಯರ ಮೇಲೆ ಬೀಳುವುದು. ಪರೋಕ್ಷವಾದ ತೆರಿಗೆಯನ್ನು ಕೈಬಿಡಬೇಕು, ಅದನ್ನು ಪಡೆಯುವುದು ಸರಿಯಲ್ಲ, ಆದಷ್ಟು ಕಡಮೆಮಾಡಬೇಕು. ಈ ರೀತಿಯಾದ ಒಂದು ಧೋರಣೆ ಸರಕಾರಕ್ಕಿರಬೇಕು ಎಂದು ಸುಪ್ರಸಿದ್ಧ ತಜ್ಞರು ಕೂಡ ಹೇಳಿದ್ದಾರೆ.

ಅದನ್ನು ನಾನು ಕೋಟ ಮಾಡುವುದಕ್ಕೆ ಹೋಗುವುದಿಲ್ಲ, ಅದು ಸಮಂಜಸವೂ ಆಗುವುದಿಲ್ಲ. ಬಜೆಟ್ ಮೇಲೆ ಮಾತನಾಡುವಾಗ ಅದರ ಬಗ್ಗೆ ಹೇಳಿದ್ದೇನೆ. ಈಗ ಬಿಲ್ ಸಭೆಯ ಮುಂದೆ ತಂದಿರುವುದನ್ನು ನೋಡಿದರೆ ಆ ಅಭಿಪ್ರಾಯವನ್ನು ಇವರು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ ಎಂದು ಕಾಣುತ್ತದೆ. ಅವರು ಅಭಿಪ್ರಾಯ ತಪ್ಪಿರಬಹುದು, ಅದು ನಿಜಾಂಶವಿದ್ದರೂ ಇರಬಹುದು ಆದರೆ ನಾವೇನು ಮಾಡುವುದಕ್ಕಾಗುತ್ತದೆ, ನಾವು ಹಣ ಪಡೆಯಬೇಕು ಎನ್ನುವ ಕಾರಣದಿಂದ ಜನಗಳ ಮೇಲೆ ತೆರಿಗೆಯನ್ನು ಹಾಕಬೇಕು ಎಂದು ಸರ್ಕಾರದವರ ಅಭಿಪ್ರಾಯವಿದೆ ಎಂದು ಕಾಣುತ್ತದೆ. ಪ್ರಗತಿದಾಯಕವಾದ ಬಿಲ್ಲನ್ನು ತಂದಿದ್ದೇವೆ, ಜನಗಳಿಗೆ ಅನಾನುಕೂಲವಾಗದೆ ಇರುವಂಥ ಬಿಲ್, ಸ್ವಲ್ಪಮಟ್ಟಿಗೆ ನಮ್ಮ ವರಮಾನವನ್ನು ಜಾಸ್ತಿ ಮಾಡುವುದಕ್ಕೆ ಇದನ್ನು ತಂದಿದ್ದೇವೆಂದರೆ ನಾವು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ತೆರಿಗೆಯನ್ನು ಜಾಸ್ತಿ ಮಾಡುವಂಥದ್ದರಿಂದ ಒಂದು ಕಡೆ ಜನ ಸಾಮಾನ್ಯರ ಮೇಲೆ ಹೊರೆ ಜಾಸ್ತಿಯಾಗುತ್ತದೆ, ಇನ್ನೊಂದು ಕಡೆ ಹೊರುವುದಕ್ಕೆ ಸಾಧ್ಯವಿಲ್ಲದೆ ಇರುವ ಹೊರೆ ಇದೆ, ಮತ್ತು ರಾಜ್ಯದಲ್ಲಿ ಇನ್‌ಫ್ಲೇಷನರಿ ಟ್ರೆಂಡ್ ಜಾಸ್ತಿಯಾಗುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ. ಇದರಲ್ಲಿ ಪ್ರಗತಿದಾಯಕವಾದ ಅಂಶ ಒಂದೂ ನನಗೆ ಕಾಣುವುದಿಲ್ಲ. ಆದ್ದರಿಂದ ನಾನು ಇದನ್ನು ವಿರೋಧಿಸುತ್ತೇನೆ.

ಈ ರೀತಿ ತೆರಿಗೆಯನ್ನು ಹಾಕದೆ ಹೋದರೆ ಬೇರೆ ಹೇಗೆ ಪಡೆಯಬಹುದು ಎಂಬುದಾಗಿ ಕೇಳಬಹುದು. ಅದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ರಾಜ್‌ಕಮಿಟಿಯವರು ಸಿಫಾರಸುಗಳನ್ನು ಮಾಡಿದ್ದಾರೆ ಅದರ ಪ್ರಕಾರ ನಮ್ಮ ದೇಶದಲ್ಲಿ ಒಂದು ಹೊಸವರ್ಗವುಂಟಾಗಿದೆ. ನಮ್ಮ ದೇಶದಲ್ಲಿ ಹಾಗೂ ನಮ್ಮ ರಾಜ್ಯದಲ್ಲಿ ಈ ಹೊತ್ತು ಶ್ರೀಮಂತ ರೈತ ವರ್ಗ ಉಂಟಾಗುತ್ತಿದೆ. ಆ

(ಶ್ರೀ ಎಂ. ಎಸ್. ಕೃಷ್ಣನ್)

ಶ್ರೀಮಂತ ವರ್ಗದ ರೈತರ ಮೇಲೆ, ಯಾರು ಭಾರಿ ಭಾರಿ ಶ್ರೀಮಂತ ರೈತರಿದ್ದಾರೆ, ಯಾರು ನೀರಾವರಿ ಯೋಜನೆಗಳ ಉಪಯೋಗವನ್ನು ಪಡೆಯುತ್ತಿದ್ದಾರೆ, ಯಾರು ಸರ್ಕಾರದಿಂದ ಹೆಚ್ಚು ಹಣಕಾಸಿನ ಅನುಕೂಲಗಳನ್ನು ಪಡೆದು ಹೆಚ್ಚು ಹೆಚ್ಚು ಉತ್ಪಾದನೆ ಮಾಡುತ್ತಿದ್ದಾರೆ ಮತ್ತು ಯಾರು ಹೆಚ್ಚು ಹೆಚ್ಚು ಗಳಿಸುತ್ತ ಇದ್ದಾರೆ ಅಂಥವರ ಮೇಲೆ ತೆರಿಗೆಯ ಬಾರ ಕಡಿಮೆ ಇದೆ ಎಂದು ರಾಜ್ ಕಮಿಟಿಯ ವರದಿಯಲ್ಲಿ ಹೇಳಿದ್ದಾರೆ. ಅರ್ಬನ್ ಟ್ಯಾಕ್ಸ್‌ಗೆ ಅದನ್ನು ಹೋಲಿಸಿದರೆ, ನಗರ ದಲ್ಲಿರುವ ಜನಗಳ ಮೇಲೆ ಹಾಕಿರುವ ತೆರಿಗೆಗಳಿಗೆ ಹೋಲಿಸಿದರೆ ನಗರದ ಜನಗಳ ಮೇಲೆ ಹಾಕಿರ ವ ತೆರಿಗೆಗಳು ಜಾಸ್ತಿ. ಹಳ್ಳಿಗಳಲ್ಲಿ ಅಥವಾ ಗ್ರಾಮಗಳಲ್ಲಿರುವ ಶ್ರೀಮಂತ ರೈತರ ಮೇಲೆ ಹಾಕಿರುವ ತೆರಿಗೆಗಳು ಕಡಿಮೆ. ಆದುದರಿಂದ ಮಾನ್ಯ ಮಂತ್ರಿಗಳ ದೃಷ್ಟಿಕೋನ ಏನಿರದೇಕಾಗಿತ್ತು ಎಂದರೆ ತೆರಿಗೆಯನ್ನು ವಸೂಲು ಮಾಡತಕ್ಕದ್ದು ಎಷ್ಟು, ಯಾರಿಗೆ ಕೊಡುವುದಕ್ಕೆ ಶಕ್ತಿ ಇದೆ, ಭಾರಿ ಭಾರಿ ಶ್ರೀಮಂತರು ನಗರದಲ್ಲಿರಲಿ ಅಥವಾ ಬೇರೆ ಭಾಗದಲ್ಲಿರಲಿ ಅಂಥವರಿಂದ ವಸೂಲು ಮಾಡತಕ್ಕ ದೃಷ್ಟಿಕೋನವಿರಬೇಕು. ಅದನ್ನು ಅವರು ಅರಿತುಕೊಂಡೂ ಕೂಡ ಅದನ್ನು ಕಾರ್ಯಗತ ಮಾಡುವು ದಕ್ಕೆ ತಯಾರಾಗಿಲ್ಲ ಎಂದು ಇದರಿಂದ ತಿಳಿದು ಬರುತ್ತದೆ. ಮಂತ್ರಿಗಳ ಮೇಲೆ ಶ್ರೀಮಂತ ರೈತ ವರ್ಗದವರ ಒತ್ತಡವಿರಬಹುದು. ಯಾರಮೇಲಾದರೂ ಆರೋಪವನ್ನು ಹೊರಿಸುತ್ತೇನೆಂದು ತಿಳಿಯಬಾರದು. ಹೆಚ್ಚು ಜನ ಶ್ರೀಮಂತ ಭೂಮಾಲೀಕರು ಇಲ್ಲಿ ಇದ್ದಾರೆ. ಅದು ಒಂದು ಕ್ಲಾಸ್ ರಿಫ್ಲೆಕ್ಷನ್. ಇದು ಇರುವುದರಿಂದ ಅವರು ಮಂತ್ರಿಗಳ ಮೇಲೆ ಒತ್ತಾಯವನ್ನು ಹಾಕಿ ಶ್ರೀಮಂತ ರೈತರ ಮೇಲೆ ತೆರಿಗೆ ಬೀಳುವುದಾದರೂ ಸಹ ರೈತರ ಮೇಲೆ ತೆರಿಗೆಯನ್ನು ಹಾಕಬಾರದು ಎಂದು ಹೇಳುತ್ತಾರೆ. ರೈತರು ಎಂದರೆ ನೂರು ಎಕರೆ, 50 ಎಕರೆ, 10 ಎಕರೆ, 5 ಎಕರೆ ಇರುವವನೂ ರೈತನೇ, ಜಮೀನಿಲ್ಲದೆ ಇರುವವನೂ ರೈತನೇ. ಹೀಗಾಗಿ ರೈತನ ಮೇಲೆ ತೆರಿಗೆ ಹಾಕಬಾರದು ಎಂದು ಹೇಳುತ್ತ ಈ ರಾಜ್ಯದಲ್ಲಿರುವ ಶ್ರೀಮಂತ ರೈತರ ಮೇಲೆ ತೆರಿಗೆ ಹಾಕದೆ ಹಾಗೆ ಮಾಡಿದ್ದಾರೆ ಮಂತ್ರಿಗಳು ಅವರ ಮಾತಿಗೆ ಕಟ್ಟುಬಿದ್ದು ಅವರಿಂದ ಬಿಡಿಸಿಕೊಳ್ಳುವುದಕ್ಕೆ ತಯಾರಾಗಿಲ್ಲದೆ, ಅವರ ಐಡಿಯಾಲಜಿ ಏನಿದೆ ಅದಕ್ಕೆ ವಿರುದ್ಧವಾಗಿ ಅವರ ಕಾರ್ಯವಾಗಿದೆ ಎಂದು ನನ್ನ ಅಭಿಪ್ರಾಯ ಅವರು ತಂದಿರುವ ಮಸೂದೆಯನ್ನು ನೋಡಿದರೆ ಸೈದ್ಧಾಂತಿಕವಾಗಿ ಶ್ರೀಮಂತ ರೈತರಿಗೆ, ಶ್ರೀಮಂತರಿಗೆ, ಭಾರಿ ಭಾರಿ ಹಣವಂತರಿಗೆ ಅನುಕೂಲ ಮಾಡುವಂಥದ್ದಾಗಿದೆಯೇ ಹೊರತು ಜನ ಸಾಮಾನ್ಯರಿಗೆ ಅನುಕೂಲ ಮಾಡುವಂಥ ಶಾಸನವಲ್ಲ ಮತ್ತು ಯಾರ ಕಿಸೆಗೆ ಕೈ ಹಾಕಿ ತೆಗೆದುಕೊಳ್ಳ ಬೇಕೋ ಅವರಿಂದ ತೆಗೆದುಕೊಳ್ಳದೆ ಯಾರೂ ಜನಸಾಮಾನ್ಯರಿದ್ದಾರೆ, ಯಾರಿಗೆ ಕೊಡುವುದಕ್ಕೆ ಶಕ್ತಿ ಇಲ್ಲ, ಬೆಲೆಗಳು ಹೆಚ್ಚಿ ಯಾರು ಕಷ್ಟಪಡುತ್ತಿದ್ದಾರೆ, ತೊಂದರೆಗೆ ಈಡಾಗಿದ್ದಾರೆ ಅವರ ಮೇಲೆ ತೆರಿಗೆಯನ್ನು ಹೇರಿ ಇನ್ನೂ ಹೆಚ್ಚು ಕಷ್ಟ ಮತ್ತು ತೊಂದರೆ ತರುತ್ತಿದ್ದಾರೆ. ಆದುದರಿಂದ ಈ ಮಸೂದೆಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ ಮತ್ತು ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ.

ಒಂದೊಂದು ಅಂಶದ ಬಗ್ಗೆಯೂ ಮಾತನಾಡಬೇಕಾಗಿಲ್ಲ. ಎರಡನೇ ಷೆಡ್ಯೂಲ್‌ನಲ್ಲಿರುವ ಎಲ್ಲ ಪದಾರ್ಥಗಳ ಮೇಲೂ ಹೆಚ್ಚು ಮಾಡಿಲ್ಲ. ಕೆಲವು ಪದಾರ್ಥಗಳ ಮೇಲೆ ಮಾತ್ರ ಹೆಚ್ಚು ಮಾಡಿದ್ದಾರೆ. ಅದನ್ನು ಈ ಮಸೂದೆಯ ಎರಡನೇ ಷೆಡ್ಯೂಲಿನಲ್ಲಿ ಹೇಳಿದ್ದಾರೆ. ಅದರಲ್ಲಿರುವ ಎರಡು ಮೂರು ವಿಷಯಗಳ ಬಗ್ಗೆ ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜನಸಾಮಾನ್ಯರ ಮೇಲೆ ಬೀಳುವಂಥದ್ದರಲ್ಲಿ ಐಟಂ 21 ಸ್ಯಾನಿಟರಿ ಫಿಟಿಂಗ್ಸ್ ಹಾಗೂ 36 ಸಿಮೆಂಟ್. ಇವೆರಡೂ ಅತ್ಯಾ ವಶ್ಯಕವಾಗಿ ಈ ಹೊತ್ತು ಮನೆಗಳನ್ನು ಕಟ್ಟಿಸುವುದಕ್ಕೆ ಬೇಕಾದಂಥ ಸಾಮಗ್ರಿಗಳು. ಅವನ್ನು ತಯಾರು ಮಾಡುವಂಥವರು ಭಾರಿ ಭಾರಿ ಶ್ರೀಮಂತರು ಇರಬಹುದು. ಆದರೆ ಸೇಲ್ಸ್ ಟ್ಯಾಕ್ಸ್ ಹಾಕುವುದು ಯಾರು ಅದನ್ನು ಕೊಂಡುಕೊಳ್ಳುತ್ತಾರೆಯೋ ಅವರ ಮೇಲೆ ಬೀಳುತ್ತದ, ಅದನ್ನು ತಯಾರು ಮಾಡುವವರ ಮೇಲೆ ಏನೂ ಬೀಳುವುದಿಲ್ಲ, ಅವರು ತಪ್ಪಿಸಿಕೊಳ್ಳುತ್ತಾರೆ. ಮನೆ ಕಟ್ಟುವವರ ಮೇಲೆ, ಸಾಮಾನ್ಯ ಕಾರ್ಮಿಕ, ಮಧ್ಯಮ ವರ್ಗದ ನೌಕರ ಮತ್ತು ಇತರರ ಮೇಲೆ ಬೀಳುತ್ತದೆ. ಆದ್ದರಿಂದ 21 ಮತ್ತು 36 ಈ ಎರಡೂ ಬಾಬುಗಳ ಮೇಲೆ ತೆರಿಗೆ ಹೆಚ್ಚು ಮಾಡಿರುವುದು ಸರಿಯಲ್ಲ.

ಅದೇ ರೀತಿ ಮೆಡಿಸಿನಲ್ ಅಂಡ್ ಫಾರ್ಮಸ್ಯೂಟಿಕಲ್ ಪ್ರಿಪರೇಷನ್ಸ್ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ, ನಮ್ಮ ದೇಶದಲ್ಲಿ ಡ್ರಗಿಸ್ಟ್ಸ್ ಮತ್ತು ಕೆಮಿಸ್ಟ್ಸ್, ಫಾರ್ಮಸ್ಯೂಟಿಕಲ್ ಕಂಪೆನಿಯವರು ನೂರು ಪರ್ಸೆಂಟ್, 200 ಪರ್ಸೆಂಟ್, 500 ಪರ್ಸೆಂಟ್ ಲಾಭ ಮಾಡುತ್ತಿದ್ದಾರೆ ಸ್ಪೂರಿಯಸ್ ಡ್ರಗ್ಸ್ ಮಾಡಿ ಜನಗಳಿಗೆ ಅನ್ಯಾಯ ಮಾಡುತ್ತಿದ್ದಾರೆ ಎನ್ನುವ ದೂರುಗಳೂ ಇವೆ,

ಅನೇಕ ನಿದರ್ಶನಗಳೂ ಇವೆ. ಅದ್ದರಿಂದ ಜನ ಸತ್ತೂ ಹೋಗಿದ್ದಾರೆ. ಆದರೆ ಅದರ ಬಗ್ಗೆ ಈಗ ಹೇಳುವುದಕ್ಕೆ ಹೋಗುವುದಿಲ್ಲ. ಅದು ಈ ಮಸೂದೆಯಲ್ಲಿ ಬರುವುದಿಲ್ಲ. ಮೈಸೂರು ರಾಜ್ಯದಲ್ಲಿ ಫಾರ್ಮಸ್ಯೂಟಿಕಲ್ ಪ್ರಿಪರೇಷನ್ಸ್ ಮೇಲೆ ತೆರಿಗೆಯನ್ನು ಹಾಕಿದರೆ ಅದು ಔಷಧಿಯನ್ನು ಯಾರು ಕೊಂಡುಕೊಳ್ಳುತ್ತಾನೆ ಅವನ ಮೇಲೆ ಹೊರಿಸಿದಂತಾಗುತ್ತದೆ. ಇದನ್ನು ಬೇರೆ ರೀತಿಯಲ್ಲಿ ಪಡೆಯುವುದಕ್ಕೆ ಪ್ರಯತ್ನ ಪಡಬೇಕು. ಯಾರು ಔಷಧಿಗಳ ತಯಾರಿಕೆಯಿಂದ 500, 600, ಸಾವಿರ ಪರ್ಸೆಂಟ್ ಲಾಭಪಡೆಯುತ್ತಿದ್ದಾರೆ ಅಂಥವರ ಮೇಲೆ ನೇರವಾಗಿ ಪ್ರತ್ಯಕ್ಷ ತೆರಿಗೆಯನ್ನು ಹೊರಿಸಿ ಪಡೆಯಬೇಕು. ಹಾಗೆ ಮಾಡುವಾಗ ಅದರಿಂದ ಎಷ್ಟು ಅಂಶ ಬರುತ್ತದೆ ಅದು ರಾಜ್ಯ ಸರ್ಕಾರಕ್ಕೆ ಬರಬೇಕು ಎಂದು ಕೇಳಿ ಪಡೆಯಬೇಕು. ಆ ಆಧಾರದ ಮೇಲೆ ಮುಂದುವರಿದರೆ ಒಳ್ಳೆಯದು. ಈ ರೀತಿ ಜನಸಾಮಾನ್ಯರ ಮೇಲೆ ಹೊರೆ ಹೊರಿಸುವುದು ಸರಿಯಾದುದಲ್ಲ.

ಕಾಫಿ ಮೇಲೆ ತೆರಿಗೆಯನ್ನು ಹೆಚ್ಚು ಮಾಡಿದ್ದಾರೆ. ಎಲ್ಲ ರೀತಿಯ ಕಾಫಿ ಬೀಜ ಕಾಫಿ ಪುಡಿ ಇವುಗಳಿಗೆ ತೆರಿಗೆ ಜಾಸ್ತಿಯಾಗುತ್ತದೆ ಎಂದು ಹೇಳಿ ಇದರಲ್ಲಿ ಕಾಫಿ ಡ್ರಿಂಕ್ ಸೇರುವುದಿಲ್ಲವೆಂದು ಹೇಳಿದ್ದಾರೆ. ಹೋಟಲುಗಳಲ್ಲಿ ಕೊಡುವ ಕುಡಿಯುವ ಕಾಫಿಯ ಮೇಲೆ ತೆರಿಗೆ ಹಾಕಬಾರದು ಎನ್ನುವ ಅಭಿಪ್ರಾಯ ಮಂತ್ರಿಗಳಿಗೆ ಇದ್ದ ಹಾಗೆ ಇದೆ. ಕಾಫಿ ಪುಡಿ ಮಾರಾಟದ ಮೇಲೆ ತೆರಿಗೆ ಬೀಳುತ್ತದೆ. ಇದು ತೀರ ಅನ್ಯಾಯ. ನಮ್ಮ ರಾಜ್ಯದಲ್ಲಿ ಪ್ರತಿಯೊಬ್ಬರೂ ಕಾಫಿ ಕುಡಿಯುತ್ತಾರೆ. ಆದ್ದರಿಂದ ಕಾಫಿ ಮೇಲೆ ತೆರಿಗೆ ಜಾಸ್ತಿ ಮಾಡುವುದು ಸರಿಯಾದುದಲ್ಲ ಎಂದು ನನಗನ್ನಿಸುತ್ತದೆ.

ಇನ್ನು ಕೆಮಿಕಲ್ ಫರ್ಟಿಲೈಸರ್ಸ್, ಬೋನ್-ಮೀಲ್, ಅಂಡ್ ಆಯಿಲ್ ಕೇಕ್, ಅದೇ ರೀತಿ ಪೆಸ್ಟಿಸೈಡ್ಸ್, ಮತ್ತು ಇನ್‌ಸೆಕ್ಟಿಸೈಡ್ಸ್ ಇವುಗಳ ಬಗ್ಗೆ ಮಾಡುವುದು ಒಂದು ಹೇಳುವುದು ಒಂದು. ಈ ಪೆಸ್ಟಿಸೈಡ್ಸ್ ಮತ್ತು ಇನ್‌ಸೆಕ್ಟಿಸೈಡ್ಸನ್ನು ಯಾರು ಮ್ಯಾನ್ಯುಫ್ಯಾಕ್ಚರ್ ಮಾಡುತ್ತಾರೋ ಅಂಥವರ ಮೇಲೆ ತೆರಿಗೆಯನ್ನು ಹಾಕಿ ಪರವಾಗಿಲ್ಲ. ಇದು ರೈತರ ಮೇಲೆ ಬೀಳುವಂಥ ಟ್ಯಾಕ್ಸ್, ಇದನ್ನು ನೀವು ಬಿಟ್ಟುಬಿಡಬೇಕು ಎಂದು ನಾನು ಹೇಳುತ್ತೇನೆ. ಇನ್ನೊಂದು ಅಂಶ, ಪ್ರಶರ್ ಕುಕ್ಕರ್ಸ್ ಇದರ ಮೇಲೂ ನೀವು ಟ್ಯಾಕ್ಸನ್ನು ಹಾಕಿದ್ದೀರಿ. ಮೂಲಭೂತವಾಗಿ, ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳನ್ನು ಸೈದ್ಧಾಂತಿಕವಾಗಿ, ವಾಸ್ತವಾಂಶಗಳನ್ನು ತಿಳಿದು ಯಾರು ನಮ್ಮ ದೇಶದಲ್ಲಿ ಗುತ್ತೇದಾರಿ ಬಂಡವಾಳಗಾರರು ಇದ್ದಾರೋ ಅವರ ಮೇಲೆ ಹೆಚ್ಚಿನ ತೆರಿಗೆಯನ್ನು ಹೊರಿಸಬಹುದು ಬೇಕಾದರೆ ಅವರನ್ನು ರಾಷ್ಟ್ರೀಕರಣ ಮಾಡಿ. ಇದರಿಂದ ನಮ್ಮ ರಾಜ್ಯಕ್ಕೆ ಬೇಕಾದಂಥ ಹಣವನ್ನು ನೀವು ಒದಗಿಸಬಹುದು. ಇದನ್ನು ಮಾಡುವುದನ್ನು ತಪ್ಪಿಸಿ, ಈ ಕೆಲಸಗಳನ್ನು ಮಾಡುತ್ತಿದ್ದೀರಿ. ಇದು ಸರಿಯಲ್ಲ. ಈ ರೀತಿಯ ದಿಟ್ಟತನದ ಒಂದು ಹೆಜ್ಜೆಯನ್ನು ಇಡುವುದಕ್ಕೆ ನೀವು ತಯಾರಿಲ್ಲ. ಹಾಗೆಯೇ, ಮರ್ಕ್ಯುರಿ, ಇದರ ಮೇಲಿನ ಟ್ಯಾಕ್ಸನ್ನು ಹಾಗೆಯೇ ಉಳಿಸಿದ್ದೀರಿ, ಇದರ ಮೇಲಿನ ಟ್ಯಾಕ್ಸನ್ನು ನೀವು ಜಾಸ್ತಿ ಮಾಡಲಿಲ್ಲ. ಇದು ಸಾಮಾನ್ಯ ಜನರು ಉಪಯೋಗ ಮಾಡತಕ್ಕ ವಸ್ತುವಲ್ಲ. ಇದರ ಬಗ್ಗೆ ಬೇಕಾದಷ್ಟು ಟ್ಯಾಕ್ಸನ್ನು ನೀವು ಹಾಕಬಹುದು. ಸಾಮಾನ್ಯ ಜನರ ದೃಷ್ಟಿಯಲ್ಲಿ ಯಾವ ಯಾವ ವಸ್ತುಗಳ ಮೇಲಿನ ತೆರಿಗೆಯನ್ನು ಕೈ ಬಿಡಬೇಕು ಎನ್ನುವುದು ಮೂಲಭೂತವಾಗಿ ನೋಡಬೇಕು. ನಂತರ ಸೈಂಟಿಫಿಕ್ ಕ್ಲಾಸಿಫಿಕೇಷನ್ ಮಾಡಬೇಕು ಎನ್ನುವ ಅಂಶವೂ ಇದೆ. ಆಮೇಲೆ ಕಾಟನ್ ಮೇಲೆ ಟ್ಯಾಕ್ಸನ್ನು ಹಾಕಿದ್ದೀರಿ.

> "Cotton, that is to say, all kinds of cotton (indigenous or imported) in its unmanufactured state, whether ginned, bales, pressed or otherwise, but not including cotton waste"

That is also an incidence of tax upon an ordinary person because the whole thing will be passed on to ordinary man who uses these articles.

Sri M. Y. GHORPADE.—Taxing agricultural produce wherever it is possible, is that not one way of taxing the agricultural sector ? ಒಂದು ಕಡೆ ಹೇಳುತ್ತೀರಿ, ಅಗ್ರಿಕಲ್ಚರ್ ಸೆಕ್ಟರ್‌ನಲ್ಲಿ ಸಾಕಷ್ಟು ಟ್ಯಾಕ್ಸ್ ಇಲ್ಲ ಎಂದು ಇನ್ನೊಂದು ಕಡೆ ಹೇಳುತ್ತೀರಿ, ಅಗ್ರಿಕಲ್ಚರ್ ಪ್ರಾಡ್ಯೂಸ ಮೇಲೆ ಟ್ಯಾಕ್ಸ್ ಹಾಕಿ ಎಂದು. ಅಗ್ರಿಕಲ್ಚರ್ ಪ್ರಾಡ್ಯೂಸ್ ಮೇಲೆ ಟ್ಯಾಕ್ಸ್ ಹಾಕಿದರೆ ಅಗ್ರಿಕಲ್ಚರ್ ಟ್ಯಾಕ್ಸ್ ಹಾಕಿದಂತೆ ಆಗುವುದಿಲ್ಲವೇ ? This will be on all those who can afford to pay.

Sri M. S. KRISHNAN.—I wanted to know the implications of taxing such articles. I perfectly agree that the agricultural sector particularly the rich peasantry who have been benefited because of the various schemes of the Government in the past several years the new agricultural capitalists class which has come up, they must be taxed. I totally agree with him. But I want to know whether this incidence of taxation *viz.* "Cotton, that is to say, all kinds of cotton (indigenous or imported) in its unmanufactured state, whether ginned, baled, pressed or otherwise, but not including 'cotton waste'" would really fall on the richer section of the peasantry ? If it falls, I have no objection at all for such a taxation. This is a matter on which I would like to seek a clarification from the Hon. Finance Minister. ಈ ಆಧಾರದ ಮೇಲೆ ನಾನು ಈ ಮಸೂದೆಯನ್ನು ವಿರೋಧಿಸುತ್ತೇನೆ. ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಅರ್ಥ ಸಚಿವರು ತಂದಿರತಕ್ಕಂಥ ಕರ್ನಾಟಕ ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ಲನ್ನು ನಾನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೇ, ಮಾನ್ಯ ಘೋರ್ಪಡೆಯವರು ಅರ್ಥ ಸಚಿವರಾದ ತಕ್ಷಣ, ಇವರು ಅರ್ಥಸಚಿವರಾಗುವುದಕ್ಕೆ ಮುಂಚೆ, ಜನಸಾಮಾನ್ಯರ ಬಗ್ಗೆ ಹೆಚ್ಚು ವಿಚಾರಗಳನ್ನು ತಿಳಿದುಕೊಂಡಿದ್ದವರು ಹೆಚ್ಚು ಹವ್ಯಾಸಗಳನ್ನು ಇಟ್ಟುಕೊಂಡಿದವರು ಇವರಿಂದ ಜನಸಾಮಾನ್ಯರಿಗೆ ಉಪಯೋಗವಾಗುತ್ತದೆ, ಇವರು ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆಂದು ನಿರೀಕ್ಷಣೆ ಮಾಡಿದ್ದವರ ಪೈಕಿ ನಾನು ಒಬ್ಬ. ಈಗ ನಮ್ಮ ನಿರೀಕ್ಷಣೆ ತದ್ವಿರುದ್ಧವಾಗಿದೆ. ಚುನಾವಣೆಯ ಸಮಯದಲ್ಲಿ, ಚುನಾವಣೆಗಳು ಕಳೆದನಂತರ, ಜನಗಳಿಗೆ ಇವರು ಏನು ಆಶೋತ್ತರಗಳನ್ನು ಹೇಳುತ್ತಾ ಬಂದಿದ್ದರು. ಬಡವರಿಗೋಸ್ಕರ ಹುಟ್ಟಿದ್ದೇವೆ, ಬಡವರಿಗೋಸ್ಕರ ಅಧಿಕಾರಕ್ಕೆ ಬರುತ್ತೇವೆ, ದೇಶದಲ್ಲಿ ಬಡತನ ತೊಲಗಿ, ಸಮೃದ್ಧಿಯಾಗುವಂತೆ ಮಾಡುತ್ತೇವೆ, ನಮಗೆ ಓಟು ಕೊಡಬೇಕು ಎಂದು ಇವರು ಕೇಳಿಕೊಂಡರು. ಇವರನ್ನು ನಂಬಿ ಜನ ಇವರಿಗೆ ಓಟು ಕೊಟ್ಟರು, ಇವರು ಅಧಿಕಾರಕ್ಕೂ ಬಂದರು. ಅಧಿಕಾರಕ್ಕೆ ಬಂದಮೇಲೆ ಜನಗಳ ಬಗ್ಗೆ ಇವರು ಇಟ್ಟಿರತಕ್ಕ ಅನುಕಂಪವನ್ನು ನೋಡಿದರೆ, ಇವರು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಏನು ಮಾತನಾಡಿದ್ದರೋ ಅದಕ್ಕೂ ಇವರ ಕೃತಿಗೂ ಯಾವ ಸಂಬಂಧವಿಲ್ಲ. ಇದು, ಇವರು ತಂದಿರತಕ್ಕಂಥ ತಿದ್ದುಪಡಿ ಮಸೂದೆಯನ್ನು ನೋಡಿದರೆ ಗೊತ್ತಾಗುತ್ತದೆ. ಇದುವರೆಗೂ ಮಾತನಾಡಿದ ಮಾನ್ಯ ತಿಮ್ಮಪ್ಪನವರು, ಬಂಗಾರಪ್ಪನವರು ಮತ್ತು ಕೃಷ್ಣ ಅವರು ಹೇಳಿದರು, ಇವರು ಭೋಗವಸ್ತುಗಳ ಮೇಲೆ ಮಾತ್ರ ಒಂದೆರಡು ಪರ್ಸೆಂಟ್ ಟ್ಯಾಕ್ಸನ್ನು ಜಾಸ್ತಿ ಮಾಡಿದ್ದಾರೆಂದು. ಅದೇ ರೀತಿಯಲ್ಲಿ ಸಾಮಾನ್ಯ ಜನತೆ, ಬಡವರು ಉಪಯೋಗಿಸತಕ್ಕ ವಸ್ತುಗಳ ಮೇಲೆ ಇವರು ಒಂದೆರಡು ಪರ್ಸೆಂಟ್ ಟ್ಯಾಕ್ಸನ್ನು ಹಾಕಿದ್ದಾರೆಯೇ ? ಮಾನ್ಯ ತಿಮ್ಮಪ್ಪನವರು ಹೇಳಿದ ಹಾಗೆ, ಶ್ರೀಮಂತರ ಮೇಲೂ ಬಡವರ ಮೇಲೂ ಒಂದೇ ಸಮನಾಗಿ ಟ್ಯಾಕ್ಸನ್ನು ಹಾಕಿದ್ದಾರೆಯೋ ? ಆದ್ದರಿಂದ ಇವರ ಒಲವು ಯಾರ ಕಡೆಗೆ ಇದೆಯೆಂದರೆ, ಶ್ರೀಮಂತ ವರ್ಗದ ಕಡೆಯೇ ಇರುತ್ತದೆ. ಆದರೆ ಬಡ ಜನತೆಯ ಬಗ್ಗೆ ಇವರು ಇಷ್ಟೊಂದು ಮಾತನಾಡಿಕೊಂಡು ಬಂದವರು, ಅವರ ಕಷ್ಟಕ್ಕೆ ಪರಿಹಾರ ಕೊಡುತ್ತೇವೆಂದು ಹೇಳಿಕೊಂಡು ಬಂದವರು, ಆ ಜನಗಳು ಉಪಯೋಗಿಸತಕ್ಕ ಪದಾರ್ಥಗಳ ಬಗ್ಗೆ ಭೋಗವಸ್ತುಗಳ ಮೇಲೆ ತೆರಿಗೆ ಹಾಕಿದ ರೀತಿಯಲ್ಲಿ, ತೆರಿಗೆಯನ್ನು ಹಾಕುವುದಕ್ಕೆ ತಮ್ಮ ದೃಷ್ಟಿಯನ್ನು ಹರಿಸಿದ್ದಾರೆ. ಇವರ ಮಾತಿಗೂ, ಕೃತಿಗೂ ಯಾವ ಸಂಬಂಧವೂ ಇಲ್ಲ. ಆತ್ಮವಂಚನೆ ಮಾಡಿಕೊಂಡು ಈ ಮಸೂದೆಯನ್ನು ಇಟ್ಟಿದ್ದಾರೆಂದು ನಾನು ಕಠಿಣವಾಗಿ ಈ ಸಂದರ್ಭದಲ್ಲಿ ಮಾತನಾಡಬೇಕಾಗಿ ಬರುತ್ತದೆ. ಬಡವರು ಉಪಯೋಗಿಸತಕ್ಕ ಎಲ್ಲಾ ಪದಾರ್ಥಗಳ ಮೇಲೂ ಇವರು ನಿರ್ದಾಕ್ಷಿಣ್ಯವಾಗಿ ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ. ನಾನು ಇವರಿಗೆ ಈಗಲಾದರೂ ಬಡವರ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿ ಎಂದು ಹೇಳಬೇಕಾಗುತ್ತದೆ. ಅವರ ಬಗ್ಗೆ ಬರೀ ಬಾಯಿಮಾತಿನಲ್ಲಿ ಅನುಕಂಪವನ್ನು ತೋರಿಸುತ್ತಿದ್ದಾರೆಯೇ ವಿನಹ ಕಾರ್ಯತಃ ಮಾಡುವಂಥ ಕೆಲಸವನ್ನು ಏನೂ ಮಾಡಿಲ್ಲ. ಆದ್ದರಿಂದ ಅವರಿಗೆ ನಾನು ಪ್ರಾರ್ಥಿಸಿಕೊಳ್ಳುತ್ತೇನೆ, ಇನ್ನು ಮೇಲಾದರೂ ಬಡವರ ಬಗ್ಗೆ ಮಾತನಾಡುವುದಕ್ಕೆ ಹೋಗಬೇಡಿ. ಬಡವರ ಬಗ್ಗೆ ಮಾತನಾಡುವುದಾದರೆ, ಅವರ ಮೇಲೆ ಅನ್ಯಾಯವಾಗಿ ಹೇರತಕ್ಕ ತೆರಿಗೆಯ ಹೊರೆಯನ್ನು ಕಡಿಮೆ ಮಾಡಿ. ಇಲ್ಲವಾದರೆ ಅವರ ಬಗ್ಗೆ ನೀವು ಮಾತನಾಡುವುದನ್ನು

ನಿಲ್ಲಿಸಿ, ಎರಡರಲ್ಲಿ ಯಾವುದಾದರೂ ಒಂದನ್ನು ನೀವು ಮಾಡಬೇಕಾಗುತ್ತದೆ. ನಮಗೆ ಬಹುಮತ ಇದೆ ನಾವು ಏನು ಬೇಕಾದರೂ ಮಾಡಿಕೊಳ್ಳಬಹುದು ಎಂದು ನೀವು ತಿಳಿದುಕೊಂಡಿರಬಹುದು. ಆದರೆ ಇದು ಸರಿಯಲ್ಲ.

ಎರಡನೆಯದಾಗಿ, ನೀವು ನೂಲಿನ ಬಟ್ಟೆಯ ಮೇಲೆ ತೆರಿಗೆಯನ್ನು ಹಾಕಿದ್ದೀರಿ. ಮೊದಲು ಈ ಬಟ್ಟೆ ಎರಡು ರೂಪಾಯಿ ಇದ್ದುದು ಈಗ 5 ರೂಪಾಯಿಗಳವರೆಗೆ ಆಗಿದೆ. ಒಂದು ಮೀಟರ್‌ಗೆ 5 ರೂಪಾಯಿಗಳಿಗೆ, ಕಡಿಮೆ ಎಂಥ ಬಟ್ಟೆಯೂ ಸಿಕ್ಕುವುದಿಲ್ಲ. ಬಟ್ಟೆಯ ಬೆಲೆ ಒಂದಕ್ಕೆ ನಾಲ್ಕರಷ್ಟು ಜಾಸ್ತಿಯಾಗಿದೆ. ತೆರಿಗೆಯನ್ನು ಹಾಕುವಾಗ ಕೇಂದ್ರ ಸರ್ಕಾರದವರು ಹಾಕುತ್ತಾರೆ, ರಾಜ್ಯ ಸರ್ಕಾರದವರು ಹಾಕುತ್ತಾರೆ, ಈ ರೀತಿ ಒಂದು ಪೈಪೋಟಿ ನಡೆಯುತ್ತಿರುವಂತೆ ಕಾಣುತ್ತಿದೆ.

11-00 A.M.

ಶ್ರೀ ಕೆ. ಎಚ್. ರಂಗನಾಥ್.—ಯಾರನ್ ಮತ್ತು ಬೀಜದ ರೇಟ್ ಏನಾಗಿದೆ? ಎಷ್ಟೆಷ್ಟು ರೇಟ್ ಜಾಸ್ತಿಯಾಗಿದೆ ಅದನ್ನು ಲೆಕ್ಕ ಹಾಕಿದರೆ, ಟ್ಯಾಕ್ಸ್ ಎಷ್ಟು ಹಾಕುತ್ತಾರೆ ಅಷ್ಟೇ ರೇಟ್ ಜಾಸ್ತಿಯಾಗಿದೆಯೇ? 1952ರಲ್ಲಿ ಹತ್ತಿ ಬೆಳೆಯುವವರೆಗೆ ಅಷ್ಟೆ ಸಿಕ್ಕುತ್ತಿತ್ತು. ಈಗ 50 ರೂಪಾಯಿ ಜಾಸ್ತಿಯಾಗಿರಬಹುದು, ಆದರೆ ಬಟ್ಟೆ ರೇಟ್ ಎಷ್ಟಾಗಿದೆ? ಬಟ್ಟೆ ಮಾಡುವಾಗ ಎಷ್ಟು ಹತ್ತಿ ಖರ್ಚಾಗುತ್ತದೋ ಅಷ್ಟೇ ರೇಟ್ ಜಾಸ್ತಿ ಮಾಡಿದ್ದಾರೆಯೇ?

ಶ್ರೀ ಟಿ. ಎಂ. ಮಂಜುನಾಥ್.—ಕಂಟ್ರೋಲ್ ಕ್ಲಾತ್ ಏನು ಇದೆ ಅದಕ್ಕೆ ಸೆಂಟ್ರಲ್ ಗೌವರ್ನ್ಮೆಂಟ್‌ನವರು 30 ಪರ್‌ಸೆಂಟ್ ಟ್ಯಾಕ್ಸ್ ಜಾಸ್ತಿ ಮಾಡಿದ್ದಾರೆ. ಅಂತಹ ಬಟ್ಟೆಗೆ ತಿರುಗಿ ಸರ್ಕಾರದವರು ಟ್ಯಾಕ್ಸ್ ಹಾಕಿದ್ದಾರೆ. ಇದರಿಂದ ಸರ್ವೆಸಾಮಾನ್ಯವಾಗಿ ಜನತೆಗೆ ತೊಂದರೆಯಾಗುತ್ತದೆ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

ಶ್ರೀ ಕೆ. ಎಚ್. ರಂಗನಾಥ್.—ಪ್ರೈಸಸ್ ಜಾಸ್ತಿ ಆಗುವುದಕ್ಕೆ ಟ್ಯಾಕ್ಸ್ ಹಾಕಿರುವುದು ಕಾರಣವಲ್ಲ. ಬೇರೆ ಬೇರೆ ಕಾರಣಗಳಿಗೆ, ಅದರ ಕಡೆ ಅಷ್ಟು ಗಮನ ಕೊಡುವುದಿಲ್ಲ. ಬರೇ ಟ್ಯಾಕ್ಸ್ ಹಾಕಿರುವುದರಿಂದ ಬೆಲೆ ಜಾಸ್ತಿ ಆಗಿರುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ರೈತ ಬೆಳೆಯತಕ್ಕ ಹತ್ತಿ ಪ್ರೊಡಕ್ಷನ್‌ಗೆ ಎಷ್ಟು ಖರ್ಚು ಬರುತ್ತದೆ ಎಂದು ನೋಡಬೇಕು. ಗೊಬ್ಬರದ ಬೆಲೆ ಜಾಸ್ತಿ ಆಗಿದೆ, ಮಾರುಕಟ್ಟೆ ಖರ್ಚು ಜಾಸ್ತಿ ಬರುತ್ತದೆ. ಪ್ರತಿಯೊಂದು ಹಂತದಲ್ಲಿಯೂ ಪ್ರೊಡಕ್ಷನ್ ಕಾಸ್ಟ್ ಜಾಸ್ತಿ ಇರುವುದರಿಂದ ಅವಕ್ಕೆ ಯಾರು ಏನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಕೆ. ಎಚ್. ರಂಗನಾಥ್.—ದಳ್ಳಾಳಿ ಅಂಗಡಿಗಳವರು ಹತ್ತಿ ಕೊಂಡುಕೊಳ್ಳುತ್ತಾರೆ. ಅಲ್ಲಿಂದ ಮುಂದೆ ವ್ಯಾಪಾರ ಮಾಡತಕ್ಕವರು ಯಾವ ಯಾವ ಹಂತದಲ್ಲಿ ಯಾರು ಎಷ್ಟು ಜಾಸ್ತಿ ಮಾಡಿಕೊಂಡಿದ್ದಾರೆ ಎನ್ನುವುದನ್ನು ವಿಚಾರ ಮಾಡೋಣ. ದಳಾಳಿ ಅಂಗಡಿ ಬಂದ ಮೇಲೆ, ಅಲ್ಲಿ ಹತ್ತಿ ಇಟ್ಟಿದ್ದಕ್ಕೆ ಅವನಿಗೆ ಕಮಿಷನ್ ಕೊಡಬೇಕು. ವ್ಯಾಪಾರ ಮಾಡುವವರು ಪ್ರತಿಯೊಬ್ಬ ವ್ಯಾಪಾರಸ್ಥನು ಧರ್ಮ ತೆಗೆದುಕೊಳ್ಳುತ್ತಾನೆ. ಅಲ್ಲಿ ಕೊಂಡುಕೊಂಡು ಬಂದ ಮೇಲೆ ಬೀಜಕ್ಕೆ ಏನು ರೇಟ್ ಇದೆ ಆ ರೇಟ್ ಸಿಗುತ್ತದೆ. ಬೀಜಕ್ಕೆ ಬೀಳುವಷ್ಟು ರೇಟ್ ರೈತನಿಗೆ ಸಿಗುತ್ತಾ ಇಲ್ಲ. ಮರ್ಚೆಂಟ್ ಬಗ್ಗೆ ವಿಚಾರ ಮಾಡುವುದಿಲ್ಲ. ಅವನು ಯಾವ ಪರ್ಸೆಂಟೇಜ್ ಲಾಭ ಹಾಕುತ್ತಾರೆ ಎಂದು ಲೆಕ್ಕ ಹಾಕಿದರೆ ಬಳಿಳ ಮಟ್ಟಿಗೆ ನಾವು ನೀವು ದೊಡ್ಡ ಸೇವೆ ಮಾಡಿದಂತಾಗುತ್ತದೆ.

MR. DEPUTY SPEAKER.—That is a very important point. But it is a deviation from the Subject.

ಶ್ರೀ ಟಿ. ಎಂ. ಮಂಜುನಾಥ್.—ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಓಪನ್ ಆಕ್ಷನ್ ಇರುತ್ತದೆ. ರೈತ ಬೇಕಾದರೆ ಬರೇ ಹತ್ತಿಯನ್ನಾದರೂ ಆಕ್ಷನ್ ಮಾಡಿಸಲಿ, ಅಥವಾ ಸೀಡ್ಸ್ ಬೇಕಾದರೆ ಅದನ್ನು ಆಕ್ಷನ್ ಮಾಡಿಸಲಿ. ಸಿಮೆಂಟ್ ರೇಟ್ ಯಾವ ರೀತಿ ಫಿಕ್ಸ್ ಮಾಡಿರುತ್ತಾರೋ ಅದೇ ರೀತಿ ಇಲ್ಲಿಯೂ ರೇಟ್ ಫಿಕ್ಸ್ ಮಾಡಲಿ, ಮತ್ತು ರೈತನಿಗೆ ಅದರ ಲಾಭ ಸಿಕ್ಕಲಿ.

ಶ್ರೀ ಕೆ. ಎಚ್. ಹನುಮೇಗೌಡ.—ಶ್ರೀ ರಂಗನಾಥ್ ಅವರು ಹೇಳಿದ ಹಾಗೆ ಶ್ರೀಮಂತ ವರ್ಗದ ಮೇಲೆ ವ್ಯಾಪಾರಿಗಳ ಮೇಲೆ, ದಳ್ಳಾಳಿಗಳ ಮೇಲೆ ಟ್ಯಾಕ್ಸ್ ಹಾಕಬೇಡಿ ಎಂದು ಹೇಳುತ್ತಾ ಇಲ್ಲ. ಹಾಕಿದುದನ್ನು ವಸೂಲು ಮಾಡುವುದಕ್ಕೆ ಅಧಿಕಾರಿಗಳು ಇದ್ದಾರೆ. ಸರ್ಕಾರ ನಡೆಸಲಿಕ್ಕೆ ಆದರೂ ಟ್ಯಾಕ್ಸ್ ಹಾಕಬೇಕು.

ಶ್ರೀ ಕೆ. ಎಚ್. ರಂಗನ್‌ಥ್.—ಟ್ಯಾಕ್ಸ್ ಹಾಕಿರಿ ಎಂದು ಹೇಳಲಿಲ್ಲ. ಬಡ ಜನಗಳನ್ನು ಎಕ್ಸ್‌ಪ್ಲಾಯಿಟ್ ಮಾಡುತ್ತಾ ಇದ್ದಾರೆ. ಅವರ ಬಗ್ಗೆ ಟೀಕೆ ಮಾಡೋಣ ಎಂದು ಹೇಳಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಅವರು ಕೊಂಡುಕೊಳ್ಳುವ ರೇಟಿಗೂ ಮಾರುವ ರೇಟಿಗೂ ಎಷ್ಟು ಅಂತರ ಇದೆ ಎಂದು ವೈಜ್ಞಾನಿಕವಾಗಿ ಅನಲೈಸ್ ಮಾಡೋಣ. ಆದರ ಮೇಲೆ ಟೀಕೆ ಮಾಡೋಣ. 1970ನೇ ಇಸವಿಯಲ್ಲಿ ಗಜಕ್ಕೆ 2 ರೂಪಾಯಿ ಒಂದು ರೂಪಾಯಿಗೆ ಸಿಕ್ಕತಕ್ಕ ಹತ್ತಿ ಬಟ್ಟೆಗೆ ಈಗ 5 ರೂಪಾಯಿ 4 ರೂಪಾಯಿ ಆಗಿದೆ. ಒಂದಕ್ಕೆ ಈ ರೀತಿ ಎರಡು ಮೂರರಷ್ಟು ರೇಟ್ ಆಗಿ ಜನರ ಕಷ್ಟ ಹೇಳತೀರದು. ಕೇಂದ್ರ ಸರ್ಕಾರದವರು ಟ್ಯಾಕ್ಸ್ ಹಾಕುತ್ತಾರೆ. ರಾಜ್ಯ ಸರಕಾರದವರು ಟ್ಯಾಕ್ಸ್ ಹಾಕುತ್ತಾ ಹೋಗುತ್ತಿದ್ದಾರೆ. ಮಾನ ಮುಚ್ಚಿಕೊಳ್ಳುವುದಕ್ಕೆ ಅರ್ಧಂಬರ್ಧದ ಬಟ್ಟೆ ಹಾಕುತ್ತಾನೆ. ಆ ಬಟ್ಟೆಗೂ ಕೂಡ ತೊಂದರೆ ಬಂದು ಬಟ್ಟೆಯನ್ನು ಹಾಕಿಕೊಳ್ಳುವ ಸ್ಥಿತಿಯಲಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ 10, 12 ವರ್ಷವಾಗಿರತಕ್ಕ ಬಡವರ ಮಕ್ಕಳು ಲಂಗೋಟಿ ಕಟ್ಟಿಕೊಂಡಿರುವ ಮತ್ತು ಹೆಣ್ಣು ಮಕ್ಕಳು ಚಿಂದಿ ಬಟ್ಟೆಯನ್ನು ಹಾಕಿಕೊಂಡಿರುವ ಸಾಮಾನ್ಯ ದೃಶ್ಯ ಕೇಳಿರುವುದಷ್ಟೇ ಅಲ್ಲ ನೋಡಿದ್ದೇವೆ. ಆ ಬಡಪಾಯಿಗಳು ಉಪಯೋಗ ಮಾಡುವ ಬಟ್ಟೆಗೆ ಸರ್ಕಾರಕ್ಕೆ ಕನಿಕರ ಬಾರದೆ ಹೋಯಿತಲ್ಲ ಎಂದು ವ್ಯಸನ ಪಡಬೇಕಾಗಿದೆ; ಈ ರೀತಿ ಟ್ಯಾಕ್ಸ್ ಹಾಕುತ್ತಾ ಹೋದರೆ ಇದರ ಕೊನೆ ಮುಟ್ಟುವುದು ಎಲ್ಲಿ ಎಂದು ಅರ್ಥವಾಗುತ್ತಾ ಇಲ್ಲ. ಆದ್ದರಿಂದ ಅರ್ಥ ಸಚಿವರನ್ನು ಕೇಳಿಕೊಳ್ಳುತ್ತೇವೆ ದಯಮಾಡಿ ಕೊನೆಯ ಪಕ್ಷ ಬಡವರು ಉಪಯೋಗಿಸತಕ್ಕ ನೂಲಿನ ಮೇಲೆ ಹಾಕಿದ ಟ್ಯಾಕ್ಸನ್ನು ಕೈಬಿಡಬೇಕು. ಕೆರೋಸೀನ್ 4 ಪರ್ಸೆಂಟ್ ಜಾಸ್ತಿ ಮಾಡಿದ್ದೀರಿ. ಹಿಂದೆ 60 ಪೈಸೆಗೆ ಒಂದು ಲೀಟರ್ ಸೀಮೆಎಣ್ಣೆ ಸಿಗುತ್ತಿತ್ತು. ಈಗ ಅದರ ಬೆಲೆ ಒಂದು ರೂಪಾಯಿ 5 ಪೈಸೆ. ಒಂದು ರೂಪಾಯಿ 10 ಪೈಸೆಗೆ ಏರಿ ಹೋಗಿದೆ. ಹಳ್ಳಿಗಳಲ್ಲಿ 2 ರೂಪಾಯಿ ಕೊಟ್ಟರೂ ಸಿಗುತ್ತಾ ಇಲ್ಲ. ಪರಿಸ್ಥಿತಿ ಹೀಗಿರುವಾಗ ಕೇಂದ್ರ ಸರ್ಕಾರದವರು ಟ್ಯಾಕ್ಸ್ ಹಾಕುತ್ತಾರೆ ಮತ್ತೆ ಪುನಃ ತಾವೂ ಏರಿಸಿಕೊಂಡು ಹೋಗುತ್ತಾ ಇದ್ದೀರಿ. ಈಗಲೂ ಕೆಲವು ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಇಲ್ಲ. ಯಾವ ವಿಧವಾದ ಅನುಕೂಲ ಇಲ್ಲ. ಜಮೀನಿನಲ್ಲಿ ದುಡಿದು ಬಂದು, ಒಂದೆರಡು ಗಂಟೆ ದೀಪದ ಬೆಳಕಿನಲ್ಲಿ ಅಡುಗೆಮಾಡಿ, ಊಟಮಾಡಿ ನೆಮ್ಮದಿಯಿಂದ ಮಲಗುವುದಕ್ಕೂ ರೈತನಿಗೆ ಆಗುತ್ತಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಸೀಮೆಎಣ್ಣೆ ಮೇಲೆ ಟ್ಯಾಕ್ಸ್ ಜಾಸ್ತಿ ಮಾಡಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ನಾಲ್ಕು ಪರ್ಸೆಂಟ್ ಹಾಕಿದ್ದೀರಿ.

ಶ್ರೀ ಎಂ. ವೈ. ಘೋರ್ಪಡೆ.—ಮೊದಲೇ ಇತ್ತು.

ಶ್ರೀ ಕೆ. ಎಚ್. ಹನುಮೇಗೌಡ.—ಅದನ್ನು ತೆಗೆದು ಬಿಡಿ. ಹಳ್ಳಿಯಲ್ಲಿ ರೈತರು ಬೆಳಕಿನಲ್ಲಿ ಅಡುಗೆ ಮಾಡಬೇಕಾದರೆ, ಒಂದೆರಡು ಗಂಟೆ ಮುಂಚಿತವಾಗಿ ಕೆಲಸ ಬಿಟ್ಟು ಬರಬೇಕಾಗುತ್ತದೆ. ಅದರಿಂದ ಅವರಿಗೆ ಎಷ್ಟರಮಟ್ಟಿಗೆ ಲುಕ್ಸಾನ್ ಆಗುತ್ತದೆ?. ಒಬ್ಬರ ಮೇಲೆ ಒಬ್ಬರು ಪೈಪೋಟಿ ಮೇಲೆ ಟ್ಯಾಕ್ಸ್ ಹಾಕುತ್ತಾ ಹೋದರೆ ಜನ ಮುಂದುವರಿಯುವುದು ಹೇಗೆ? ಬದುಕುವುದು ಹೇಗೆ? ಗೊಬ್ಬರದ ಮೇಲೆ 2 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೀರಿ. ಮಾನ್ಯ ಮಂತ್ರಿಗಳಿಗೆ ಜಮೀನು ಇದೆಯೋ, ವ್ಯವಸಾಯದ ಅನುಭವ ಇದೆಯೋ ಕಾಣೆ. ಒಂದು ದಿವಸವಾದರೂ ಹೊಲದಲ್ಲಿ ತಾವು ಹೋಗಿ ವ್ಯವಸಾಯ ಮಾಡಿದವರಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ನನಗೂ ಭೂಮಿ ಇದೆ. ನಾನೂ ವ್ಯವಸಾಯ ಮಾಡುತ್ತಿದ್ದೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಹಾಗೆ ಅನುಭವ ಇದ್ದರೆ ಗೊಬ್ಬರದ ಮೇಲೆ ಎರಡು ಪರ್ಸೆಂಟ್ ಟ್ಯಾಕ್ ಹಾಕುತ್ತಾ ಇರಲಿಲ್ಲ. ಈಗ ಗೊಬ್ಬರದ ರೇಟ್ ಎರಡರಷ್ಟು ಜಾಸ್ತಿಯಾಗಿದೆ. ಬ್ಲಾಕ್ ಮಾರ್ಕೆಟ್‌ನಲ್ಲಿ 2 ಸಾವಿರ ರೂಪಾಯಿಗಳವರೆಗೆ ಹೋಗಿದೆ.

ಶ್ರೀ ಎಂ. ವೈ. ಘೋರ್ಪಡೆ.—ಫರ್ಟಿಲೈಸರ್ಸ್ ಅಭಾವದಿಂದ ರೈತರಿಗೆ ತೊಂದರೆಯಾಗುತ್ತಿದೆ. ಟ್ಯಾಕ್ಸ್‌ನಿಂದ ಅಲ್ಲ. ಗೊಬ್ಬರ ಸಿಕ್ಕರೆ ಸಾಕು ಎಂದು ರೈತ ಹೇಳುತ್ತಿದ್ದಾನೆ. ತೆರಿಗೆಯಿಂದ ತೊಂದರೆಯಾಗುತ್ತಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಅಭಾವದಿಂದ ತೊಂದರೆಯಾಗುತ್ತಿಲ್ಲ. ಅಧಿಕಾರಿಗಳು ಅವಿವೇಕದಿಂದ ಏನು ಗೊಬ್ಬರ ವಿತರಣೆ ಮಾಡುತ್ತಿದ್ದಾರೆ ಅದರಿಂದಾಗಿ ಬ್ಲಾಕ್ ಮಾರ್ಕೆಟ್ ಆಗಿ ಬೆಲೆ ಜಾಸ್ತಿ ಆಗಿದೆ. ಗೊಬ್ಬರ ಅಭಾವ ಇದೆಯೆಂದು ಹೇಳುತ್ತಿದ್ದೀರಿ ಯಾವ ಊರಿಗೆ ಬೇಕಾದರೂ ಹೋಗಿ ಒಂದಕ್ಕೆ ಡಬ್ಬಲ್ ರೇಟ್ ಕೊಟ್ಟರೆ ಎಷ್ಟು ಸಾವಿರ ಟನ್ ಗೊಬ್ಬರ ಬೇಕಾದರೂ ಸಿಕ್ಕು

ತ್ತದೆ. ಅಭಾವ ಏನು ಇದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. 5–10, ಪರ್ಸೆಂಟ್ ಅಭಾವ ಇರಬಹುದು. ಅದು ಅವಿವೇಕದಿಂದ ಆಗಿರುವುದು ಅವರು ಎಲೆಕ್ಷನ್ ಖರ್ಚಿಗೆ ಕೋಟಿಗಟ್ಟಲೆ ದುಡ್ಡು ಕೊಟ್ಟಿದ್ದಾರೆ. ಇದು ತಮ್ಮ ಅವಿವೇಕದ ಫಲದಿಂದ ರೈತರು ಕಷ್ಟಪಡಬೇಕಾಗಿ ಬಂದಿದೆ. ಧರ್ಮ ದೃಷ್ಟಿಯಿಂದ ಆತ್ಮಪೂರ್ವಕವಾಗಿ ಮಾಡಬೇಕು. ಪಾಪಕ್ಕೆ ಕೈ ಹಾಕಬಾರದು. ಫ್ಯಾಕ್ಟರಿ ಹಿಂದು ಗಡೆ ಹೋಗಿ ಅವರ ಜೇಬಿಗೆ ಕೈ ಹಾಕದಿದ್ದರೆ ಅವರ ರೇಟು ಇಷ್ಟು ಜಾಸ್ತಿ ಜಾಮುತ್ತಾ ಇರಲಿಲ್ಲ. ಎಲೆಕ್ಷನ್‌ಗೆ ದುಡ್ಡು ಕೊಟ್ಟರು ಅದರ ದೆಸೆಯಿಂದ ರೇಟ್ ಇಷ್ಟು ಜಾಸ್ತಿಯಾಗುತ್ತಾ ಇದೆ. ಜನ ಏನೂ ಗೊತ್ತಿಲ್ಲದೆ ಕಣ್ಣು ಮುಚ್ಚಿಕೊಂಡು ಕೂತಿದ್ದಾರೆ ಎಂದು ತಿಳಿದುಕೊಳ್ಳಬಾರದು. ಬಹಳ ಕಾಲ ಹಾಗೇ ಇರುವುದಿಲ್ಲ. ಲಿಮಿಟ್ ಮೀರಿದ ಮೇಲೆ ಮಾಡಿದ ಪಾಪಕ್ಕೆ ಯಾರಾದರೂ ಒಳಗಾಗ ಬೇಕಾಗುತ್ತದೆ. ರೇಟ್ ಇಷ್ಟೊಂದು ಜಾಸ್ತಿಯಾಗಿರುವಾಗ ತಾವು ಪುನಃ ಇಷ್ಟು ಟ್ಯಾಕ್ಸ್ ಹಾಕಿದ್ದೀರಿ. ಆಯಿಲ್ ಕೇಕ್ಸ್ ಬಗ್ಗೆ ಜಾಸ್ತಿ ಟ್ಯಾಕ್ಸ್ ಹಾಕಿದ್ದೀರಿ. ಅದರ ಬೆಲೆ 350 ರೂಪಾಯಿ ಎರಡು ವರ್ಷಗಳ ಹಿಂದೆ ಇತ್ತು. ಈವತ್ತಿನ ದಿವಸ ಅದು 1200 ರೂಪಾಯಿ ಆಗಿದೆ. ಕೆಮಿಕಲ್ ಮ್ಯಾನ್ಯೂರ್ಸ್, ಭೂಮಿಗೆ ಹಾಕಬೇಕು. ಅಗ್ರ್ಗಾನಿಕ್ ಮ್ಯಾನ್ಯೂರ್ಸ್ ಹಾಕಿ ವ್ಯವಸಾಯ ಮಾಡ ಬೇಕು ಎಂದು ವಿಜ್ಞಾನಿಗಳು ಹೇಳುತ್ತಾರೆ. ಆಯಿಲ್ ಕೇಕ್ಸ್ ಆರ್ಗಾನಿಕ್ ಮ್ಯಾನ್ಯೂರ್ ಆಗು ತ್ತದೆ. ಕಾಂಪೋಸ್ಟ್ ಇಲ್ಲದೆ ಹೋದರೆ ಕೊನೆಪಕ್ಷ ಹಿಂಡಿ ಸೇರಿಸುವುದರಿಂದ ಭೂಮಿಯಲ್ಲಿ ಬೆಳೆಯುವಂಥಾದ್ದು ಹೆಚ್ಚಾಗುತ್ತದೆ ಎಂದು ಹೇಳುತ್ತೇನೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. 310 ರೂಪಾಯಿ ಇದ್ದುದು ಸಾವಿರ ಗಟ್ಟಲೆ ಏರಿ ಹೋದಾಗ ಅದನ್ನು ಇಳಿಸುವುದಕ್ಕೆ ಆಗಲಿಲ್ಲ. ಅದರ ಜೊತೆಗೆ ತಾವೂ ಸೇರಿಕೊಳ್ಳುತ್ತೀರಿ. ತಮ್ಮದು ಕಾಂಟ್ರಿಬ್ಯೂಷನ್ ಏನು ಎಂದರೆ ಬೆಂಕಿ ಹತ್ತಿ ಉರಿಯುವಾಗ ಆ ಬೆಂಕಿಗೆ ಸ್ವಲ್ಪ ಎಣ್ಣೆ ಹಾಕುತ್ತೀರಿ.

ಶ್ರೀ ಕೆ. ಎಚ್. ಹನುಮೇಗೌಡ.—ಬೆಲೆ ಏರುವುದರ ಜೊತೆಗೆ ನೀವು ಬೆಲೆ ಏರಿಸುವುದಕ್ಕೆ ಹೊರಟಿದ್ದೀರಿ. ಇದು ಯಾವ ನ್ಯಾಯ? ತಮ್ಮ ಆತ್ಮ ಒಪ್ಪುತ್ತದೆಯೇ ? ದೇಶದ ಹಿತದೃಷ್ಟಿ ಯಿಂದ ಒಳ್ಳೆಯದು ಆಗುತ್ತದೆಯೇ ? ನನ್ನ ನಾನು ಏತಕ್ಕೆ ರೇಗಿ ಮಾತನಾಡುತ್ತಿದ್ದ ಎಂದರೆ ನಾನೂ ಹಳ್ಳಿಯಿಂದ ಬಂದವನು. ಹಳ್ಳಿಗಳ ಕಷ್ಟ ಸುಖಗಳನ್ನು ನೋಡಿದವನು. ಹಳ್ಳಿಗಳ ಬಗ್ಗೆ ತಾವು ಅನುಕಂಪ ವ್ಯಕ್ತಪಡಿಸಿ ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ ಎಂದು ಹೇಳಿದಿರಿ. ಯಾವ ಅಗತ್ಯ ವಸ್ತುಗಳು ಅವರ ಕೈಗೆ ಸಿಗುತ್ತಾ ಇಲ್ಲ ಎಂದು ಅವರು ಕಣ್ಣೀರು ಹಾಕುತ್ತಾ ಇದ್ದಾರೆ. ಗಾಯಕ್ಕೆ ಬರೆ ಹಾಕಿದ ಹಾಗೆ ಅವರು ಕಷ್ಟಪಡುತ್ತಿರುವಾಗ ನೀವು ಇನ್ನಷ್ಟು ಅನಂಗೆ ಕಷ್ಟ ಕೊಡುತ್ತಿದ್ದೀರಿ. ಬಡವರ ಬಗ್ಗೆ ಹಿತಚಿಂತನೆ ಇದ್ದರೆ ಹೆಚ್ಚಿನ ತೆರಿಗೆಯನ್ನು ಹಾಕಿರುವುದನ್ನು ನಿಲ್ಲಿಸಿ. ಹನಿ ಕೂಡಿದರೆ ಹಳ್ಳ ತೆನೆ ಕೂಡಿದರೆ ಬತ್ತ ಎಂಬಂತೆ ತೆರಿಗೆಯನ್ನು ಒಂದು ಪರಸೆಂಟ್ ಹಾಕಿರುವುದನ್ನು ಕಡಮೆ ಮಾಡಿದರೂ ಅನುಕೂಲವಾಗುತ್ತದೆ. ಈಗ ಬಡಪಾಯಿಗಳಿಗೆ ಒಂದು ಪೈಸೆ ಕೊಡುವವರು ಯಾರು ಇದ್ದಾರೆ ?

ಶ್ರೀ ಎಂ. ವೈ. ಘೋರ್ಪಡೆ.—ಯಾರೂ ಟ್ಯಾಕ್ಸ್ ಕೊಡದಿದ್ದರೆ ಬಡವರಿಗೋಸ್ಕರ ಕಾರ್ಯ ಕ್ರಮವನ್ನು ಹಾಕಿಕೊಳ್ಳುವುದು ಹೇಗೆ ? ರಸ್ತೆಗಳು, ಸ್ಕೂಲುಗಳಿಗೆ, ಆಸ್ಪತ್ರೆಗಳಿಗೆ ಹಣ ಎಲ್ಲಿಂದ ಬರುತ್ತದೆ ?

ಶ್ರೀ ಕೆ. ಎಚ್. ಹನುಮೇಗೌಡ.—ಬಡವರ ಮೇಲೆ ತೆರಿಗೆಯನ್ನು ಹಾಕಬೇಡಿ ಎಂದು ನಾನು ಹೇಳುವುದಿಲ್ಲ. ಅವರು ಹೊರೆ ಹೊರಲಿಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ಹಾಕಿ. ಅವರ ಪ್ರಗತಿಯೂ ಕುಂಠಿತವಾಗಬಾರದು ಮತ್ತು ಅವರ ಸೊಂಟ ಮುರಿದ ನಿರ್ನಾಮವಾಗಬಾರದು. ಆ ರೀತಿ ತೆರಿಗೆ ಹಾಕಿ. ಅಧ್ಯಕ್ಷರೇ, ಶ್ರೀಮಾನ್ ಬಂಗಾರಪ್ಪನವರು ಅನೇಕ ಭೋಗವಸ್ತುಗಳ ಮೇಲೆ ಒಂದು ಎರಡು ಪರ್ಸೆಂಟ್ ಜಾಸ್ತಿ ತೆರಿಗೆ ಹಾಕಿದ್ದಾರೆ, ಅವನ್ನು ಇನ್ನೂ ಜಾಸ್ತಿ ಮಾಡ ಬೇಕು ಎಂದು ಹೇಳಿದ್ದಾರೆ. ಸರ್ಕಾರಕ್ಕೆ ಯಾವುವು ಭೋಗವಸ್ತುಗಳು ಎಂದು ಯೋಚಿಸಿ ಮಾಡುವ ಬಗ್ಗೆ ಗಮನ ಇರುವುದಿಲ್ಲ. ಟ್ಯಾಕ್ಸ್ ಹಾಕದೆ ರಾಜ್ಯಭಾರ ಮಾಡಲು ಆಗುವುದಿಲ್ಲ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಟ್ಯಾಕ್ಸ್‌ಗಳನ್ನು ಹಾಕುವಾಗ ರೈತರ ಪ್ರಗತಿ ಕುಂಠಿತವಾಗದ ರೀತಿಯಲ್ಲಿ, ಅವರಿಗೆ ನೋವಾಗದ ರೀತಿಯಲ್ಲಿ ಟ್ಯಾಕ್ಸ್‌ಗಳನ್ನು ಹಾಕಬೇಕು. ಆಗ ಅವರ ಪ್ರಗತಿ ಕುಂಠಿತವಾಗುವುದಿಲ್ಲ, ಅವರಿಗೆ ನೋವು ಆಗುವುದಿಲ್ಲ. ಸರ್ಕಾರದವರು ಸ್ವಲ್ಪ ವಿವೇಚನೆ ಉಪಯೋಗಿಸಿ ಟ್ಯಾಕ್ಸನ್ನು ಹಾಕಬೇಕು. ಯದ್ವಾತದ್ವಾ ಟ್ಯಾಕ್ಸ್ ಹಾಕಿ ರೈತರನ್ನು ನಿರ್ನಾಮ ಮಾಡಬಾರದು. ಕೊನೆಯದಾಗಿ ಕೆಮಿಕಲ್ ಫರ್ಟಿಲೈಜರ್, ಆಯಿಲ್ ಕೇಕ್ ಮೇಲೆ ಹಾಕಿರುವ ಟ್ಯಾಕ್ಸನ್ನು ವಾಪಸು ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುವು ದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗೊಬ್ಬರದ ಮೇಲೆ ಟ್ಯಾಕ್ಸ್ ಹಾಕುವುದು ಬೇಡ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಒಂದು ಪಕ್ಷ ಟ್ಯಾಕ್ಸ್ ಹಾಕದೇ ಹೋದರೆ ಗೊಬ್ಬರದ ಬೆಲೆ ಕಡಿಮೆ ಆಗುವ ಸಂಭವ ಉಂಟೇ ?

ಶ್ರೀ ಕೆ. ಎಚ್. ಹನುಮೇಗೌಡ.—ನೂರಕ್ಕೆ ಎರಡು ಪರ್‌ಸೆಂಟ್ ಕಡಿಮೆ ಮಾಡಲಿ ಸಾಕು. ಭೋಗವಸ್ತುಗಳ ಮೇಲಿನ ಟ್ಯಾಕ್ಸನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯ ಇದೆ. ಆದರೆ ಅಗತ್ಯ ವಸ್ತುಗಳ ಮೇಲೆ ಟ್ಯಾಕ್ಸನ್ನು ಹೆಚ್ಚು ಮಾಡುವುದಕ್ಕೆ ಹೋಗಬೇಡಿ. ಅದನ್ನು ಇರುವಷ್ಟಕ್ಕೇ ಬಿಟ್ಟುಬಿಡಿ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ಬರುವುದಕ್ಕೆ ಮೊದಲೇ ಹೇಳಿದೆ, ಇಲ್ಲಿ ಬಡವರ ಮೇಲೆ ಅನುಕಂಪ ತೋರಿಸುವುದನ್ನು ಬಿಡಿ, ಇಲ್ಲ ಟ್ಯಾಕ್ಸ್ ಹಾಕುವುದನ್ನು ನಿಲ್ಲಿಸಿ ಎಂದು. ಅದನ್ನು ಇನ್ನೊಂದು ಸಾರಿ ಕೇಳುತ್ತೇನೆ. ಒಂದು ಕಡೆ ವ್ಯಾಪಾರಸ್ಥರು, ರೇಟು ಜಾಸ್ತಿ ಮಾಡುವುದಕ್ಕೆ ಬಿಡುವುದು, ಅದಕ್ಕಾಗಿ ಕಾಂಗ್ರೆಸ್ ಫಂಡಿಗೆ ದುಡ್ಡು ತೆಗೆದುಕೊಳ್ಳುವುದು, ಇನ್ನೊಂದು ಕಡೆ ಅಶೋಕ ಹೋಟಲಿಗೆ ಹೋಗಿ ಮಾಡಬಾರದ ವ್ಯವಹಾರಗಳಲ್ಲಿ ತೊಡಗುವುದು.

ಶ್ರೀ ಕೆ. ಎಚ್. ರಂಗನಾಥ್.—ತಮ್ಮ ಮತ್ತು ಅವರ ಬಾಂಧವ್ಯ ನಿಂತು ಹೋಯಿತೇ ?

ಶ್ರೀ ಕೆ. ಎಚ್. ಹನುಮೇಗೌಡ.—ಅಂತಹವರ ಬಾಂಧವ್ಯ ನನಗೆ ಇಲ್ಲ .

ಶ್ರೀ ಕೆ. ಎಚ್. ರಂಗನಾಥ್.—ಕಾಂಗ್ರೆಸ್ "ಓ" ಅವರ ಬಾಂಧವ್ಯ ನಿಂತು ಹೋಯಿತೇ ?

ಶ್ರೀ ಕೆ. ಎಚ್. ಹನುಮೇಗೌಡ.—ಅದನ್ನು ಕಾಂಗ್ರೆಸ್ "ಓ", ಅವರೂ ಮಾಡಿದ್ದರೂ ತಪ್ಪೇ. ನಮ್ಮವರು ಹಾಗೆ ಮಾಡುವುದಿಲ್ಲ. ತಮ್ಮದು 500 ಪರ್ಸೆಂಟಿಗೆ ಮೀರಿ ಹೋಗಿದೆ. ತಮಗೆ ದೇವರು ಇಲ್ಲ, ಯಾರೂ ಇಲ್ಲ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಚರ್ಚೆಗೆ ಇರುವ ವಿಷಯಂ ಬಿಟ್ಟು ಬೇರೆ ವಿಷಯ ಮಾತನಾಡುವುದು ಸರಿಯಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಇನ್ನು ಡಸ್ಟ್ ಮತ್ತು ಸ್ಪ್ರೇಯರ್ಸ್‌ಗೆ ಟ್ಯಾಕ್ಸ್ ಜಾಸ್ತಿ ಮಾಡಿದ್ದಾರೆ. ತಾವು ಗರೀಬೀ ಹಠಾವೊ ಮಾಡುತ್ತೇವೆಂದು ಸರ್ಕಾರ ಆಡಳಿತ ವಹಿಸಿಕೊಂಡಿರಿ. 2 ವರ್ಷ, 3 ವರ್ಷಗಳಲ್ಲಿ ರೇಟ್‌ಗಳು ಎಷ್ಟರಮಟ್ಟಿಗೆ ಏರಿ ಹೋಗಿದೆ ಎಂದರೆ ವಿಷಮಶೀತ ಜ್ವರದಂತೆ ಏರುತ್ತಾ ಹೋಗುತ್ತಿದೆಯೇ ವಿನಹ ಇಳಿಯುತ್ತಾ ಇಲ್ಲ. ಇದನ್ನು ಇಳಿಸಬೇಕು ಅಂತ ಕಾಣುತ್ತದೆ. ನಾವು ನಿಮ್ಮನ್ನು ಕೆಳಗೆ ಇಳಿಸುವುದಕ್ಕೆ ಹೋಗುವುದಿಲ್ಲ. ತಾವು ತಮ್ಮ ಮನೋಭಾವವನ್ನು ಬದಲಾಯಿಸದೇ ಹೋದರೆ, ಜನರೇ ತಮ್ಮನ್ನು ಇಳಿಸುತ್ತಾರೆ. ಈವೊತ್ತು ದೇಶದಲ್ಲಿ ಡಸ್ಟ್ ಮತ್ತು ಸ್ಪ್ರೇಯರ್ಸಿಗೆ ಅಭಾವ ಇದೆ. ಒಂದು ಜಮೀನಿನಲ್ಲಿ ಬೆಳೆಗೆ ರೋಗ ಬಂದಾಗ ಸ್ಪ್ರೇ ಮಾಡಿದರೆ ಬಹುಶಃ ಒಂದು ಕ್ವಿಂಟಾಲ್ ಆಗುವ ಕಡೆ 6—7 ಕ್ವಿಂಟಾಲ್‌ಗಳಾದರೂ ಆಗುತ್ತದೆ. ಸ್ಪ್ರೇ ಮಾಡದೇ ಹೋದರೆ ನೂರಕ್ಕೆ ನೂರು ಭಾಗ ಫೈಲ್ಯೂರ್ ಆಗುವ ಸಂಭವ ಉಂಟು. ಆಹಾರ ಸಮಸ್ಯೆಯನ್ನು ಬಿಡಿಸುವ ದೃಷ್ಟಿಯಿಂದ ಇದು ಅತಿ ಮುಖ್ಯವಾದುದು. ಇದರ ಮೇಲೆ ಟ್ಯಾಕ್ಸ್ ಹಾಕುತ್ತಾ ಕೂತುಕೊಂಡರೆ ರೈತರಿಗೆ ಎಷ್ಟರಮಟ್ಟಿಗೆ ಪ್ರಯೋಜನವಾಗುತ್ತದೆ ಎಂದು ಯೋಚನೆ ಮಾಡಬೇಕು ಸಾಧಾರಣವಾಗಿ ಲಕ್ಷಾಂತರ ಜನಗಳ ಮೇಲೆ ಜನರಿಗೆ ಅಗತ್ಯವಾಗಿ ಬೇಕಾಗಿರತಕ್ಕ ವಸ್ತುಗಳ ಮೇಲೆ ಮತ್ತು ರೈತರಿಗೆ ಬೇಕಾಗಿರತಕ್ಕ ಉಪಕರಣಗಳ ಮೇಲೆ ಒಂದೇ ಸಮನಾಗಿ ಟ್ಯಾಕ್ಸನ್ನು ಹಾಕುತ್ತಾ ಹೋಗಿದ್ದೀರಿ. ಬಡವರ ಬಗ್ಗೆ ಉಳಿದುಕೊಳ್ಳುವುದು ತಮ್ಮ ಸವಿ ನುಡಿ ಮಾತ್ರ. ಕಾರ್ಯತಃ ಅವರ ಸೊಂಟ ಅಂತೂ ಉಳಿಯುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳುತ್ತೇನೆ. ರೈತರ ಬಗ್ಗೆ ಅನುಕಂಪ ಇದ್ದರೆ ದೇಶದ ಆಹಾರದ ಪರಿಸ್ಥಿತಿ ಸುಧಾರಿಸಬೇಕಾದರೆ ದಯವಿಟ್ಟು ಈ ಎರಡು ಪರ್ಸೆಂಟ್ ಟ್ಯಾಕ್ಸನ್ನು ವಾಪಸ್ ತೆಗೆದುಕೊಳ್ಳಿ.

ಶ್ರೀ ಎಂ.ವೈ. ಘೋರ್ಪಡೆ.—ತಾವು ಪದೇ ಪದೇ ರೈತರ ಬಗ್ಗೆ ಮಾತಾಡುತ್ತೀರಿ. ಈಗಿನ ಬೆಲೆಗಳು ಏರಿರುವ ಪರಿಸ್ಥಿತಿಯಲ್ಲಿ ರೈತರಿಗೆ ಅನುಕೂಲವಾಗಿದೆ. ಒಟ್ಟಿನಲ್ಲಿ ನೋಡುವುದಾದರೆ ಗ್ರಾಹಕರಿಗೆ ಪೆಟ್ಟು ಆಗಿರಬಹುದು. ಆದರೆ ರೈತನ ಸ್ಥಿತಿ ಕೆಟ್ಟಿದೆ ಎಂದು ಒಪ್ಪಲಿಕ್ಕೆ ಆಗುವುದಿಲ್ಲ. ಈ ಪ್ರೈಸ್ ರೈಸಿನಿಂದ ರೈತರಿಗೆ ಅಷ್ಟೊಂದು ಪೆಟ್ಟು ಆಗಲಿಲ್ಲ. ಬೇರೆ ಜನರಿಗೆ ಆಗಿರಬಹುದು. ರೈತರಿಗೆ ಪ್ರೈಸ್ ರೈಸಿನಿಂದ ಫಾಯಿದೆ ಸಿಕ್ಕುತ್ತಾ ಇದೆ. ಈ ದೃಷ್ಟಿಯಿಂದ ಈಗಿನ ಪರಿಸ್ಥಿತಿಯಲ್ಲಿ ರೈತನ್ನು ಒಂದು ಬೆನ್ನು ಮೂಳೆ ಮುರಿದು ಹೋಗಿ ಬಿಟ್ಟಿದೆ, ರೈತ ಬಹಳ ದುರ್ಬಲವಾಗಿದ್ದಾನೆ ಎನ್ನುವ ಮಾತನ್ನು ಒಪ್ಪುವುದು ಕಷ್ಟವಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ತಾವು ವ್ಯವಸಾಯ ಮಾಡಿದವರಲ್ಲ. ಅವರ ಸ್ಥಿತಿಗತಿಗಳು ತಮಗೆ ಗೊತ್ತಿಲ್ಲ ಎನ್ನುವುದು ತಾವು ಹೇಳುವ ವಾದದಿಂದ ಪುಷ್ಟೀಕರಣವಾಗುತ್ತದೆ. ರೈತ ಏನು ಕೊಂಡುಕೊಳ್ಳುತ್ತಾನೆ ಅದರ ಬಗ್ಗೆ ಒಂದಕ್ಕೆ 4 ರಷ್ಟು ಜಾಸ್ತಿಯಾಗಿದೆ. ಗುದ್ದಲಿ 4 ರೂಪಾಯಿ ಇದ್ದದ್ದು ಇವತ್ತು 15 ರೂಪಾಯಿ ಆಗಿದೆ. ವ್ಯವಸಾಯಕ್ಕೆ ನೀರು ಹೊಡೆಯುವ ಜಿ.ಐ. ಪೈಪು ಮೂರುವರೆ ಇದ್ದದ್ದು ಇವತ್ತು 15 ರೂಪಾಯಿ ಆಗಿದೆ. ರೈತ ಕೊಂಡುಕೊಳ್ಳುವ ಪದಾರ್ಥಗಳ ಬೆಲೆ 3 ಪಟ್ಟು, 4 ಪಟ್ಟು ಜಾಸ್ತಿಯಾಗಿದೆ. ರೈತ ಮಾರತಕ್ಕ ಪದಾರ್ಥಗಳಿಗೆ ಒಂದಕ್ಕೆರಡರಷ್ಟು ಕೂಡ ಜಾಸ್ತಿಯಾಗಿಲ್ಲ. ಒಂದು ಕ್ವಿಂಟಾಲ್ ರಾಗಿ 80—90 ರೂಪಾಯಿ ಇದ್ದದ್ದು ಈಗ 120—130 ರೂಪಾಯಿ ಆಗಿದೆ. ಅಕ್ಕಿ ಒಂದು ಕ್ವಿಂಟಾಲ್‌ಗೆ 120—130 ರೂಪಾಯಿ ಇದ್ದದ್ದು ಇವತ್ತು 200 ರೂಪಾಯಿ ಆಗಿದೆ. ರೈತ ಕೊಂಡುಕೊಳ್ಳತಕ್ಕ ಬಟ್ಟೆ ಗಜ ಒಂದಕ್ಕೆ 1 ರೂಪಾಯಿ, 2 ರೂಪಾಯಿ ಇದ್ದದ್ದು ಇವತ್ತು 5 ರೂಪಾಯಿ, 6 ರೂಪಾಯಿ ಆಗಿದೆ. ರೈತರು ಮಾರತಕ್ಕ ವಸ್ತುಗಳಿಗೆ ಬೆಲೆ ಜಾಸ್ತಿಮಾಡಿ, ಭಾರಿ ಉಪಕಾರ ಮಾಡಿಕೊಟ್ಟಿದ್ದೇವೆ ಎಂದು ಹೇಳುತ್ತೀರಿ, ಇದು ವಂಚನೆಯ ಮಾತು. ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳನ್ನು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ. ಸಾಧಾರಣವಾಗಿ ಪ್ರತಿಯೊಬ್ಬರೂ ಉಪಯೋಗಿಸತಕ್ಕ ಅಡಿಕೆ ಮತ್ತು ಪೇಪರ್ ಮೇಲೆ ಎರಡು ಪರ್ಸೆಂಟ್ ತೆರಿಗೆಯನ್ನು ಹಾಕಿದ್ದೀರಿ. ಇದು ಖಂಡಿತವಾಗಿಯೂ ಒಳ್ಳೆಯದನ್ನು ಮಾಡತಕ್ಕ ವಿಚಾರವಲ್ಲ. ಬೇರೆ ಪದಾರ್ಥಗಳ ಮೇಲೆ ಹಾಕಿರತಕ್ಕ ತೆರಿಗೆಯನ್ನು ಹೇಗೆ ವಾಪಸ್ ತೆಗೆದುಕೊಳ್ಳುತ್ತೀರೋ ಅದೇರೀತಿ ಇದರ ಮೇಲೆ ಹಾಕಿರತಕ್ಕ ತೆರಿಗೆಯನ್ನು ಕೂಡ ವಾಪಸ್ ತೆಗೆದುಕೊಳ್ಳಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ವಾಷಿಂಗ್ ಸೋಪಿನ ಮೇಲೆ 6 ಪರ್ಸೆಂಟ್ ತೆರಿಗೆಯನ್ನು ಹಾಕಿದ್ದೀರಿ. ನಾನು ಚಿಕ್ಕವಯಸ್ಸಿನಲ್ಲಿ ನೋಡಿದ್ದೇನೆ, ಚೌಳು ಮಣ್ಣು ಭೂಮಿಯಲ್ಲಿ ಸಿಕ್ಕುತ್ತದೆ. ಅದನ್ನು ತಂದು ಬಟ್ಟೆ ಒಗೆದುಕೊಳ್ಳತಕ್ಕವರು ಈಗಲೂ ಇದ್ದಾರೆ, ಸೋಪನ್ನು ಅವರು ಉಪಯೋಗಿಸುವುದಿಲ್ಲ. ಕಡಿಮೆ ರೇಟ್‌ನಲ್ಲಿರುವ ಸೋಪನ್ನು ಕೆಲವರು ಬಟ್ಟೆ ಒಗೆಯುವುದಕ್ಕೆ ಕೊಂಡುಕೊಳ್ಳುತ್ತಾರೆ, ಈಗ ಅದರ ಮೇಲೂ ಟ್ಯಾಕ್ಸ್ ಹಾಕಿದ್ದೀರಿ. ಸಮತಾವಾದ ಸರ್ಕಾರ, ಜನತೆಯ ಬಗ್ಗೆ ಅಪಾರವಾದ ಅನುಕಂಪವನ್ನು ಇಟ್ಟುಕೊಂಡಿದ್ದೇವೆ ಎಂದು ಹೇಳಿದ ಮಾತು, ಅದರ ಕಾರ್ಯ ಎಷ್ಟರಮಟ್ಟಿಗೆ ಸಾರ್ಥಕವಾಗಿದೆ ? ಒಂದು ಚೂರಾಗಲೀ ಅದರ ಬಗ್ಗೆ ಕನ್ಸೆಷನ್ ತೋರಿಸುವ ಅನುಕಂಪ ಇದ್ದಿದ್ದರೆ, ಇಂತಹ ಕೆಲಸ ಸರ್ಕಾರ ಮಾಡುತ್ತಾ ಇರಲಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಹಣವಂತರು ಉಪಯೋಗಿಸದೇ ಬಡವರು ಉಪಯೋಗಿಸತಕ್ಕ ಪದಾರ್ಥಗಳು ಯಾವುವು ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಕೆ. ಎಚ್. ಹನುಮೇಗೌಡ.—ಅಶೋಕ ಹೋಟೆಲಿನಲ್ಲಿ ಪಾರ್ಟಿಗಳು ನಡೆಯುತ್ತವೆ. ಅಲ್ಲಿ ಒಂದು ಬಾಟಲಿಗೆ 700,800 ರೂಪಾಯಿ ಆಗುತ್ತದೆಂದು ಕೇಳಿದ್ದೇನೆ. ಅದರ ಮೇಲೆ ಟ್ಯಾಕ್ಸ್ ಹಾಕಿದ್ದೀರಾ ?

ಶ್ರೀ ಕೆ. ಎಚ್. ರಂಗನಾಥ್.—ನೀವು ಏಕೆ ಅಷ್ಟು ದೂರ ಹೋಗುತ್ತೀರಿ ?

ಶ್ರೀ ಕೆ. ಎಚ್. ಹನುಮೇಗೌಡ.—ನನಗೆ ಅವಕಾಶ ಕೊಟ್ಟರೂ ನಾನು ಹೋಗುವುದಿಲ್ಲ.

ಉಪಾಧ್ಯಕ್ಷರು.- ಒಂದೊಂದು ಬಾಟ್ಲಿಗೆ 700,800 ರೂಪಾಯಿ ಆಗುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಗೆ ಗೊತ್ತಾಯಿತು ?

ಶ್ರೀ ಕೆ. ಎಚ್. ಹನುಮೇಗೌಡ.—ಕೆಲಸ ಆಗಬೇಕಾದರೆ ಕರೆದುಕೊಂಡು ಹೋಗುತ್ತಾರೆ. ಕೆಲವು ಸಂದರ್ಭದಲ್ಲಿ ಖರ್ಚುಮಾಡಿದರೂ ಕೆಲಸವಾಗುತ್ತದೆ ಎಂದು ಭರವಸೆ ಇಲ್ಲ. ಕೆಲವರು 2-3 ಪಾರ್ಟಿ ಕೊಟ್ಟರೂ ಕೆಲಸ ಆಗುವುದಿಲ್ಲ. ನಮ್ಮ ಹತ್ತಿರ ಬಂದು ಕಣ್ಣೀರು ಹಾಕುವ ಜನ ಇದ್ದಾರೆ.

ಉಪಾಧ್ಯಕ್ಷರು.—2-3 ಪಾರ್ಟಿ ಬೇಕಾಗುತ್ತದೆ, ಇನ್ನೂ ಹೆಚ್ಚು ಪಾರ್ಟಿ ಬೇಕಾಗುತ್ತದೆ. The Hon. Member must be bit more practical now a days. It is a regular process and the Hon. Member must have considerable knowledge of psychology also.

ಶ್ರೀ ಕೆ. ಎಚ್. ಹನುಮೇಗೌಡ.—ಬಡ ಜನರು ಉಪಯೋಗಿಸುವ ಛತ್ರಿ ಮೇಲೆ ಟ್ಯಾಕ್ಸ್ ಹಾಕಿದ್ದೀರಿ. ಯಾವುದರ ಮೇಲೆ ಟ್ಯಾಕ್ಸ್ ಹಾಕುವುದನ್ನು ಬಿಟ್ಟಿದ್ದೀರಿ ? ಅನುಕೂಲಸ್ಥರು ಉಪಯೋಗಿಸುವ ವಸ್ತುಗಳ ಮೇಲೆ ಒಂದೆರಡು ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೀರಿ. 4 ಎಕರೆ ಜಮೀನು ಮಾರಿದರೂ ಮಂತ್ರಿಗಳ ಮನೆಯಲ್ಲಿರುವ ಕಕ್ಕಸನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. 25 ಎಕರೆ ಹೊಲ ಮಾರಿದರೂ ಬಾತ್ ರೂಂ ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ. ಶ್ರೀಮಂತರಿಗೆ ಮಾಡಬಾರದ್ದು ಮಾಡಿ, ಬಡವರಿಗೆ ಹಂಚಿ, ಬಡವರನ್ನು ಮೇಲಕ್ಕೆ ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿದಿರಿ. ತಮ್ಮ ಕಾಲದಲ್ಲಿ ಶ್ರೀಮಂತರಿಗೆ 4 ರಷ್ಟು ಹೆಚ್ಚು ತಮ್ಮ ಆಶೀರ್ವಾದ, ಪ್ರೋತ್ಸಾಹ ಬೆಂಬಲ ಸಿಕ್ಕಿದೆ. ಬಡವರು ಅನ್ನ ತಿಂಡಿಗೆ ಇಲ್ಲದೆ ಹೊಟ್ಟೆ ಮೇಲೆ ಬಟ್ಟೆ ಹಾಕಿಕೊಂಡು ಜೀವನಮಾಡುತ್ತಿದ್ದಾರೆ.

Mr. DEPUTY SPEAKER.—By this time it is taken for granted that the Hon. Member Sri Hanume Gowda speak only on behalf of the poor people. ಆದುದರಿಂದ ಜನತೆಯ ಸಲುವಾಗಿ ಮುಂದೆ ಹೇಳುವುದು ಬೇಡ.

ಶ್ರೀ ಕೆ. ಎಚ್. ಹನುಮೇಗೌಡ.—ಬಡವರು ಉಪಯೋಗಿಸುವ ವಸ್ತುಗಳ ಮೇಲೆ ತೆರಿಗೆ ಹಾಕಿದರೆ, ಬಡವರಿಗೆ ಹೆಚ್ಚು ಹೊರೆಯಾಗುತ್ತದೆ. ಸರ್ಕಾರಕ್ಕೆ, ಅರ್ಥಸಚಿವರಿಗೆ ಬಡವರ ಮೇಲೆ ಅನುಕಂಪ ಇದ್ದರೆ, ಇದನ್ನು ತೆಗೆಯಲಿ. ಇದರಿಂದ ಬಡ ಜನರ ಇಂಪ್ರೂವ್‌ಮೆಂಟ್ ಆಗುತ್ತದೆ. ಅನುಕೂಲಸ್ಥರು ಉಪಯೋಗಿಸುವ ಭೋಗವಸ್ತುಗಳ ಮೇಲೆ ಟ್ಯಾಕ್ಸ್ ಹಾಕುವುದನ್ನು ಜಾಸ್ತಿ ಮಾಡಿ, ತೀರ ಬಡವರ ಮೇಲೆ ಹಾಕಿರುವ ಟ್ಯಾಕ್ಸನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಪ್ರಾರ್ಥನೆಮಾಡಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

11-30 A.M.

† ಶ್ರೀ ಎಸ್. ವೈ. ಪಾಟೀಲ್ (ಸಿಂಧಗಿ).—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಮಾತನಾಡಿದ್ದನ್ನೇ ಪುನರಾವೃತ್ತಿ ಮಾಡುವುದರಲ್ಲಿ ಅರ್ಥವಿಲ್ಲ. ರಾಜ್ಯವನ್ನು ನಡೆಸಬೇಕಾದರೆ ಹಣ ಬೇಕಾಗುತ್ತದೆ ಅದಕ್ಕೆ ಟ್ಯಾಕ್ಸ್ ಹಾಕುತ್ತಾರೆ. ಟ್ಯಾಕ್ಸ್ ಹಾಕುವ ಸಲುವಾಗಿ ಅರ್ಥಮಂತ್ರಿಗಳು ಇದ್ದಾರೆ. ನಾನು ಅಧ್ಯಕ್ಷರ ಮುಖಾಂತರ ನಮ್ರತೆಯಿಂದ ಪ್ರಾರ್ಥನೆ ಮಾಡುತ್ತಾ ಇದ್ದೇನೆ. ನೇರವಾಗಿ ಮಾಡಲಿಕ್ಕೆ ಬರುವುದಿಲ್ಲ. ಸಾಧಾರಣವಾಗಿ ಈ ಒಂದು ದೃಷ್ಟಿಕೋನ ಬದಲಿ ಆಗಬೇಕು. ಟ್ರೆಜರಿ ಬೆಂಚ್‌ಗೆ ಈಗ ಸರ್ಕಾರ ನಡೆಸತಕ್ಕ ಅವಕಾಶ, ಅನುಕೂಲತೆ ಒದಗಿದೆ. ಜನರು ಓಟನ್ನು ತಿಳಿದು ಹಾಕಿದರೋ, ತಿಳಿಯದೇ ಹಾಕಿದರೋ ಅಂತೂ ಸರ್ಕಾರ ಸ್ಥಾಪನೆ ಮಾಡಲಿಕ್ಕೆ ಅವಕಾಶವಾಗಿದೆ.

ನಮ್ಮ ವಿರೋಧ ಪಕ್ಷದ ಜನರು ಬಹಳ ಉತ್ತಮವಾದಂಥ ಸೂಚನೆಯನ್ನೂ, ಸಲಹೆಗಳನ್ನು ಕೊಟ್ಟರು. ನೀವು ಏನು ಬರೆದುಕೊಳ್ಳುತ್ತೀರೋ, ಏನು ಅರ್ಥ ಮಾಡಿಕೊಂಡು ಮಾಡುತ್ತೀರೋ ಪರಿಣಾಮ ಮಾತ್ರ ಸರಿಯಾಗಿ ಆಗುವುದಿಲ್ಲ ಎನ್ನತಕ್ಕ ಅಭಿಪ್ರಾಯ ನಮ್ಮ ಅನುಭವಕ್ಕೆ ಬಂದಿದೆ. ನೀವು ಪ್ರತ್ಯಕ್ಷವಾಗಿ ಒಕ್ಕಲುತನ ಮಾಡದೇ ಇದ್ದರೂ, ಬಡವರ, ರೈತರ ಕುಟುಂಬದಲ್ಲಿ ಹುಟ್ಟದೇ ಇದ್ದರೂ ಬಡವರ ಕಲ್ಪನೆ ನಿಮಗೆ ಇದ್ದರೆ ಸಾಕು. ದಿವಂಗತ ಜವಾಹರ್‌ಲಾಲ್ ನೆಹರೂರವರು ಅತ್ಯಂತ ಶ್ರೀಮಂತ ಮನೆತನದಲ್ಲಿ ಹುಟ್ಟಿದಂಥವರು, ಅಂಥವರು ಯಾವಾಗಲೂ ಬಡವರ ಬಗ್ಗೆ ಚಿಂತನೆ ಮಾಡುತ್ತಿದ್ದರು. ಗಾಂಧೀಜಿಯವರ ಅನುಯಾಯಿಗಳಾಗಿ ಉತ್ತಮವಾದ ಡ್ರೆಸ್ಸನ್ನು ಹಾಕುವುದನ್ನು ಬಿಟ್ಟು ಸಾದಾ ಡ್ರೆಸ್ಸನ್ನು ಹಾಕಿಕೊಂಡರು. ಯಾವಾಗಲೂ ಬಡವರ ಬಗ್ಗೆ ಅನುಕಂಪವನ್ನು ತೋರಿಸುತ್ತಿದ್ದರು.

ಇವತ್ತು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ, ಇವತ್ತು ಟ್ಯಾಕ್ಸನ್ನು ಹಾಕುವಾಗ ಎರಡು ಭಾಗಗಳಾಗಿ ವಿಂಗಡಿಸಬೇಕು. ಒಂದು ವ್ಯಸನೀಯ ವಸ್ತುಗಳ ಮೇಲೆ ಅಂದರೆ ಭೋಗ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕುವುದು, ಎರಡನೆಯದು ಸಾಮಾನ್ಯ ಜನರು ಉಪಯೋಗಿಸುವಂಥ. ಅತ್ಯಾವಶ್ಯಕವಸ್ತುಗಳ ಮೇಲೆ ಕಡಿಮೆ ತೆರಿಗೆಯನ್ನು ಹಾಕುವುದು. ವ್ಯಸನೀಯ ಪದಾರ್ಥಗಳ ಬಗ್ಗೆ ಹೇಳುವುದಾದರೆ, ಉದಾಹರಣಾರ್ಥವಾಗಿ ಹೇಳುವುದಾದರೆ ಶರಾಯಿ, ಸೇಂಧಿ, ಇವುಗಳಿಂದ ಸರ್ಕಾರಕ್ಕೆ ಉತ್ಪನ್ನ ಬರುತ್ತದೆಂದು ತಿಳಿದುಕೊಂಡಿದ್ದಂಥ ಬ್ರಿಟಿಷರು, ಇಂಥ ಸೇಂದಿ ಸರಾಯಿಗಳಿಗೆ ಲೈಸೆನ್ಸ್ ಕೊಟ್ಟು, ಅದರಿಂದ ಬರತಕ್ಕ ಹಣದಿಂದ ವಿದ್ಯಾಭ್ಯಾಸ ಕೊಡಿಸುತ್ತೇವೆ, ಕಲ್ಯಾಣ ಮಾಡುತ್ತೇವೆಂದು ಹೇಳುತ್ತಿದ್ದರು. ಅದೇ ಮಾದರಿಗೆ ನಿಮ್ಮ

ಪ್ರವೃತ್ತಿಯೂ ಬರುತ್ತಿದೆ. ಇವತ್ತು ನೀವು ಟ್ಯಾಕ್ಸನ್ನು ಹಾಕುವುದಾದರೆ ಸಿಗರೇಟು, ಇಸ್ಪಿರಿಟ್‌ನ ಮೇಲೆ ಗಾಂಜ, ಇಂಥ ಭೋಗ ವಸ್ತುಗಳು ಏನು ಇವೆ ಇಂಥರ ಮೇಲೆ ಹಾಕಿ, ಆದರೆ ಸಾಮಾನ್ಯ ಜನರು ಉಪಯೋಗಿಸುವಂಥ ಅತ್ಯವಶ್ಯ ವಸ್ತುಗಳು ಏನು ಇದೆ ಅವುಗಳ ಮೇಲೆ ಹೆಚ್ಚಿನ ತೆರಿಗೆಯ ಹೊರೆಯನ್ನು ಹಾಕಬಾರದು.

ಇವತ್ತು ಅನೇಕ ಶ್ರೀಮಂತರು ಉಂಡು, ತಿಂದು, ವ್ಯಸನಕರವಾದ ವಸ್ತುಗಳನ್ನು ಕುಡಿದು ಕ್ಯಾನ್ಸರ್, ಮುಂತಾದ ರೋಗ ರುಜಿನಗಳನ್ನು ತಂದುಕೊಂಡು, ಕಷ್ಟಪಡುತ್ತಿದ್ದಾರೆ. ಅದೇರೀತಿ ಮರದ ಕೆಳಗೆ ಕುಳಿತುಕೊಂಡು ನೀರಾವನ್ನು ಕುಡಿಯುತ್ತಾರೆ, ವ್ಯಸನೀಯ ಪದಾರ್ಥಗಳನ್ನು ಕುಡಿಯುತ್ತಾರೆ ಅಂಥವರ ಮೇಲೆ ಮ್ಯಾಗ್ಸಿಮಂ ಎಷ್ಟು ಟ್ಯಾಕ್ಸನ್ನು ಹಾಕುವುದಕ್ಕೆ ಸಾಧ್ಯವೋ ಅಷ್ಟು ಟ್ಯಾಕ್ಸನ್ನು ಹಾಕಿ ಎಂದು ಹೇಳುತ್ತೇನೆ. ಆದರೆ ಬಡವರು ಉಪಯೋಗಿಸುವಂಥ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆಯ ಭಾರವನ್ನು ಹೇರಬೇಡಿ.

ಇವತ್ತು ನಾವು ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀ ಎಚ್. ಡಿ. ದೇವೇಗೌಡರವರು ಹೇಳಿದ್ದನ್ನೇ ಅನುಮೋದನೆ ಮಾಡಿ ಅದೇ ರೀತಿ ಹೇಳಬೇಕು ಎಂದು ಏನೂ ನಾನು ಇಲ್ಲ, ವೈಯುಕ್ತಿಕವಾದ ನಮ್ಮ ಅನುಭವಗಳನ್ನು ಹೇಳಬೇಕಾಗುತ್ತದೆ. ದೊಡ್ಡವರ ಮೇಲೆ ದೊಡ್ಡ ಆರೋಪ ಮಾಡಬೇಕಾಗುತ್ತದೆ, ಸಣ್ಣವರ ಮೇಲೆ ಆರೋಪಗಳು ಇದ್ದರೆ ಮಾಡಬೇಕಾಗುತ್ತದೆ. ಮರ್ಡರ್ ಕೇಸ್‌ಗೆ 302ನೇ ಸೆಕ್ಷನ್ ಆಗುತ್ತದೆಯೇ ವಿನಹಃ 320 ಆಗುವುದಿಲ್ಲ. ನಮ್ಮ ಅರ್ಥ ಮಂತ್ರಿಗಳು ಉತ್ತಮರು, ತಿಳುವಳಿಕೆಯುಳ್ಳಂಥವರು, ಫಾರಿನ್ ರಿಟರ್ನ್ ಆದಂಥವರು, ಅನುಭವ ಪಡೆದಿರ ತಕ್ಕಂಥವರು ನಮ್ಮ ಮುಂದೆ ಬಂದ ಕಾಲಕ್ಕೆ, ಇಂಥವರು ಇವತ್ತು ಐಶಾರಾಮ, ಭೋಗ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಬೇಕಾಗಿತ್ತು. ಬಡ ಜನರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕ ಬಾರದಾಗಿತ್ತು ಎಂದು ಹೇಳುತ್ತೇನೆ. ಇನ್ನು ಈ ಟ್ಯಾಕ್ಸಗಳ ಬಗ್ಗೆ ನಮ್ಮ ಸ್ನೇಹಿತರು ಹೇಳಿದ್ದಾರೆ. ಈ ಬೈಸಿಕಲ್, ಸೇಂಗಾ ಎಣ್ಣೆ, ಕೊಬ್ಬರಿ ಎಣ್ಣೆ, ಇವತ್ತು ಕೆಮಿಕಲ್ ಫರ್ಟಿಲೈಜರ್ಸ್, ಒಕ್ಕಲುತನಕ್ಕೆ ಬೇಕಾದಂಥ ಅಗತ್ಯ ವಸ್ತುಗಳ ಮೇಲೆ ಇವತ್ತು ಹೆಚ್ಚಿನ ತೆರಿಗೆಯನ್ನು ನೀವು ಹಾಕಬಾರದಾಗಿತ್ತು. ಇವತ್ತು ಮಾನ್ಯ ಅರ್ಥ ಮಂತ್ರಿಗಳು, ರೆವಿನ್ಯೂ ಸಚಿವರು ಹೇಳಿವರು ಇವತ್ತು ರೈತರಿಗೆ ಲಾಭವಾಗಿದೆ ಎಂದು, ಆದರೆ ಇಂದು ಆತನ ಉತ್ಪತ್ತಿ ಅನಿಶ್ಚಿತವಾಗಿದೆ.

ಶ್ರೀ ಎಂ. ವೈ. ಘೋರ್ಪಡೆ.—ಕೊಬ್ಬರಿ ಎಣ್ಣೆ, ಸೇಂಗಾ ಎಣ್ಣೆ ಮೇಲೆ ಟ್ಯಾಕ್ಸನ್ನು ಹಾಕಿಲ್ಲ.

ಶ್ರೀ ಎಸ್. ವೈ. ಪಾಟೀಲ್.—ನಾನು ಹೇಳುವುದು ಏನೆಂದರೆ, ಹಾಕಿರುವಂಥ ಟ್ಯಾಕ್ಸನ್ನು ತೆಗೆಯಿರಿ ಎಂದು. ವಜ್ರ ಎಷ್ಟು ಬೆಲೆ ಬಾಳುತ್ತದೆಯೋ ಗೊತ್ತಿಲ್ಲ, ಅದರ ಮೇಲೆ ಎಷ್ಟು ಮ್ಯಾಗ್ಸಿಮಂ ಟ್ಯಾಕ್ಸನ್ನು ಹಾಕುವುದಕ್ಕೆ ಸಾಧ್ಯವಿದೆಯೋ ಅಷ್ಟು ಹಾಕಿ. ಇವತ್ತು ರೈತ ಗಡಿಯಾರವನ್ನು ತೆಗೆದುಕೊಳ್ಳಬೇಕು ಎಂದರೆ ಅದರ ಮೇಲೂ ಟ್ಯಾಕ್ಸನ್ನು ಹಾಕಿದ್ದೀರಿ ಅದೇ ರೀತಿ ಪೆಟ್ರೋಲ್ ಮೇಲೂ ಸಹ ಟ್ಯಾಕ್ಸನ್ನು ಹಾಕಿದ್ದೀರಿ, ಅದರಿಂದ ಇವತ್ತು ಅದರ ಹೆಚ್ಚಿನ ಹೊರೆ ಪ್ರಯಾಣಿಕರ ಮೇಲೆ ಬೀಳುತ್ತದೆ, ವ್ಯಾಪಾರಸ್ಥರ ಮೇಲೆ ಅದು ಹೆಚ್ಚು ಬೀಳುವುದಿಲ್ಲ. ಏತಕ್ಕೆಂದರೆ ಅವರು ಎಲ್ಲಾ ಖರ್ಚು ವೆಚ್ಚಗಳನ್ನೂ ಸಹ ಜನರಿಂದ ವಸೂಲಿ ಮಾಡಿಬಿಡುತ್ತಾರೆ.

ಸಾಮಾನ್ಯ ಜನರಿಗೆ ತುಪ್ಪ ಸಿಕ್ಕದೇ ಇರುವಂಥ ಕಾಲದಲ್ಲಿ ಡಾಲ್ಡದ ಮೇಲೆ ಹೆಚ್ಚಿನ ಟ್ಯಾಕ್ಸನ್ನು ಹಾಕಿದ್ದೀರಿ ಅದನ್ನು ತೆಗೆಯಬೇಕು. ಇವತ್ತು ರೇಡಿಯೋದ ಮೇಲೂ ಹೆಚ್ಚಿನ ತೆರಿಗೆಯನ್ನು ಹಾಕಿದ್ದೀರಿ. ಇವತ್ತು ದೇಶದ ಆಗುಹೋಗುಗಳನ್ನು ತಿಳಿಯಬೇಕಾದರೆ, ದೇಶದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿಯಬೇಕಾದರೆ ರೇಡಿಯೋ ಮೂಲಕ ಕೇಳಬಹುದು, ಎನ್ನುವ ಪ್ರಜ್ಞೆ ಅವರಿಗೆ ಇಲ್ಲ. ಆದುದರಿಂದ ಇದರ ಮೇಲೆ ಹಾಕಿರುವ ಟ್ಯಾಕ್ಸನ್ನು ತೆಗೆಯಬೇಕು. ಕೆಲವು ಮಾನ್ಯ ಸದಸ್ಯರು, ಇಸ್ಪಿರಿಟ್, ಗಾಂಜಾ, ಸಿಗರೇಟ್, ಟಾಡಿ ಮೇಲೆ ಟ್ಯಾಕ್ಸನ್ನು ಹಾಕಬಾರದು ಎಂದು ಹೇಳಿದರು. ಟಾಡಿ ಹಳ್ಳಿಯದೇ ಇರಲಿ, ಪರದೇಶದಿಂದ ಬಂದದ್ದೇ ಇರಲಿ, ದೇಶಿಯ ಲಿಕ್ಕರ್ ಇರಲಿ, ಹೊಸದು ಇನ್ನು ಯಾವುದಾದರೂ ತಯಾರು ಮಾಡಿರಲಿ ಹೆಚ್ಚಿನ ತೆರಿಗೆಯನ್ನು ಹಾಕಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಸೇಂದಿ ಆಗುವುದಕ್ಕೆ ಮುಂಚೆ ಆ ನೀರಾವನ್ನು ಕುಡಿದರೆ ದೇಹಕ್ಕೆ ಬಹಳ ಒಳ್ಳೆಯದು. ಆದುದರಿಂದ ಅದು ನಿಮ್ಮ ಆರೋಗ್ಯಕ್ಕೆ ಬಹಳ ಸಹಕಾರಿಯಾಗಿರುತ್ತದೆ. ನೀವು ಒಂದು ಸಾರಿ ಏತಕ್ಕೆ ಪ್ರಯತ್ನ ಮಾಡಬಾರದು ?

ಶ್ರೀ ಎಸ್. ವೈ. ಪಾಟೀಲ್.—ನೀರಾ ಅಂತ ಯಾರು ಕುಡಿಯುವುದಿಲ್ಲ. ಅವರು ಕುಡಿಯುವ ಹೊತ್ತಿಗೆ ಅದು ಗಾಂಜಾ ಆಗಿರುತ್ತದೆ ಟಾಡಿ ಕುಡಿದಂಥ ಮನುಷ್ಯ ಅವ್ಯವಹಾರದ ರೀತಿಯಲ್ಲಿ ವರ್ತಿಸುತ್ತಾನೆ. ಒಮ್ಮೆ ಕುಡಿದರೆ ಸಾಕು ಆಟೋಮ್ಯಾಟಿಕ್ ಸ್ವಿಚ್ ಇದ್ದಹಾಗೆ, ಮನುಷ್ಯನಲ್ಲಿ ಪ್ರತಿಕ್ರಿಯೆ ಶುರುವಾಗುತ್ತದೆ.

ಒಬ್ಬ ಸದಸ್ಯರು.—ನಿಮಗೆ ಅದರಲ್ಲಿ ಅನುಭವ ಇದೆಯೇ ?

ಶ್ರೀ ಎಸ್ ವೈ. ಪಾಟೀಲ್.—ನಮಗೆ ಅನುಭವ ಇದ್ದರೆ ಮಾತ್ರ ಹೇಳಬೇಕೆಂದು ಇಲ್ಲ. ರಾಮಾಯಣಕಾಲದಲ್ಲಿ, ಬಸವಣ್ಣನವರ ಕಾಲದಲ್ಲಿ ಕಳ್ಳತನ ಆಗಿದೆ ಅಂತ ಹೇಳಿದರೆ ಕಳ್ಳತನಮಾಡಿದ ಅನುಭವ ಇದೆಯೇ ಅಂತ ಕೇಳುವುದಕ್ಕೆ ಆಗುತ್ತದೆಯೇ ? ಸಾಮಾನ್ಯ ಜನರಿಗೋಸ್ಕರ ಉಪ್ಪಿನ ಬೆಲೆ ಜಾಸ್ತಿಯಾದಾಗ ಮಹಾತ್ಮಾ ಗಾಂಧಿಜಿಯವರು ದಂಡಿಯಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಮಾಡಿದ್ದರು. ಇವತ್ತು ಎಣ್ಣೆಯ ಮೇಲೆ ಹಾಕಿರತಕ್ಕಂಥ ಟ್ಯಾಕ್ಸನ್ನು ತೆಗೆಯಬೇಕು. ಇನ್ನು ಸಿಮೆಂಟ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇವತ್ತು ದೊಡ್ಡ ದೊಡ್ಡ ಮನೆಗಳನ್ನು ಕಟ್ಟುವುದಕ್ಕೆ ಉಪಯೋಗಿಸುತ್ತಾರೆ, ಹಾಗೆಯೇ ಸಾಮಾನ್ಯ ಮನುಷ್ಯನೂ ಭಾವಿಗೆ ಉಪಯೋಗಿಸುತ್ತಾನೆ. ಇವತ್ತು ಯಾರು ಮಹಡಿ ಮೇಲೆ ಮಹಡಿಯನ್ನು ಕಟ್ಟುತ್ತಿದ್ದಾರೆ ಅಂಥವರ ಮೇಲೆ ಟ್ಯಾಕ್ಸನ್ನು ಹಾಕಿ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಇನ್ನೊಂದು ಉದಾಹರಣೆ ಹೇಳುವುದಾದರೆ ಮಾನ್ಯ ಅರ್ಥಮಂತ್ರಿಗಳಿಗೆ ಈ ಮಾತು ಹೇಳಿದರೆ ತಿಳಿಯಬಹುದು. ದೊಡ್ಡ ದೊಡ್ಡ ಶ್ರೀಮಂತರಿಗೆ ವಾರ ಟ್ಯಾಕ್ಸ್ ಹಾಕುವುದಕ್ಕೆ ಯೋಚನೆ ಮಾಡಿ. ಹಾಗಾದರೆ ರಾಜ್ಯದ ಬೊಕ್ಕಸ ತುಂಬಬಹುದು. ಆ ರೀತಿ ದೊಡ್ಡ ದೊಡ್ಡವರಿಗೆ ಟ್ಯಾಕ್ಸ್ ಹಾಕಬೇಕೇ ಹೊರತು ಸಾಮಾನ್ಯ ಬಡಜನತೆ ಮೇಲೆ ಟ್ಯಾಕ್ಸ್ ಹಾಕಬಾರದು ಎಂದು ಹೇಳುತ್ತೇನೆ.

ಇನ್ನು ನಾನು ಉಳಿದಿದ್ದನ್ನು ಹೆಚ್ಚು ಟೀಕೆ ಮಾಡುವುದಿಲ್ಲ. ಒಂದು ಮಾತು ಮಾತ್ರ ಹೇಳುತ್ತೇನೆ. ಸತ್ಯವೇ ದೇವರು, ಸತ್ಯವೇ ತಂದೆ ತಾಯಿ, ಸತ್ಯವೇ ಬಂಧುಬಳಗ ಎನ್ನುವಂತೆ ಎಲ್ಲವೂ ನಿಮ್ಮ ಕೈಯ್ಯಲ್ಲೇ ಇದೆ. ನೀವೇ ಸತ್ಯ ದೇವರು ಇದ್ದಹಾಗೆ, ನೀವೇ ಎಲ್ಲರಿಗೂ ತಂದೆತಾಯಿ ಇದ್ದ ಹಾಗೆ. ಏತಕ್ಕೆಂದರೆ ಯಾವುದಕ್ಕಾದರೂ ಹಣಕಾಸಿನ ಮಂತ್ರಿಗಳೇ ಬಡ್ಜೆಟ್ ಸ್ಯಾಂಕ್ಷನ್ ಮಾಡಿ ಕೊಡಬೇಕು. ಎಕ್ಸಿಕ್ಯೂಟ್ ಮಾಡುವರು ಬೇರೆಯವರಾದರೂ ಕೂಡ, ಅಕೌಂಟೆಂಟ್ ಜನರಲ್ ರವರು ನಿಮಗೆ ಸಹಾಯ ಮಾಡಿದರೂ ಕೂಡ ಇದಕ್ಕೆ ಮುಖ್ಯವಾಗಿ ಬೇಕಾಗಿರುವವರು ನೀವೇ. ಆದುದರಿಂದ ನಾನು ಹೇಳುತ್ತೇನೆ ದಯವಿಟ್ಟು ಬಡವರ ಮೇಲೆ ಟ್ಯಾಕ್ಸ್ ಹಾಕಬೇಡಿ. ಈಗ ತಾವು ಬಡವರ ಮೇಲೆ ಏನು ಟ್ಯಾಕ್ಸ್ ತೆಗೆದುಕೊಂಡು ಬಂದಿದ್ದೀರೋ ಅದಕ್ಕೆ ಒಂದು ಅಮೆಂಡ್‌ಮೆಂಟ್ ಬಿಲ್ಲನ್ನಾದರೂ ತಂದು ಅದನ್ನು ತಪ್ಪಿಸಿ. ಬೇಕಾದರೆ ಕೊಡುವ ಶಕ್ತಿ ಇರುವವರ ಮೇಲೆ, ಹಣವಂತರ ಮೇಲೆ ಜಾಸ್ತಿ ಟ್ಯಾಕ್ಸ್ ಹಾಕಲಿ ಬೇಡ ಅನ್ನುವುದಿಲ್ಲ. ಬಡರೈತರು ಉಪಯೋಗಿಸತಕ್ಕಂಥ ಕ್ರಿಮಿನಾಶಕ ಔಷಧಿಗಳು ಏನು ಇವೆ, ಮತ್ತು ಗೊಬ್ಬರ ಇತ್ಯಾದಿಗಳು ಏನು ಇವೆ ಇದರ ಮೇಲೆ ಟ್ಯಾಕ್ಸ್ ಹಾಕಬೇಡಿ. ಮಾನ್ಯ ಹಣಕಾಸಿನ ಮಂತ್ರಿಗಳು 3-4 ಸಲದಿಂದಲೂ ಈ ಅಸೆಂಬ್ಲಿಯಲ್ಲಿದ್ದಾರೆ, ಜತ್ತಿಯವರ ಕಾಲದಿಂದಲೂ ಬಂದಂಥಾವರು, ಚೆನ್ನಾಗಿ ತಿಳಿದಂಥಾವರು ಮತ್ತು ಅವರು ಅರ್ಥ ಶಾಸ್ತ್ರವನ್ನು ಚೆನ್ನಾಗಿ ತಿಳಿದಂಥಾವರು. ಆ ಬಗ್ಗೆ ಹೆಚ್ಚು ವ್ಯಾಖ್ಯಾನಗಳನ್ನು ಓದಿದ್ದಾರೆ. ಆದುದರಿಂದ ನೀವು ಆ ಜವಾಬ್ದಾರಿ ಮೇಲೆ ಇರತಕ್ಕಂಥ ಶಕ್ತಿ ಇದೆ. ಆದುದರಿಂದ ನಾನು ಈ ಮಾತನ್ನು ಹೇಳುತ್ತೇನೆ. ಬಡವರಿಗೆ ಮತ್ತು ರೈತರಿಗೆ ಉಪಯೋಗವಾಗತಕ್ಕಂಥ ವಸ್ತುಗಳ ಮೇಲೆ ತೆರಿಗೆಗಳನ್ನು ಹಾಕಬೇಡಿ ಎಂದು. ವನಸ್ಪತಿ, ಡಾಲ್ಡಾ, ಕೆರೋಸಿನಾಯಿಲ್, ಕಾಫಿ, ಟೀ ಇತ್ಯಾದಿ ವಸ್ತುಗಳು ಏನೇನು ಇವೆ ಅದಕ್ಕೆಲ್ಲಾ ತೆರಿಗೆಗಳನ್ನು ಹಾಕಬೇಡಿ ಎಂದು ಮತ್ತೊಮ್ಮೆ ಹೇಳುತ್ತೇನೆ. ಬೇಕಾದರೆ ಲಿಕ್ಕರ್‌ಗೆ ಮ್ಯಾಕ್ಸಿಮಮ್‌ನಲ್ಲಿ ಮ್ಯಾಕ್ಸಿಮಮ್ ಎಷ್ಟು ಇದೆ ಆ ತೆರಿಗೆ ಹಾಕಿ. ಎಲ್ಲಿ ಯಾರಿಗೆ ಕೊಡುವುದಕ್ಕೆ ಶಕ್ತಿ ಇದೆಯೋ ಅಂಥಾವರ ಮೇಲೆ ಇನ್ನೂ ಹೆಚ್ಚು ತೆರಿಗೆ ಹಾಕಿ, ಯಾರಿಗೆ ಕೊಡುವುದಕ್ಕೆ ಶಕ್ತಿ ಇಲ್ಲವೋ ಅವರಿಗೆ ಈಗ ಹಾಕಿರತಕ್ಕಂಥ ಟ್ಯಾಕ್ಸನ್ನು ತೆಗೆಯಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಈ ಚರ್ಚೆಯಲ್ಲಿ ಹಲವಾರು ಸದಸ್ಯರು ಭಾಗವಹಿಸಿದಾಗ ಈ ಸೇಲ್ಸ್ ಟ್ಯಾಕ್ಸ್ ಹಿನ್ನೆಲೆಯಲ್ಲಿ ಇರತಕ್ಕಂಥ ವಿಚಾರ ಏನು ? ಯಾವ ಒಂದು ಕ್ರೈಟೀರಿಯಾ ಮೇಲೆ ಈ ಟ್ಯಾಕ್ಸನ್ನು ಹಾಕಿದ್ದೀರಿ ಎಂದು ಕೇಳಿದರು. ಆ ಬಗ್ಗೆ ನಾನು ಸ್ವಲ್ಪ ಮಟ್ಟಿಗೆ ಪ್ರಸ್ತಾಪ ಮಾಡುತ್ತೇನೆ.

ಮೊದಲನೆಯದಾಗಿ ಹೇಳುವುದಾದರೆ ಈ ಟ್ಯಾಕ್ಸನ್ನು ಹಾಕುವಾಗ ಸಾಕಷ್ಟು ಯೋಚನೆ ಮಾಡಿ ಎಲ್ಲೆಲ್ಲಿ ಟ್ಯಾಕ್ಸ್ ಕೊಡುವ ಶಕ್ತಿ ಇದೆಯೋ ಅದನ್ನು ಸರಿಯಾಗಿ ಗಮನಿಸಿ ಒಂದು ಶಾಸ್ತ್ರೀಯವಾದ ರೀತಿಯಲ್ಲಿ ಟ್ಯಾಕ್ಸನ್ನು ಹಾಕಿದ್ದೇವೆ ಇದನ್ನು ಕಣ್ಣುಮುಚ್ಚಿಕೊಂಡು ಮಾಡುವಂಥ ಕೆಲಸವಲ್ಲ. ಈಗಾಗಲೇ ನಾನು ಬಡ್ಜೆಟ್ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಯಾರಿಗೆ ಟ್ಯಾಕ್ಸ್ ಕೊಡುವುದಕ್ಕೆ ಶಕ್ತಿ ಇದೆಯೋ ಅಂಥಾವರ ಮೇಲೆ ಈ ಟ್ಯಾಕ್ಸ್ ಬೀಳುತ್ತದೆ. ಬಡವರ ಮೇಲೆ ಟ್ಯಾಕ್ಸ್ ಕೊಡುವ ಶಕ್ತಿ ಇಲ್ಲ ಎಂದು ಅಂಥಾವರ ಮೇಲೆ ಟ್ಯಾಕ್ಸ್ ಹಾಕಿಲ್ಲ. ಇದು ಮುಖ್ಯವಾದ ವಿಚಾರ. ಈ ಬಗ್ಗೆ ಸಾಕಷ್ಟು ಉದಾಹರಣೆಗಳನ್ನು ಕೊಡುತ್ತೇನೆ. 15 ಪರ್ಸೆಂಟ್ ಟ್ಯಾಕ್ಸ್ ಹಾಕಿರತಕ್ಕಂಥಾ ವಸ್ತುಗಳು ಎಲ್ಲವೂ ಶ್ರೀಮಂತರುಗಳು ಉಪಯೋಗ ಮಾಡುವಂಥ ವಸ್ತುಗಳು. ಅವು ಯಾವುವೆಂದರೆ typewrit rs, tabulating machines, gramaphones, motor vehicles, etc.

In respect of cigars, cigarettes cases, lighters and holders of cigars and cigarettes, the tax has been increased from 12 percent to 15 percent. ಈ ರೀತಿ ಇರುವುದರಿಂದ ಪ್ರತಿಯೊಂದು ಐಟಂನ್ನೂ ಕೂಡ ಪ್ರಸ್ತಾಪ ಮಾಡಬೇಕಾದ ಅವಶ್ಯಕತೆ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಕೆಲವು ಆರ್ಟಿಕಲ್ಸ್ ಬಗ್ಗೆ ಈ ಚರ್ಚೆಯಲ್ಲಿ ಅದರ ವಿಷಯ ಬಂದಿರುವುದರಿಂದ ಆ ಬಗ್ಗೆ ಮಾತ್ರ ಅಂಕಿ ಅಂಶಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದಕ್ಕೆ ಮುಂಚೆ ಶ್ರೀಮಾನ್ ಕೆ. ಎಚ್. ಹನುಮೇಗೌಡರು ರೈತರ ಬಗ್ಗೆ ಏನು ಭಾಷಣ ಮಾಡಿದರು ಆ ಬಗ್ಗೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಈವೊತ್ತು ರಿಲೇಟೀವ್ ಪ್ರೈಸ್ ಲೆವಲ್ ತೆಗೆದುಕೊಂಡರೆ 20 ವರ್ಷದ ಹಿಂದೆ ಯಾವ ಒಂದು ಪರಿಸ್ಥಿತಿ ಇತ್ತು ಅದನ್ನು ತೆಗೆದುಕೊಳ್ಳಿ ವ್ಯವಸಾಯದಲ್ಲಿ ಪದಾರ್ಥಗಳನ್ನು ಉತ್ಪಾದನೆ ಮಾಡುವ ಪರಿಸ್ಥಿತಿ ಹಿಂದೆ ಏನು ಇತ್ತು, ಈವೊತ್ತು ಯಾವ ಪರಿಸ್ಥಿತಿ ಇದೆ ನೋಡಿ. ಅವೊತ್ತಿನ ರಿಲೇಟೀವ್ ಪ್ರೈಸಸ್ ಏನು ಇದೆ ನೋಡಿ. ಈವೊತ್ತಿನ ಬೆಲೆ ಏರಿಕೆ ನೋಡಿದರೆ ಎಷ್ಟರಮಟ್ಟಿಗೆ ಈ ವ್ಯವಸಾಯದಲ್ಲಿ ಸುಧಾರಣೆ ಆಗಿದೆ ಎನ್ನುವುದು ಗೊತ್ತಾಗುತ್ತದೆ. ಈ ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ.

ಇನ್ನು ಮಾನ್ಯ ಎಂ. ಎಸ್. ಕೃಷ್ಣನ್‌ಅವರು ಈ ಟ್ಯಾಕ್ಸ್ ಬಗ್ಗೆ ಕೆಲವು ಮೂಲಭೂತವಾದಂಥ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳುತ್ತಾರೆ, ಅಗ್ರಿಕಲ್‌ಚರಲ್ ಸೆಕ್ಟರ್‌ನಲ್ಲಿ ಸಾಕಷ್ಟು ಟ್ಯಾಕ್ಸಬಲ್ ಕೈಪ್ಯಾಸಿಟಿ ಇದ್ದರೂ ಕೂಡ ಶ್ರೀಮಂತರಿಗೆ ಹೆದರಿಕೊಂಡು ನೀವು ಟ್ಯಾಕ್ಸ್ ಹಾಕುತ್ತಾ ಇಲ್ಲ ಎಂದು ಹೇಳಿದ್ದಾರೆ. ಅವರು ಹೇಳಿರುವುದು ಅಷ್ಟೊಂದು ಸರಿಯಾದುದಲ್ಲ ಎಂದು ಹೇಳುತ್ತೇನೆ. ಏತಕ್ಕೆಂದರೆ ರಾಜ್ ಕಮಿಟಿಯವರು ಅಗ್ರಿಕಲ್ಚರಲ್ ಸೆಕ್ಟಾರ್‌ನಲ್ಲಿ ಏನಾದರೂ ಸರಿಯಾಗಿ ಟ್ಯಾಕ್ಸ್ ಹಾಕಿದರೆ ಸುಮಾರು ನಮ್ಮ ರಾಷ್ಟ್ರದಲ್ಲಿ 200 ಕೋಟಿ ರೂಪಾಯಿಯಾದರೂ ಬರಬೇಕು ಎಂದು ಹೇಳುತ್ತಾರೆ. ಇಡೀ ರಾಷ್ಟ್ರದ ಪಾಪ್ಯುಲೇಷನ್‌ಗೆ ನಮ್ಮ ಕರ್ನಾಟಕದ ಪಾಪ್ಯುಲೇಷನ್ ಹೋಲಿಸಿದರೆ ನಮ್ಮದು 5 ಪರ್ಸೆಂಟ್ ಇದೆ, ಅವರ ಲೆಕ್ಕಾಚಾರದ ಪ್ರಕಾರ ನಮಗೆ 8–10 ಕೋಟಿ ರೂಪಾಯಿ ಈ ಅಗ್ರಿಕಲ್ಚರಲ್ ಸೆಕ್ಟಾರ್‌ನಿಂದ ಬರಬೇಕು. ಈ ಮಾತು ಹೇಳಿದರೆ ಮಾನ್ಯ ಕೆ. ಎಚ್. ಹನುಮೇಗೌಡರಿಗೆ ಸಂತೋಷವಾಗಬಹುದು. ಈಗ ಅಗ್ರಿಕಲ್‌ಚರಲ್ ಸೆಕ್ಟಾರ್‌ಮೇಲೆ ಎಷ್ಟೋ ಟ್ಯಾಕ್ಸ್‌ಹಾಕಿದ್ದೇವೆ.

Sri H. D. DEVE GOWDA.—Why do you take Raj Committee report as a Bible ?

Sri M. Y. GHORPADE.—I am only trying to say that agriculture sector is not so much taxed as people imagine. ಈ 8–10 ಕೋಟಿ ರೂಪಾಯಿನಲ್ಲಿ ಈಗಾಗಲೇ 4-5 ಕೋಟಿ ರೂಪಾಯಿಯಷ್ಟು ಲ್ಯಾಂಡ್ ರೆವಿನ್ಯೂನಿಂದ ಬರುತ್ತಾ ಇದೆ ಮತ್ತು ಇನ್ನು 1-2 ಕೋಟಿ ರೂಪಾಯಿಯಷ್ಟು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್‌ನಿಂದ ಬರುತ್ತಾ ಇದೆ. ಹೀಗೆ ಒಟ್ಟು 7-8 ಕೋಟಿ ರೂಪಾಯಿಯಷ್ಟು ಹಣ ಈ ಅಗ್ರಿಕಲ್‌ಚರಲ್ ಸೆಕ್ಟಾರ್‌ನಿಂದ ಸಾಕಷ್ಟು ಪಡೆಯುತ್ತಾ ಇದ್ದೇವೆ. ಆದ ಕಾರಣ ಈ ಅಗ್ರಿಕಲ್‌ಚರಲ್ ಸೆಕ್ಟಾರ್ ಮೇಲೆ ಕೋಟ್ಯಾಂತರ ರೂಪಾಯಿ ಟ್ಯಾಕ್ಸ್ ಹಾಕುವುದಕ್ಕೆ ಸ್ಕೋಪ್ ಇದೆ ಎಂದು ಹೇಳತಕ್ಕಂಥ ವಿಚಾರ ಅಷ್ಟೊಂದು ಸರಿಯಾದುದಲ್ಲ. ಆದರೆ ಸ್ಕೋಪ್ ಇಲ್ಲ ಎಂತಲ್ಲ, ಸ್ವಲ್ಪಮಟ್ಟಿಗೆ ಇದೆ, ಆದರೆ ತಾವು ತಿಳಿದುಕೊಂಡಷ್ಟು ಇಲ್ಲ ಎಂದು ಹೇಳುತ್ತೇನೆ.

(SRI M. Y. GHORPADE)

ಈಗ ಇನ್ನೊಂದು ರೀತಿಯಿಂದ ಅಗ್ರಿಕಲ್ಚರ್ ಸೆಕ್ಟಾರ್ ಮೇಲೆ ನಾವು ನೇರವಾಗಿ ಟ್ಯಾಕ್ಸ್ ಹಾಕುತ್ತೇವೆಂದು ಅವರು ಹೇಳಿದರು. ಈ ವಾಟರ್ ರೇಟನ್ನು ಜಾಸ್ತಿ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆಂದೂ ಅವರು ಹೇಳಿದರು. ಅಗ್ರಿಕಲ್ಚರ್ ಕಮಾಡಿಟೀಸ್ ಮೇಲೆ, ಯಾವ ಕಮಾಡಿಟೀಸ್ ಮೇಲೆ ಟ್ಯಾಕ್ಸ್ ಹಾಕಿದರೆ ರೈತರಿಗೆ ಅನಾನುಕೂಲವಾಗುವುದಿಲ್ಲ ಎಂದು ನೋಡಿಕೊಂಡು ಅಂಥ ಕಡೆ ಟ್ಯಾಕ್ಸ್ ಹಾಕಿದರೆ, ಅಗ್ರಿಕಲ್ಚರ್ ಸೆಕ್ಟಾರಿಗೆ ಟ್ಯಾಕ್ಸ್ ಮಾಡಿದಂತಾಗುತ್ತದೆಯೇ ? ಇದೇ ಉದ್ದೇಶದಿಂದ ಕಾಟನ್ ಮೇಲೆ ನಾವು ಟ್ಯಾಕ್ಸ್ ಹಾಕಿದ್ದೇವೆ. ಗ್ರೌಂಡ್‌ನಟ್ ಮೇಲಿನ ಟ್ಯಾಕ್ಸ್ ಎರಡು ಪರ್ಸೆಂಟ್ ಇದ್ದುದನ್ನು ಮೂರುಪರ್ಸೆಂಟ್‌ಗೆ ಹೆಚ್ಚಿಸಿದ್ದೇವೆ. ಇದರಿಂದ 40 ಲಕ್ಷ ರೂಪಾಯಿಗಳ ಆದಾಯ ಸರ್ಕಾರಕ್ಕೆ ಬರುತ್ತದೆ. ಆದ್ದರಿಂದ ಇದನ್ನು ಒಳ್ಳೆಯ ಟ್ಯಾಕ್ಸ್ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ 6 ಲಕ್ಷ ಟನ್ ಗ್ರೌಂಡ್‌ನೆಟ್ ಉತ್ಪತ್ತಿಯಾಗುತ್ತದೆ. ಎಂಟು ಲಕ್ಷ ಹೆಕ್ಟೇರ್ ಎಕರೆ ಏರಿಯಾದಲ್ಲಿ ಗ್ರೌಂಡ್‌ನಟ್‌ನ್ನು ಬೆಳೆಯುತ್ತಿದ್ದಾರೆ. ಇದರ ಮೇಲೆ ಗ್ರೌಂಡ್‌ನಟ್ ಪ್ರೈಸ್ ಸಹ ಜಾಸ್ತಿಯಾಗುತ್ತಿದೆ. ಜನವರಿ 1973ರಲ್ಲಿ ಒಂದು ಕ್ವಿಂಟಾಲ್‌ಗೆ 210 ರೂಪಾಯಿ ಇದ್ದುದು, ಜನವರಿ 1974ರಲ್ಲ 291 ರೂಪಾಯಿ ಆಗಿದೆ. ಈ ಪ್ರೈಸಸ್ ಏನು ಇದೆ, ಇದು ಸಪ್ಲೈ ಮತ್ತು ಡಿಮ್ಯಾಂಡನ್ನು ಅವಲಂಬಿಸಿದೆ. ಅದೇ ರೀತಿ ಕೊಬ್ಬರಿ ಮತ್ತು ಅಡಿಕೆ ಇದರಿಂದ ಸ್ವಲ್ಪ ಜಾಸ್ತಿ ಟ್ಯಾಕ್ಸ್ ಬರುವುದಾದರೂ ಇದರಿಂದ ರೈತರಿಗೆ ಅಷ್ಟೊಂದು ತೊಂದರೆಯಾಗುವುದಿಲ್ಲ. ಯಾರೂ ಸಹ ನಮಗೆ ತೊಂದರೆಯಾಗುತ್ತದೆಂದು ಹೇಳಲಿಲ್ಲ. ಆದರೆ ನಾವು ಗ್ರೌಂಡ್‌ನಟ್ ಎಣ್ಣೆಯ ಮೇಲೆ ಟ್ಯಾಕ್ಸನ್ನು ಹಾಕಲಿಲ್ಲ. ಇದರ ಮೇಲೆ ಎರಡು ಪರ್ಸೆಂಟ್ ಟ್ಯಾಕ್ಸ್ ಏನು ಇದೆ, ಈಗಲೂ ಅಷ್ಟೇ ಇದೆ. ಬೇರೆ ರಾಜ್ಯಗಳಿಗೆ ಇದನ್ನು ಹೋಲಿಸಿದರೆ, ಇದರ ಮೇಲೆ ಮದ್ರಾಸ್‌ನಲ್ಲಿ ಮೂರೂವರೆ ಪರ್ಸೆಂಟ್ ಟ್ಯಾಕ್ಸ್ ಇದೆ, ಆಂಧ್ರದಲ್ಲಿ ಐದೂವರೆ ಪರ್ಸೆಂಟ್ ಟ್ಯಾಕ್ಸ್ ಇದೆ, ಕೇರಳದಲ್ಲಿ ಎರಡೂವರೆ ಪರ್ಸೆಂಟ್ ಟ್ಯಾಕ್ಸ್ ಇದೆ, ಆದರೆ ನಮ್ಮ ರಾಜ್ಯದಲ್ಲಿ ಗ್ರೌಂಡ್‌ನಟ್ ಆಯಿಲ್ ಮೇಲೆ ಎರಡು ಪರ್ಸೆಂಟ್ ಟ್ಯಾಕ್ಸ್ ಇದೆ. ಇದನ್ನು ನಾವು ಜಾಸ್ತಿ ಮಾಡಿಲ್ಲ. ಅದೇ ರೀತಿ ಕಾಟನ್ ಮೇಲೆ, ಎರಡು ಪರ್ಸೆಂಟ್ ಟ್ಯಾಕ್ಸ್ ಇದ್ದುದನ್ನು ಮೂರು ಪರ್ಸೆಂಟ್‌ಗೆ ಜಾಸ್ತಿ ಮಾಡಿದ್ದೇವೆ. ಒಂದು ಪರ್ಸೆಂಟ್ ಹೆಚ್ಚು ಟ್ಯಾಕ್ಸ್ ಮಾಡಿರುವುದರಿಂದ 20 ಲಕ್ಷ ರೂಪಾಯಿಗಳು ಸರ್ಕಾರಕ್ಕೆ ಬರುತ್ತದೆ. ನಮ್ಮ ರಾಜ್ಯದಲ್ಲಿ ಆರು ಲಕ್ಷ ಕಾಟನ್ ಬೇಲ್ಸ್ ಉತ್ಪತ್ತಿಯಾಗುತ್ತಿದೆ. ಕಾಟನ್ ಪ್ರೈಸಸ್ ಸಹ ಜಾಸ್ತಿಯಾಗುತ್ತಿದೆ. ಕಾಟನ್ ಅನ್‌ಜಿನ್ಡ್ 230 ರೂಪಾಯಿ ಇದ್ದುದು 325 ರೂಪಾಯಿ ಆಗಿದೆ. ಜಿನ್ಡ್ ಕಾಟನ್ 500 ರೂಪಾಯಿ ಇದ್ದುದು 780 ರೂಪಾಯಿಗಳವರೆಗೆ ಜಾಸ್ತಿಯಾಗಿದೆ. ಇದರಿಂದ ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮವಾಗಿ, ಪದಾರ್ಥಗಳ ಬೆಲೆಗಳು ಜಾಸ್ತಿಯಾಗುತ್ತಾ ಇರುವಾಗ ನಾವು ಏನಾದರೂ ಒಂದು ಪರ್ಸೆಂಟ್ ಟ್ಯಾಕ್ಸ್‌ಅನ್ನು ಜಾಸ್ತಿ ಮಾಡಿ, ನೆರೆ ರಾಜ್ಯಗಳಲ್ಲಿರತಕ್ಕ ಲೆವಲ್‌ಗೆ ನಮ್ಮ ರಾಜ್ಯದ ಟ್ಯಾಕ್ಸ್ ಲೆವಲ್‌ಅನ್ನು ತಂದರೆ, ಅವರಿಂದ ಸಾಕಷ್ಟು ಸರ್ಕಾರಕ್ಕೆ ಆದಾಯ ಬರುವುದಾದರೆ, ಅದು ಶಾಸ್ತ್ರೀಯವಾಗಿದ್ದರೆ, ಅಂಥ ಟ್ಯಾಕ್ಸ್‌ನಿಂದ ಯಾರಿಗೂ ಹೆಚ್ಚಿನ ಭಾರ ಬೀಳುವುದಿಲ್ಲ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. It is at the last sale point. It is a very effective tax at a proper place. The little increase in taxation will not be felt very much by anybody. But such increase fetches income to the Government. The criteria for tax is to minimise income with minimun effect on the production and the difficulty on a man who cannot afford to pay the tax. This is the principle underlying taxation.

ಶ್ರೀ ಕಾಗೋಡು ತಿಮ್ಮಪ್ಪ.—ಹತ್ತಿ ಮೇಲೆ, ಎರಡು ಪರ್ಸೆಂಟ್ ಟ್ಯಾಕ್ಸ್ ಇದ್ದರೆ, ಫಿನಿಷ ಗೂಡ್ಸ್ ಮೇಲೆ, ಸೆಲ್ಲಿಂಗ್‌ಪ್ರೈಸ್ ಎಷ್ಟು ಏರುತ್ತದೆ ? ಇದು ಕಡಿಮೆಯಾಗುತ್ತದೆಯೇ ?

SRI M. Y. GHORPADE.—I can only say this is negligible. It is significant from the income point of view of the State especially when the prices are soaring. If I don't even mop up this much then it is not scientific. Taxes on 'copra' and 'arecanut' is reasonable. I know that the people in the trade never feel this increase. ಈಗ ನೀವು ಸಿಮೆಂಟ್ ತೆಗೆದುಕೊಳ್ಳಿ, ಫರ್ಟಿಲೈಸರ್ಸ್ ತೆಗೆದುಕೊಳ್ಳಿ, ಇನ್‌ಸೆಕ್ಟಿಸೈಡ್ಸ್ ತೆಗೆದುಕೊಳ್ಳಿ, ಇವುಗಳ ಮೇಲೆ

ಅಷ್ಟೊಂದು ಟ್ಯಾಕ್ಸನ್ನು ನಾವು ಹಾಕಿಲ್ಲ. ಬೇರೆ ರಾಜ್ಯಗಳಿಗಿಂತ ಇದು ಬಹಳ ಕಡಿಮೆ ಇತ್ತು, ಇದನ್ನು ಈಗ ನಾವು ಸರಿಪಡಿಸಿದ್ದೇವೆ. ಈಗ ಸಿಮೆಂಟ್ ಅಭಾವ ಇರುವಾಗ, ಫರ್ಟಿಲೈಸರ್ಸ್ ಅಭಾವ ಇರುವಾಗ, ಇನ್‌ಸೆಕ್ಟಿಸೈಡ್ಸ್ ಅಭಾವ ಇರುವಾಗ ನಾವು ಸ್ವಲ್ಪ ಟ್ಯಾಕ್ಸ್ ಹಾಕುವುದರಿಂದ, ಬೆಳೆಗಳ ಮೇಲೆ ಇದು ಅಷ್ಟೊಂದು ಪರಿಣಾಮವಾಗುವುದಿಲ್ಲ. ಮಾನ್ಯ ಹನುಮೇಗೌಡರು, ಇದು ಚಿಕ್ಕ ಅಂಶ, ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳಿದರು.

ಶ್ರೀ ಕೆ. ಎಚ್. ಹನುಮೇಗೌಡ.—ಚಿಕ್ಕ ಅಂಶವೇ ದೊಡ್ಡದಾಗಿ ಹೋಗಿ ನಿಮ್ಮ ತಲೆಗೆ ಏರುತ್ತದೆ ಎಂದು ಹೇಳುತ್ತೇನೆ. ಬೆಲೆ ಏರಿಕೆಗೆ ಒಂದು ಕಡೆ ಚಳುವಳಿ ನಡೆಯಬೇಕಾದರೆ, ಟ್ಯಾಕ್ಸ್ ಹಾಕುವುದರಿಂದ ಯಾವರೀತಿಯ ಪರಿಹಾರ ಮಾಡಿದಂತಾಗುತ್ತದೆ?

ಶ್ರೀ ಎಂ. ವೈ. ಘೋರ್ಪಡೆ.—ಇನ್ನೊಂದು ವಿಚಾರ, ಲಕ್ಷುರಿ ಐಟಂಗಳ ಮೇಲೆ ವಿಪರೀತ ಟ್ಯಾಕ್ಸ್ ಹಾಕಿದರೆ ಹೆಚ್ಚು ಆದಾಯ ಬರುತ್ತದೆ ಎನ್ನುವ ಅಭಿಪ್ರಾಯ ಏನು ಇದೆ ಅದು ಸರಿಯಲ್ಲ. ಆದಾಯವನ್ನು ಏನೋ ಹೆಚ್ಚು ಮಾಡಲಿಕ್ಕೆ ಅವಕಾಶ ಇದೆ ಆದರೆ 20-20 ಪರ್ಸೆಂಟ್ ಟ್ಯಾಕ್ಸನ್ನು ಲಕ್ಷ್ಯುರಿ ಐಟಂಗಳ ಮೇಲೆ ಹಾಕದರೆ ಆದಾಯ ಜಾಸ್ತಿಯಾಗುತ್ತದೆ ಎನ್ನುವ ವಿಚಾರ ಸರಿಯಲ್ಲ. ಮಾನ್ಯಸದಸ್ಯರಾದ ಕೃಷ್ಣ ಅವರು ಮರ್ಕ್ಯುರಿ ವಿಚಾರವಾಗಿ ಹೇಳಿದರು. ಈ ಮರ್ಕ್ಯುರಿಯ ಮೇಲೆ ಟ್ಯಾಕ್ಸ್ ಹಾಕುವುದರಿಂದ ನಮಗೆ ಎಷ್ಟು ಆದಾಯ ಬರುತ್ತದೆ? ಸುಮಾರು 10 ಸಾವಿರ ರೂಪಾಯಿಗಳಷ್ಟು ಬರಬಹುದು. ಇದರಮೇಲೆ ಹೆಚ್ಚು ಟ್ಯಾಕ್ಸ್ ಹಾಕಿದರೆ, ಹೆಚ್ಚು ಆದಾಯ ಬರುವುದಿಲ್ಲ.

ಜ್ಯುಯಲರೀಸ್ ಬಗ್ಗೆ ಮಾನ್ಯ ತಿಮ್ಮಪ್ಪನವರು ಹೇಳಿದರು. ಡೈಮಂಡನ್ನು ಕೆಲವರು ಶ್ರೀಮಂತರ ಕೊಂಡುಕೊಳ್ಳುತ್ತಾರೆ, ಇದರ ಮೇಲೆ 50 ಪರ್ಸೆಂಟ್ ಟ್ಯಾಕ್ಸನ್ನು ಹಾಕಿದರೆ, ಇದರ ಮಾರಾಟ ನಮ್ಮ ರಾಜ್ಯದಲ್ಲಿ ಆಗುವುದಿಲ್ಲ. ಇನ್ನೊಂದು ರಾಜ್ಯದಲ್ಲಿ ಇದರ ಮಾರಾಟವಾಗುತ್ತದೆ. ಇದರಿಂದ ನಮ್ಮ ರಾಜ್ಯದ ಆದಾಯವನ್ನು ಜಾಸ್ತಿಮಾಡಿದಂತಾಗುವುದಿಲ್ಲ. ರೆಫ್ರಿಜರೇಟರ್ಸ್ ಮೇಲೆ ನಾವು ಹೆಚ್ಚು ಟ್ಯಾಕ್ಸ್ ಹಾಕಿದರೂ ಸಹ, ಇದರ ಬಗ್ಗೆ ಸ್ವಲ್ಪ ಮಟ್ಟಿಗೆ ಬೇರೆ ರಾಜ್ಯಗಳಲ್ಲಿರುವ ಟ್ಯಾಕ್ಸನ್ನು ನೋಡಿಕೊಂಡು ನಾವು ಟ್ಯಾಕ್ಸನ್ನು ಹಾಕಬೇಕಾಗುತ್ತದೆ. 10-20 ಪರ್ಸೆಂಟ್ ಟ್ಯಾಕ್ಸನ್ನು ರೆಫ್ರಿಜರೇಟರ್ಸ್ ಮೇಲೆ ಹಾಕಿದರೆ, ಬೇರೆ ರಾಜ್ಯಗಳಿಗೆ ಹೋಗಿ ಇದನ್ನು ಕೊಂಡುಕೊಳ್ಳುತ್ತಾರೆ. ಈ ರೀತಿಯಾಗುವುದರಿಂದ ಕೊಂಡುಕೊಳ್ಳುವವರಿಗೆ ಗಿಟ್ಟುತ್ತದೆ. ಆದ್ದರಿಂದ ನಾವು ಮಿತಿಮೀರಿದ ಟ್ಯಾಕ್ಸನ್ನು ಇವುಗಳ ಮೇಲೆ ಹಾಕುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರು ನಾವು ರೆಫ್ರಿಜರೇಟರ್ಸ್ ಮೇಲೆ ಟ್ಯಾಕ್ಸ್ ಹಾಕಿದರೆ, ಅವರು ಅನಂತಪುರದಿಂದ ಕೊಂಡುಕೊಳ್ಳಬೇಕಾಗುತ್ತದೆ ಎನ್ನುವ ಮಾತನ್ನು ಹೇಳಿದರು. ನಾವು ಅಲ್ಲಿಂದ ತರಲಿಕ್ಕೆ ಬಿಡುವುದಿಲ್ಲ. ಏಕೆಂದರೆ ಅಲ್ಲಿಂದ ಇಲ್ಲಿಗೆ ತರಬೇಕಾದರೆ, ಟ್ರಾನ್ಸ್‌ಪೋರ್ಟ್ ಚಾರ್ಜಸ್ ಎಷ್ಟು ಕೊಡಬೇಕಾಗುತ್ತದೆ, ಅಷ್ಟು ನಮ್ಮ ಟ್ಯಾಕ್ಸ್‌ಗಿಂತ ಜಾಸ್ತಿ ಇದೆ. ಆದಕಾರಣ, ಈ ವ್ಯತ್ಯಾಸ ಏನು ಇದೆ, ನೆರೆ ರಾಜ್ಯದಲ್ಲಿ ಏನು ಟ್ಯಾಕ್ಸ್ ಇದೆ, ನಮ್ಮ ರಾಜ್ಯದಲ್ಲಿ ಏನು ಟ್ಯಾಕ್ಸ್ ಇದೆ, ಇದನ್ನು ನಾವು ಗಮನದಲ್ಲಿಟ್ಟುಕೊಂಡು ಟ್ಯಾಕ್ಸ್ ಹಾಕಬೇಕಾಗುತ್ತದೆ. ನಮ್ಮಷ್ಟಕ್ಕೆ ನಾವೇ ಟ್ಯಾಕ್ಸ್ ಹಾಕಿದರೆ, ಇನ್‌ಕಂ ಜಾಸ್ತಿಯಾಗುವುದಿಲ್ಲ, ಡೈವರ್ಷನ್ ಆಫ್ ಟ್ರೇಡ್ ಆಗಿ, ಆರ್ಥಿಕಸ್ಥಿತಿಯ ಮೇಲೆ ಹಾನಿಯಾಗುವ ಸಂಭವವೂ ಕೂಡ ಉಂಟು.

12 Noon

ಸೈಕಲ್ಸ್ ಮೇಲೆ ನಾವು ಟ್ಯಾಕ್ಸ್ ಜಾಸ್ತಿ ಮಾಡಿಲ್ಲ. . ಜಾಸ್ತಿ ಮಾಡುವ ಪ್ರಪೋಜಲ್ ಇತ್ತು. ಬಡ್ಜೆಟ್ ಚರ್ಚೆಗೆ ಮುನ್ನಣೆ ಕೊಟ್ಟು ಜಾಸ್ತಿ ಮಾಡುವ ವಿಚಾರ ಕೈಬಿಟ್ಟಿದ್ದೇವೆ. ಸ್ಯಾನಿಟರಿ ಫಿಟಿಂಗ್ಸ್ 8 ಪರ್ಸೆಂಟ್ ಇದ್ದುದನ್ನು 10 ಪರ್ಸೆಂಟ್ ಮಾಡಿದೆ. ಲಕ್ಷ್ಯುರಿ ಐಟಂಸ್ ಬಗ್ಗೆ ಏತಕ್ಕೆ ಜಾಸ್ತಿ ಮಾಡಲಿಲ್ಲ ಎಂದು ಮಾನ್ಯ ಸದಸ್ಯರು ಕೇಳಿದರು. ಇದು 8 ಪರ್ಸೆಂಟ್ ಇದ್ದುದನ್ನು 10 ಪರ್ಸೆಂಟ್ ಮಾಡಿದೆ. ಬೇರೆ ರಾಜ್ಯಗಳಲ್ಲಿ 7—8 ಪರ್ಸೆಂಟ್ ಇದೆ. ಆದುದರಿಂದ ಸ್ಯಾನಿಟರಿ ಫಿಟಿಂಗ್ಸ್ ಮೇಲೆ ನಮ್ಮ ರಾಜ್ಯದಲ್ಲಿ ಟ್ಯಾಕ್ಸ್ ಸಾಕಷ್ಟು ಜಾಸ್ತಿ ಇದೆ. ಇದಕ್ಕಿಂತ ಜಾಸ್ತಿ ಮಾಡಿದರೆ ಟ್ರೇಡ್ ಡೈವರ್ಷನ್ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ಬೇಸಿಕ್ ಅಪ್ರೋಚ್‌ನಲ್ಲಿ ಬದಲಾವಣೆ ಮಾಡಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಮಾರ್ಬಲ್‌ನಿಂದ 26 ಸಾವಿರ ರೂಪಾಯಿ ಟ್ಯಾಕ್ಸ್ ಬರುತ್ತದೆ. ಮಾರ್ಬಲ್ ಲಕ್ಷ್ಯುರಿ ಐಟಂ. ಎಷ್ಟು ಜಾಸ್ತಿ ಮಾಡಿದರೂ ಕೂಡ ಆದಾಯ ಜಾಸ್ತಿ ಬರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ಯಾನಿಟರಿ ಫಿಟಿಂಗ್ಸ್ ಮೇಲೆ ಟ್ಯಾಕ್ಸ್ ಜಾಸ್ತಿ ಮಾಡಿದರೆ ಹೊರಗಡೆ ರಾಜ್ಯದಿಂದ ತರುತ್ತಾರೆ ಇಲ್ಲಿ ಕೊಳ್ಳುವುದಿಲ್ಲ ಎನ್ನುವ ಭಯ ವ್ಯಕ್ತಪಡಿಸಿದರು. ಒಂದ ವರ್ಷದಲ್ಲಿ ಎಷ್ಟು ಮನೆ ಕಟ್ಟುತ್ತಾರೆ ? ಎಷ್ಟು ಸ್ಯಾನಿಟರಿ ಫಿಟಿಂಗ್ಸ್ ಪರ್ಚೇಸ್ ಆಗುತ್ತಾ ಇದೆ ಹೇಳಿ. ಎಷ್ಟು ಜನ ಮಹಾರಾಷ್ಟ್ರದಲ್ಲಿ ಹೈದರಾಬಾದ್‌ನಲ್ಲಿ ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ?

ಶ್ರೀ ಎಂ. ವೈ. ಘೋರ್ಪಡೆ.—ಉದಾಹರಣೆಗಾಗಿ ಪ್ಲೇಯಿಂಗ್ ಕಾರ್ಡ್ಸ್ ಸೇಲ್ಸ್ ಟ್ಯಾಕ್ಸ್ ಇನ್‌ಕಂ 71 ಸಾವಿರ ರೂಪಾಯಿ ಇದೆ. ಒಬ್ಬರು ಮ್ಯಾನುಫ್ಯಾಕ್ಚರರ್ ನಮ್ಮ ರಾಜ್ಯದಲ್ಲಿದ್ದಾರೆ, ನಮ್ಮದು 12 ಪರ್ಸೆಂಟ್ ಇದೆ. ಆಂಧ್ರದಲ್ಲಿ 7 ಪರ್ಸೆಂಟ್ ಇದೆ. ಆದುದರಿಂದ ಸಾಕಷ್ಟು ವ್ಯತ್ಯಾಸ ಇದೆ. ಮ್ಯಾಕ್ಸಿಮಂ ಟ್ಯಾಕ್ಸ್ ಹಾಕಿದ್ದೇವೆ. ಜಾಸ್ತಿ ಟ್ಯಾಕ್ಸ್ ಹಾಕಿದರೆ ನಮ್ಮ ಆದಾಯಕ್ಕೆ ಪೆಟ್ಟು ಆಗುತ್ತದೆ. Precious stones, ಮತ್ತು ಮೊಸಾಯಿಕ್ ಟೈಲ್ಸ್ ಬಗ್ಗೆ ಇನ್‌ಕಂ ಬಹಳ ಕಮ್ಮಿ ಇದೆ. ಸೇಲ್ಸ್ ಟ್ಯಾಕ್ಸ್ ಇನ್‌ಕಂ 17 ಸಾವಿರ ರೂಪಾಯಿ ಇದೆ. ಫ್ಲೋರಿಂಗ್ ಮಾಡುವಾಗ ಅದನ್ನೂ ಕಂಟ್ರಾಕ್ಟ್‌ನಲ್ಲಿ ಸೇರಿಸಿರುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ನಿಮಗೆ ಏತಕ್ಕೆ ಇನ್‌ಕಂ ಕಡಿಮೆ ಬರುತ್ತದೆ ಎಂದರೆ ಮ್ಯಾನುಫ್ಯಾಕ್ಚರರ್ ಏನಿದ್ದಾರೆ ಅವರು ಮ್ಯಾನುಫ್ಯಾಕ್ಚರ್ ಮಾಡಿದ ಲೆಕ್ಕ ತಮಗೆ ಕೊಡುವುದಿಲ್ಲ. ಆದುದರಿಂದ ಸೇಲ್ ಆಗಿರುವುದು ಲೆಕ್ಕ ಸಿಕ್ಕುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಐವರಿ ಆರ್ಟಿಕಲ್ಸ್ ಮೇಲೆ 9 ಸಾವಿರ ರೂಪಾಯಿ ಟ್ಯಾಕ್ಸ್ ಬರುತ್ತದೆ. It is not worth raising it. ಇನ್‌ಸೆಕ್ಟಿಸೈಡ್ಸ್‌ಗೆ 2 ಪರ್ಸೆಂಟಿನಿಂದ 3 ಪರ್ಸೆಂಟ್ ಮಾಡಿದ್ದೇವೆ, ಆಂಧ್ರದಲ್ಲಿ 3 ಪರ್ಸೆಂಟ್ ಇದೆ, ತಮಿಳುನಾಡಿನಲ್ಲಿ ಮೂರೂವರೆ ಪರ್ಸೆಂಟ್ ಇದೆ, ಕೇರಳದಲ್ಲಿ ಮೂರೂವರೆ ಪರ್ಸೆಂಟ್ ಇದೆ. ಅದಕ್ಕಿಂತ ಜಾಸ್ತಿ ಮಾಡುವುದಕ್ಕೆ ಬರುವುದಿಲ್ಲ.In the neibouringState it is 3 percent. or three andhalf percent ಟೈರ್ಸ್‌ಗೆ 10 ಪರ್ಸೆಂಟ್ ಇರುವುದನ್ನು 12 ಪರ್ಸೆಂಟ್ ಮಾಡಿದ್ದೇವೆ. ಕೇರಳದಲ್ಲಿ 13 ಪರ್ಸೆಂಟ್, ತಮಿಳ್ನಾಡಿನಲ್ಲಿ 13 ಪರ್ಸೆಂಟ್, ಇದೆ; ವಿಪರೀತ ಜಾಸ್ತಿ ಮಾಡಿದರೆ there is a clear risk of diversion oftrade. Diversion of trade ಆಗದೆ ಇರುವಂತೆ ಎಷ್ಟು ಜಾಸ್ತಿ ಹಾಕುವುದಕ್ಕೆ ಸಾಧ್ಯವೋ ಅಷ್ಟು ಹಾಕಿದ್ದೇವೆ. This is an item which is sensitive of diversion of trade. ಪ್ರೆಷರ್ ಕುಕ್ಕರ್ಸ್‌ಗೆ 6 ಪರ್ಸೆಂಟ್ ಇದ್ದದ್ದನ್ನು 8 ಪರ್ಸೆಂಟ್ ಮಾಡಿದ್ದೇವೆ. ಬೇರೆ ರಾಜ್ಯದಲ್ಲಿ 7 ಪರ್ಸೆಂಟ್ ಇದೆ. ಇದು ಬಡ ಜನರು ಉಪಯೋಗ ಮಾಡುವ ವಸ್ತು ಅಲ್ಲ ಪ್ರೆಷರ್ ಕುಕ್ಕರ್ಸ್‌ಗೆ 8 ಪರ್ಸೆಂಟ್ ಹಾಕಿದರೂ ತಪ್ಪಿಲ್ಲ. ಏರೇಟೆಡ್ ವಾಟರ್ಸ್ ಮೇಲೆ ಹಾಕಿದ್ದ ತೆರಿಗೆಯನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. ಅದು ಬೇಸಿಗೆ ಕಾಲದಲ್ಲಿ ಎಲ್ಲರಿಗೂ ಬೇಕು. ಲಿಕ್ಕರ್ ಮೇಲೆ ಬೇಕಾದಷ್ಟು ಟ್ಯಾಕ್ಸ್ ಹಾಕಲಿಕ್ಕೆ ಅವಕಾಶ ಇದೆ. ಎಷ್ಟೆಷ್ಟು ಹಾಕಲಿಕ್ಕೆ ಸಾಧ್ಯವೋ ಅಷ್ಟು ಹಾಕಿದ್ದೇವೆ. ಲಿಕ್ಕರ್ ಮೇಲೆ ಟ್ಯಾಕ್ಸ್ ಹಾಕುವಾಗ ಎಕ್ಸೈಸ್ ಟ್ಯಾಕ್ಸ್ ಮತ್ತು ಸೇಲ್ಸ್ ಟ್ಯಾಕ್ಸ್ ಇವೆರಡರ ಭಾರ ಎಷ್ಟು ಎಂದು ನೋಡಬೇಕು. ಸೇಲ್ಸ್ ಟ್ಯಾಕ್ಸ್ 6 ಪರ್ಸೆಂಟ್ ಇದೆ. ಬೇರೆ ಲಿಕ್ಕರ್ ಮೇಲೆ 25 ಪರ್ಸೆಂಟ್ ಇದೆ. ಎಕ್ಸೈಸ್ ಡ್ಯೂಟಿ ಜೊತೆಗೆ ಸೇಲ್ಸ್ ಟ್ಯಾಕ್ಸನ್ನೂ ಸೇರಿಸಿ ನೋಡಬೇಕು. ಅರ್‍ಯಾಕ್ ಮೇಲೆ 8 ಆಣೆ ಇದ್ದುದನ್ನು 2 ರೂಪಾಯಿಗೆ ಏರಿಸಿದ್ದೇವೆ. ಬೀರ್‌ಗೆ 1 ಲೀಟರ್‌ಗೆ 65 ಪೈಸೆ ಇದ್ದುದನ್ನು 1 ರೂಪಾಯಿ ಮಾಡಿದ್ದೇವೆ. ಎಕ್ಸ್‌ಪೋರ್ಟ್ ಡ್ಯೂಟಿ, ಬೀರ್‌ಗೂ ಕೂಡ ಜಾಸ್ತಿ ಮಾಡಿದ್ದೇವೆ. 6 ಪೈಸೆ ಇದ್ದುದನ್ನು 25 ಪೈಸೆಗೆ ಏರಿಸಿದ್ದೇವೆ. ಇಲ್ಲಿ ಮ್ಯಾನುಫ್ಯಾಕ್ಚರ್ ಆದ ಬೀರ್ ಬೇರೆ ಬೇರೆ ರಾಜ್ಯಕ್ಕೆ ಹೋಗುತ್ತಿದೆ. ಇಂಡಿಯನ್ ಮೇಡ್ ಲಿಕ್ಕರ್ಸ್ ಎಕ್ಸ್‌ಪೋರ್ಟ್ ಕೂಡ 33 ಪೈಸೆ ಪರ್ ಲೀಟರ್ ಇದ್ದುದನ್ನು 1 ರೂಪಾಯಿಗೆ ಜಾಸ್ತಿ ಮಾಡಿದ್ದೇವೆ. ಎಕ್ಸೈಸ್ ಡ್ಯೂಟಿ ಬೇರೆ ಲಿಕ್ಕರ್ಸ್‌ಗೆ 8 ರೂ. 50 ಪೈಸೆ ಇದ್ದುದನ್ನು 17 ರೂ. ಪರ್ ಲೀಟರ್ ಮಾಡಿದೆ. ಸೇಲ್ಸ್ ಟ್ಯಾಕ್ಸ್ ಎಷ್ಟಿದೆ ಎಂದು ನೋಡಿದರೆ ಸಾಕಷ್ಟು ಟ್ಯಾಕ್ಸ್ ಇದೆ ಎಂದು ಗೊತ್ತಾಗುತ್ತದೆ. ಬೇರೆ ರಾಜ್ಯಗಳಿಗಿಂತ ನಮ್ಮಲ್ಲಿ ಟ್ಯಾಕ್ಸ್ ಜಾಸ್ತಿ ಮಾಡಿದರೆ ಇಂಡಸ್ಟ್ರೀಗ್ ಪೆಟ್ಟು ಆಗುವ ಭಯ ಇದೆ. ಲಿಕ್ಕರ್ ಮೇಲೆ ಟ್ಯಾಕ್ಸ್ ಹಾಕುವಾಗ ನೋಡಿ ಹಾಕಿದ್ದೇವೆ. ಸೇಲ್ಸ್ ಟ್ಯಾಕ್ಸ್ ಮತ್ತು ಎಕ್ಸೈಸ್ ಇನ್‌ಸಿಡೆನ್ಸ್ ಎಷ್ಟಾಗುತ್ತದೆ ಎಂದು ನೋಡಿ ಅದು ಕಡಿಮೆ ಇದೆ

ಯೆಂದು ಹೇಳುವುದಾದರೆ ಅದರ ಕಡೆ ನೋಡುತ್ತೇನೆ. ಬರೇ ಸೇಲ್ಸ್ ಟ್ಯಾಕ್ಸ್ ತೆಗೆದುಕೊಂಡು ಜಾಸ್ತಿ ಮಾಡುವುದಕ್ಕೆ ಸಾಧ್ಯ ಎಂದು ಜನರಲ್ ಸ್ಟೇಟ್‌ಮೆಂಟ್ ಮಾಡಿದರೆ ಅದು ಸರಿ ಹೋಗುವುದಿಲ್ಲ. There are some suggestions made regarding umbrellas. ಮಲೆನಾಡು ಪ್ರದೇಶದಲ್ಲಿ ಮಳೆ ಬರುತ್ತದೆ, ಆದುದರಿಂದ ಅಂಬ್ರೆಲಾಕ್ಕೆ ಕಡಿಮೆ ಮಾಡಿ ಎಂದು ಹೇಳಿದರು. ಮತ್ತು ಮಜಲ್ ಲೋಡಿಂಗ್ ಗನ್ಸ್‌ಗೂ ಮತ್ತು ರಿವಾಲ್ವರ್ಸ್‌ಗೂ ವ್ಯತ್ಯಾಸ ಮಾಡಲಿಕ್ಕೆ ಸಾಧ್ಯ ಇದೆ ಎಂದು ಹೇಳಿದರು. I Will have it examined. ಏನಾದರೂ ರಿಲೀಫ್ ಕೊಡುವುದಕ್ಕೆ ಸಾಧ್ಯ ಇದ್ದರೆ ಕೊಡೋಣ, ಈಗ ಅದನ್ನು ಕೊಡುವುದು ಬೇಡ. ಈಗಾಗಲೇ ಟ್ಯಾಕ್ಸನ್ನು ಅಡ್ವಾನ್ಸ್ ಆಗಿ ಕಲೆಕ್ಟ್ ಮಾಡುತ್ತಿದ್ದೇವೆ. ಈಗ ರಿಲೀಫ್ ಕೊಟ್ಟರೆ ರೀಫಂಡ್ ಮಾಡಬೇಕಾಗುತ್ತದೆ. ಅದನ್ನು ನೋಟಿಫಿಕೇಶನ್ ಮೂಲಕ ಬದಲಾವಣೆ ಮಾಡಲಿಕ್ಕೆ ಆಗುತ್ತದೆ. ಈ ಎರಡು ಐಟಂಗಳ ಬಗ್ಗೆ ಎಗ್ಸಾಮಿನ್ ಮಾಡಿ ರಿಲೀಫ್ ಮಾಡುವುದಕ್ಕೆ ಸಾಧ್ಯ ಇದ್ದರೆ ನೋಟಿಫಿಕೇಷನ್ ಮೂಲಕ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ.--ಮಾನ್ಯ ಕೃಷ್ಣನ್ ಅವರು ಹೇಳಿದರು. ನಾನೂ ಕೂಡ ಹೇಳಿದೆ. ಇವತ್ತಿನ ದಿವಸ ಯಾವುದು ಭೋಗ ವಸ್ತು, ಯಾವುದು ಭೋಗ ವಸ್ತು ಅಲ್ಲ ಎಂದು ಸರಿಯಾಗಿ ಕ್ಲಾಸಿಫೈ ಮಾಡಲು You must review the situ.tion. ಲಕ್ಷ್ಯುರಿ ವಸ್ತುಗಳು ಯಾವುದು ಅಲ್ಲ, ಯಾವುದಕ್ಕೆ ತೆರಿಗೆ ಜಾಸ್ತಿ ಮಾಡಬಹುದು, ಯಾವುದಕ್ಕೆ ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಪ್ರತಿ ವರ್ಷ ಆಯಾ ಕಾಲಕ್ಕೆ ಸರಿಯಾಗಿ ವಿಮರ್ಶೆ ಮಾಡುತ್ತ ಹೋಗಬೇಕಾತ್ತದೆ. ಅದನ್ನು ಮಾಡುತ್ತೀರಾ ?

Sri M. Y. GHORPADE.—I am prepared to discuss these things in the sales tax Advisory Committee. The Hon'ble member is also a Member of that Committee.

The basis of taxation and the scope for improvement is a continuous process and certainly we will discuss it.

Mr. DEPUTY SPEAKER.—The question is :

"That the Karnataka Sales Tax (Amendment) Bill, 1974, be taken into consideration."

The motion was adopted

Clauses 2 to 4

Mr. DEPUTY SPEAKER.—The question is :

"That clauses 2 to 4, both inclusive do stand part of the Bill."

The motion was adopted

Clauses 2 to 4 were added to the Bill.

Clause 1 Etc.

Mr. DEPUTY SPEAKER.—The question is :

"That clause 1, the long Title the Preamble and the enacting formula do stand part of the Bill."

The motion was adopted

(Mr. DEPUTY SPEAKER)

Clause 1, the long Title, the Preamble and the enacting formula were added to the Bill.

Motion to Pass.

Sri M. Y. GHORPADE (Minister for Finance).—I beg to move:

"That the Karnataka Sales Tax (Amendment) Bill, 1974, be passed."

Mr. DEPUTY SPEAKER.—The question is:

"That the Karnataka Sales Tax (Amendment) Bill, 1974, be passed."

The motion was adopted and the Bill was passed.

Mr. DEPUTY SPEAKER.—The House now stands adjourned to meet again at 1-15 P.M. to-day.

The House rose at Twelve Minutes past Twelve of the Clock to reassemble at Fifteen Minutes past One of the Clock.

(Madam Speaker in the Chair)

STARRED QUESTIONS

(to which oral answers were given)

COMPENSATION FOR AREA SUBMERGED UNDER MALAPRABHA PROJECT.

186. Sri J. L. KABADE (Ballolli).—

Will the Minister for Revenue be pleased to state:—

(*a*) whether it is a fact that several cultivators and villagers of the area submerged under the Malaprabha Project lost all their means of livelihood;